ನೀಡಿರುವ ರಾಜ್ಯಪಾಲರ ಭಾಷಣದ ತಿದ್ದುಪಡಿ ಪ್ರಸ್ತಾವದಲ್ಲಿ ಒಂದು ವಾಕ್ಯವನ್ನು ಕೈಬಿಡುವ ಮೂಲಕ ರಾಜ್ಯಪಾಲರ ಭಾಷಣಕ್ಕೆ ಬದಲಾವಣೆಯನ್ನು ಸೂಚಿಸಿರುವುದರಿಂದ ಸದರಿ ತಿದ್ದುಪಡಿ ಸೂಚನಾ ಪತ್ರವನ್ನು ಅಂಗೀಕರಿಸಿರುವುದಿಲ್ಲವೆಂದು ತೀರ್ಪು ನೀಡಿರುತ್ತೇನೆ. ಈಗ ತಾವು ಮಾತನಾಡಿ.

4. ಘನತೆವೆತ್ತ ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾ ನಿರ್ಣಯದ ಮೇಲೆ ಮುಂದುವರೆದ ಚರ್ಚೆ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ (ಮಾನ್ಯ ವಿರೋಧ ಪಕ್ಷದ ನಾಯಕರು) (ರಾಮನಗರ) : ಮಾನ್ಯ ಅಧ್ಯಕ್ಷರೆ, ಈಗ ಸದನದಲ್ಲಿ ನೂರಾರು ಹೊಸ ಸದಸ್ಯರುಗಳು ಬಂದಿದ್ದಾರೆ. ಕಾವೇರಿ ನೀರಿನ ವಿಷಯದಲ್ಲಿ ಇರತಕ್ಕಂಥ ಮಾಹಿತಿಗಳನ್ನು ತಮ್ಮ ಅಪ್ಪಣೆ ಮೇರೆಗೆ ನಮ್ಮ ಸಭಾ ನಾಯಕರು ಮತ್ತು ಕಾನೂನು ಸಚಿವರು ಮೊನ್ನೆ ಚರ್ಚೆ ಮಾಡೋಣ ಎಂದು ಏನು ಹೇಳಿದ್ದಾರೆ, ಆ ಬಗ್ಗೆ ಚರ್ಚೆ ಮಾಡುವ ಸಂದರ್ಭದಲ್ಲಿ ನಾನು ಯಾರನ್ನೂ ಟೀಕೆ ಮಾಡುವುದಿಲ್ಲವೆಂದು ಹೇಳುತ್ತೇನೆ. ನೂತನವಾಗಿ ಬಂದಿರುವಂತಹ ಹಲವಾರು ಸದಸ್ಯರಿಗೆ ಮಾಹಿತಿಗಳು ಇಲ್ಲದಿರುವುದರಿಂದ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡುತ್ತೇನೆ. ಅದಕ್ಕೆ ಯಾರೂ ಅನ್ಯಥಾ ಭಾವಿಸಬಾರದೆಂದು ಮೊದಲೇ ಹೇಳುತ್ತೇನೆ. ಇವತ್ತಿನ ದಿನ ನೂತನ ರಾಜ್ಯ ಸರ್ಕಾರದಲ್ಲಿ ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲೆ ಮಾತನಾಡುವುದಕ್ಕೆ ನನಗೆ ಅವಕಾಶವನ್ನು ಏನು ಕೊಟ್ಟಿದ್ದೀರಿ, ಅದಕ್ಕೆ ಮೊದಲನೆಯದಾಗಿ ತಮಗೆ ನನ್ನ ಗೌರವ ಪೂರ್ವಕವಾದ ವಂದನೆಗಳನ್ನು ಸಲ್ಲಿಸುವುದಕ್ಕೆ ಬಯಸುತ್ತೇನೆ. ಇತ್ತೀಚಿನ ದಿನಗಳಲ್ಲಿ ಗೌರವಾನ್ವಿತ ರಾಜ್ಯಪಾಲರ ಭಾಷಣಗಳು ವಿಧಾನಸಭೆ ಕಲಾಪದಲ್ಲಿ ಒಂದು ಸಂಪ್ರಾದಾಯವೆನ್ನುವ ಭಾವನೆ ಮೂಡತಕ್ಕಂಥ ರೀತಿಯಲ್ಲಿದ್ದು, ರಾಜ್ಯಪಾಲರ ಭಾಷಣದಲ್ಲಿ ಕಾರ್ಯಕ್ರಮಗಳು ನಡೆಯುತ್ತಿದೆ ಎನ್ನುವ ಭಾವನೆ ಕೆಲವರಲ್ಲಿ ಇದೆ ಎಂದು ನನ್ನ ಭಾವನೆ. ಮೊನ್ನೆ 3ನೇ ತಾರೀಖಿನಂದು ಗೌರವಾನ್ವಿತ ರಾಜ್ಯಪಾಲರು ಭಾಷಣವನ್ನು ಏನು ಮಾಡಿದ್ದಾರೆ, ಅದರಲ್ಲಿ ಸರ್ಕಾರದ ಮುಂದಿನ ಐದು ವರ್ಷಗಳ ದಿಕ್ಸೂಚಿ ಇರಬಹುದು ಅಥವಾ ಮೊದಲನೇ ವರ್ಷದ ಕಾರ್ಯಕ್ರಮಗಳು ಯಾವ ರೀತಿ ಇರಬಹುದು, ಇವತ್ತಿನ ರಾಜಕೀಯ ವ್ಯವಸ್ಥೆ ಬಗ್ಗೆ ಜನತೆಯಲ್ಲಿರುವಂತಹ ಹಲವಾರು ರೀತಿಯ ಭಾವನೆಗಳ ಬಗ್ಗೆ ಕೂಡ ಮಾನ್ಯ ರಾಜ್ಯಪಾಲರ ಭಾಷಣದ ಮುಖಾಂತರ ಸರ್ಕಾರ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಹೊಸ ಸರ್ಕಾರ

ರಚನೆಯಾದ ನಂತರ ರಾಜ್ಯಪಾಲರ ಮೊದಲನೇ ಭಾಷಣದಲ್ಲಿ ಹೇಳಿದ್ದಾರೆ. "ರಾಜ್ಯದ ಎಲ್ಲಾ ಜಾತಿ, ಧರ್ಮ ಮತ್ತು ಪ್ರದೇಶಕ್ಕೆ ಸೇರಿದ ಮತದಾರರು ತಮ್ಮ ಮತವನ್ನು ನೀಡಿ ಹೊಸ ಸರ್ಕಾರವನ್ನು ರಚಿಸಲು ಅವಕಾಶ ಮಾಡಿಕೊಟ್ಟಿದ್ದಾರೆ. ಇವರೆಲ್ಲರೂ ಕಟ್ಟಿಕೊಂಡ ಕನಸು ಮತ್ತು ಇಟ್ಟುಕೊಂಡಿರುವ ನಿರೀಕ್ಷೆ ಹುಸಿಯಾಗಲೂ ಬಿಡದೆ ಸಾಕಾರಗೊಳಿಸುವುದು ನನ್ನ ಸರ್ಕಾರದ ಮೊದಲ ಆದ್ಯತೆ." ಎಂದು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಆ ಪ್ರಕಾರ ಜನತೆ ಮತ್ತು ಮತದಾರರ ಬಗ್ಗೆ ಇವರು ಇಟ್ಟುಕೊಂಡಿರುವ ಗೌರವ ಮತ್ತು ದಿಕ್ಸೂಚಿಗಳ ಬಗ್ಗೆ ಕೆಲಸಗಳು ಪ್ರಾರಂಭವಾದರೆ ನಿಜಕ್ಕೂ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಶ್ರೀ ಎನ್.ಚಲುವರಾಯ ಸ್ವಾಮಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳನ್ನು ಕರೆಸುವುದು ಒಳ್ಳೆಯದು.

ಅಧ್ಯಕ್ಷರು : ಬರುತ್ತಾರೆ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ : ಕಾವೇರಿ ವಿಷಯಕ್ಕೆ ಸಂಬಂಧಪಟ್ಟಂತೆ ಮೀಟಿಂಗ್ ಕರೆದಿದ್ದರು. ಅದಕ್ಕೆ ನಾನು ಮೊದಲೇ object ಮಾಡಲಿಲ್ಲ. ಕಾವೇರಿ ವಿಷಯಕ್ಕೆ ಸಂಬಂಧಪಟ್ಟಂತೆ 12ನೇ ತಾರೀಖಿನ ಮೀಟಿಂಗ್‌ನಲ್ಲಿ ಕೆಲವು ವಿಷಯಗಳನ್ನು ಚರ್ಚೆ ಮಾಡುತ್ತಿದ್ದಾರೆ. ಅದಕ್ಕೆ ನಾನು ಬರಲೇಬೇಕು ಎಂದು ಒತ್ತಾಯ ಮಾಡಲಿಲ್ಲ. ಕೇವಲ ಬದಲಾವಣೆ ಅಲ್ಲ. ಮಾನ್ಯ ಮುಖ್ಯಮಂತ್ರಿಗಳು ಬರಲಿಲ್ಲವೆಂದು ಮಾನ್ಯ ಚಲುವರಾಯಸ್ವಾಮಿಯವರು ಹೇಳುತ್ತಿದ್ದರು. ಅವರು ಹೇಳುತ್ತಿದ್ದ ಹಾಗೆ ಮುಖ್ಯಮಂತ್ರಿಯವರು enter ಅಗಿಬಿಟ್ಟಿರು.

ಶ್ರೀ ಸಿದ್ದರಾಮಯ್ಯ : ಏಕೆ ಹಾಗೆ ಆಗುತ್ತದೆಂದರೆ, ಒಳ್ಳೆಯದಾಗಲಿ ಎಂದು ಅವರೂ ಬಯಸುತ್ತಿದ್ದಾರೆ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ :- ಮಾನ್ಯ ಅಧ್ಯಕ್ಷರೆ, ಕೇವಲ ಬದಲಾವಣೆಯಲ್ಲ, ಎಲ್ಲರ ಕಣ್ಣಿಗೆ ಕಾಣುವಂಥ ಬದಲಾವಣೆಯನ್ನು ತರುವುದು ನನ್ನ ಸರ್ಕಾರದ ಉದ್ದೇಶವೆನ್ನುವಂಥದ್ದು ಏನು ಇದೆ, ನಾನು ಆ ಪದಗಳನ್ನು ಮೆಚ್ಚಿಕೊಳ್ಳುತ್ತೇನೆ, ಆ ಪದಗಳು ಅನುಷ್ಠಾನಕ್ಕೆ ಬಂದರೆ ಬಹಳ ಸಂತೋಷ. ಇದರಿಂದ ರಾಜ್ಯದ ಜನರಿಗೆ ಒಳಿತಾಗುತ್ತೆಂಬುದು ನನ್ನ ಭಾವನೆಯಾಗಿದೆ. ನಂತರ ಬಹುಭಾಷೆ, ಬಹುಸಂಸ್ಕೃತಿ, ಬಹುಧರ್ಮ, ಈ ರಾಜ್ಯದ ನೆಲೆವೀಡು, ಸೌಹಾರ್ದಯುತ ಬಾಳ್ವೆ ಇಲ್ಲಿನ ಸಹಜ ಜೀವನಕ್ರಮ ಇದೆಲ್ಲವನ್ನು ಹೇಳಿದ್ದಾರೆ. ಮತ್ತೆ ಇನ್ನೊಂದು ವಿಷಯವನ್ನು ಪ್ರಸ್ತಾಪ ಮಾಡಿರುವುದೇನೆಂದರೆ, ಇತ್ತೀಚಿನ ಕೆಲವು ವರ್ಷಗಳಲ್ಲಿ ರಾಜ್ಯ ಕಳೆದುಕೊಳ್ಳುತ್ತಾ ಬಂದಿರುವುದು ವಿಷಾದನೀಯ ಬೆಳವಣಿಗೆ, ಅದರಂತೆ ಹೆಮ್ಮೆ ಪಡುವಂಥ ಈ ಅನನ್ಯತೆ ಏನೆಂದರೆ "ಕರ್ನಾಟಕ

ಬಹುಭಾಷೆ, ಬಹುಸಂಸ್ಕೃತಿ, ಮತ್ತು ಬಹುಧರ್ಮಗಳ ನೆಲೆವೀಡು, ಸೌಹಾರ್ದಯುತ ಬಾಳ್ವೆ ಇಲ್ಲಿನ ಸಹಜ ಜೀವನಕ್ರಮ, ಆದರೆ ಹೆಮ್ಮೆ ಪಡುವಂಥಹ ಈ ಅನನ್ಯತೆಯನ್ನು ಇತ್ತೀಚಿನ ಕೆಲವು ವರ್ಷಗಳಲ್ಲಿ ರಾಜ್ಯ ಕಳೆದುಕೊಳ್ಳುತ್ತಾ ಬಂದಿರುವುದು ವಿಷಾದನೀಯ ಬೆಳೆವಣಿಗೆ, ಇದಕ್ಕೆ ಕಾರಣಗಳನ್ನು ಹುಡುಕಿ, ಹೊಣೆಗಾರರನ್ನು ಗುರುತಿಸಿ ದೋಷಾರೋಪ ಮಾಡುವುದರ ಬದಲು ಆಗಿರುವ ಹಾನಿಯನ್ನು ಮೊದಲು ಸರಿಪಡಿಸಬೇಕಾಗಿದೆ. ಇತರರು ನೋಡಿ ಹೆಮ್ಮೆ ಪಡುವಂತಿದ್ದ ಕರ್ನಾಟಕದ ಅಸ್ಮಿತೆಯನ್ನು ಪುನರ್‌ಸ್ಥಾಪನೆ ಮಾಡಬೇಕಾಗಿದೆ. ರಾಜ್ಯದ ಜನತೆ ಶಾಂತಿ ಮತ್ತು ನೆಮ್ಮದಿಯಿಂದ ಬಾಳುವಂತಹ ಸಾಮಾಜಿಕ ವಾತಾವರಣವನ್ನು ನಿರ್ಮಾಣ ಮಾಡಬೇಕಾಗಿದೆ." ಇದಕ್ಕೆ ನನ್ನ ಸಹಮತವೂ ಇದೆ. ಆದರೆ ನಾನು ಇದನ್ನು ಏಕೆ ಪ್ರಾರಂಭಿಕ ಹಂತದಲ್ಲಿ ಹೇಳಿದ್ದೇನೆಂದರೆ, ರಾಜ್ಯಪಾಲರ ಭಾಷಣಗಳು ಇತ್ತೀಚಿನ ದಿವಸಗಳಲ್ಲಿ ಒಂದು ರೀತಿಯ ಸಂಪ್ರದಾಯ. ಪ್ರತಿ ವರ್ಷ ಭಾಷಣವನ್ನು ಮಾಡಿಸುವಂಥದ್ದು ಇದೆಯೆಂಬ ಭಾವನೆ ಇದೆ. ಇದನ್ನು ಏತಕ್ಕೆ ಹೇಳಿದೆನೆಂದರೆ, 2011ರಲ್ಲಿ ಇಂದಿನ ರಾಜ್ಯಪಾಲರೇ ಆಗಿನ ರಾಜ್ಯಪಾಲರಾಗಿದ್ದರು. ಅವತ್ತಿನ ಸರ್ಕಾರದ ಬಗ್ಗೆ" ನನ್ನ ಸರ್ಕಾರ ಜನತೆಗೆ ಉತ್ತಮ ಹಾಗೂ ದಕ್ಷ ಆಡಳಿತ ಕೊಡಲು ಕಳೆದ ಎರಡೂವರೆ ವರ್ಷಗಳಿಂದ ಶ್ರಮಿಸುತ್ತಿದೆ." "ಕಳೆದ ಒಂದು ವರ್ಷದಲ್ಲಿ ನಾವು ಅನೇಕ ಸವಾಲುಗಳನ್ನು ಎದುರಿಸಿದ್ದೇವೆ. ನಾವು ನಿರ್ಮಾಣ ಮಾಡುತ್ತಿರುವ ಆಧುನಿಕ ಕರ್ನಾಟಕ ರಾಜ್ಯದ ಬೆಳೆವಣಿಗೆಗೆ ಹೊಸ ರೂಪವನ್ನು ಕೊಟ್ಟಿದ್ದೇವೆ. ಅಭಿವೃದ್ಧಿಯೇ ನಮ್ಮ ಆಡಳಿತ ಮಂತ್ರ" ಇದು 2011ರಲ್ಲಿ ಮಾನ್ಯ ರಾಜಪಾಲರು ಮಾಡಿರುವಂಥ ಭಾಷಣ. 2012ರಲ್ಲಿ "ನನ್ನ ಸರ್ಕಾರವು ಜನತೆಗೆ ಅತ್ಯಂತ ಫಲಪ್ರದ ಮತ್ತು ದಕ್ಷ ಆಡಳಿತವನ್ನು ಕೊಡಲು ಕಳೆದ ಮೂರೂವರೆ ವರ್ಷಗಳಿಂದ ಅವಿರತವಾಗಿ ಶ್ರಮಿಸುತ್ತಿದೆ." "ಕಳೆದ ಒಂದು ವರ್ಷದಲ್ಲಿ ಹಲವಾರು ಅಡ್ಡಿ–ಆತಂಕಗಳನ್ನು ನಾವು ಯಶಸ್ವಿಯಾಗಿ ದಾಟಿ ಮುಂದೆ ಬಂದಿದ್ದೇವೆ. ಮುನ್ನೋಟ 2020ರ ಮೂಲಕ ನಾವು ನಿರ್ಮಿಸುತ್ತಿರುವ ಆಧುನಿಕ ಕರ್ನಾಟಕದ ಅಭಿವೃದ್ಧಿಯ ಗತಿ ವೃದ್ಧಿಸಲು ನಾವು ಗಂಭೀರ ಪ್ರಯತ್ನಗಳನ್ನು ಮಾಡಿದ್ದೇವೆ." ಇದು 2012ರಲ್ಲಿ ಮಾನ್ಯ ರಾಜ್ಯಪಾಲರು ಮಾಡಿರುವ ಭಾಷಣ. 2013ರಲ್ಲಿ.. ..

ಶ್ರೀ ವಿ.ಶ್ರೀನಿವಾಸ ಪ್ರಸ್ತಾದ್ : ಮಾನ್ಯ ಅಧ್ಯಕ್ಷರೆ,.. .

ಶ್ರೀ ಹೆಚ್.ಡಿ. ಕುಮಾರಸ್ವಾಮಿ : ಮಾನ್ಯ ಶ್ರೀನಿವಾಸ ಪ್ರಸಾದ್‌ರವರೆ, ತಾವು ಹೇಳುವುದನ್ನು ಆಮೇಲೆ ಹೇಲಬಹುದು. ಒಂದು ನಿಮಿಷ ಅದಕ್ಕೆ ನಾನು ಹೇಳುತ್ತಿದ್ದೇನೆ. ಸರ್ಕಾರಗಳು ಬೇರೆ, ನಾನು ಇದನ್ನು ಏಕೆ ಪೂರಕವಾಗಿ

ಹೇಳುತ್ತಿದ್ದೇನೆಂದರೆ, ಮಾನ್ಯ ಮಂತ್ರಿಯವರಿಗೆ ಹೇಳಬಯಸುತ್ತೇನೆ. ಅವರ re-action ಅನ್ನು ಅವರು ಆಮೇಲೆ ಕೊಡಲಿ. ನಾನು ಏತಕ್ಕೆ ಹೇಳುತ್ತಿದ್ದೇವೆಂದರೆ, ಈಗಿನ ಸರ್ಕಾರ ಇದೇ ರಾಜ್ಯಪಾಲರ ಮುಖಾಂತರ "ಇತ್ತೀಚಿನ ಕೆಲವು ವರ್ಷಗಳಲ್ಲಿ ರಾಜ್ಯ ಕಳದುಕೊಳ್ಳುತ್ತಾ ಬಂದಿರುವುದು ವಿಷಾದನೀಯ. ನಮ್ಮ ಸೌಹಾರ್ದತೆ, ಬಹುಸಂಸ್ಕೃತಿ" ಇತ್ತೀಚಿನ ದಿವಸಗಳಲ್ಲಿ ಎಂದರೆ ಯಾವ ವರ್ಷಗಳು? ಇಲ್ಲಿ ಸಮ್ಮಿಶ್ರ ಸರ್ಕಾರ 2004ನೇ ಇಸವಿಯಲ್ಲಿ ಬಂದಿರುವುದಂಥದ್ದು. ಅದಕ್ಕಿಂತ ಮುಂಚೆ ಅಂದರೆ 1999ನೇ ಇಸವಿಯಲ್ಲಿ ಕಾಂಗ್ರೆಸ್ ಸರ್ಕಾರವಿತ್ತು. ನಾನು ಈ ವಿಷಯವನ್ನು ಮಾನ್ಯ ಮುಖ್ಯಮಂತ್ರಿಯವರಿಗೆ ಜ್ಞಾಪಿಸಲು ಬಯಸುತ್ತೇನೆ. 1999–2004ರ ಸರ್ಕಾರದ ಬಗ್ಗೆ ಸಾರ್ವಜನಿಕ ಸಭೆಗಳಲ್ಲಿ ಸರ್ಕಾರದ ನಡವಳಿಕೆಗಳ ಬಗ್ಗೆ ಯಾವ ರೀತಿಯಲ್ಲಿ ಪ್ರಕಟ ಮಾಡಿದ್ದರೋ, ಮುಂದೆ ಸರ್ಕಾರ ಬಂದರೆ ಯಾವ ರೀತಿಯಾಗಿ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದ್ದನ್ನು, ಇದರಲ್ಲಿ ಸೇರಿಸಿಕೊಂಡಿದ್ದಾರ? ಇತ್ತೀಚಿನ ಕೆಲವು ವರ್ಷಗಳು ಎಂದು ಏನು ಇದೆ. ಆ ಸರ್ಕಾರದ ನಡವಳಿಕೆಯನ್ನು ಇದರಲ್ಲಿ ಸರಿಪಡಿಸಿಕೊಳ್ಳುವುದಕ್ಕೆ ಸೇರಿಸಿಕೊಂಡಿದ್ದಾರೆಯೇ? ಎನ್ನುವುದಕ್ಕೋಸ್ಕರ ಇದನ್ನು ಹೇಳುತ್ತಿದ್ದೇನೆ. ಎಲ್ಲಾ ಸರ್ಕಾರಗಳು ಬಂದಾಗ ಮಾನ್ಯ ರಾಜ್ಯಪಾಲರಿಂದ ಭಾಷಣವನ್ನು ಮಾಡಿಸುವಂಥದ್ದು ಸಂಪ್ರದಾಯವಾಗಿದೆಯೆನ್ನುವುದಕ್ಕೆ ನಾನು ಹೇಳುತ್ತಿದ್ದೇನೆ. 2012ರಲ್ಲೂ ಅದನ್ನೇ ಹೇಳುತ್ತಾರೆ. "ಕಾನೂನು ಮತ್ತು ಸುವ್ಯವಸ್ಥೆಯು ಅತ್ಯುತ್ತಮವಾಗಿದೆ ಮತ್ತೆ ರಾಜ್ಯದಲ್ಲಿ ಯಾವುದೇ ಕೋಮು ಸಂಘರ್ಷಣೆ, ಘಟನೆಗಳು ನಡೆದಿರುವುದಿಲ್ಲ." ಇದು 2013ರಲ್ಲಿ ಮಾಡಿರುವ ಭಾಷಣ. ನಾನು ಏಕೆ ಈ ವಿಷಯಗಳನ್ನು ಪ್ರಸ್ತಾಪ ಮಾಡಿದ್ದೇನೆಂದರೆ, ಸದನದಲ್ಲಿ ಯಾವುದೇ ಸರ್ಕಾರ ಬರಲಿ, ರಾಜ್ಯಪಾಲರ ಭಾಷಣವನ್ನು ಮಾಡಿಸಬೇಕಾದರೆ, ಸರ್ಕಾರದ ಕಾರ್ಯಕ್ರಮಗಳು ಮುಂದಿನ 5 ವರ್ಷಗಳಲ್ಲಿ ರಾಜ್ಯದಲ್ಲಿರುವ ಸಮಸ್ಯೆಗಳ ಬಗ್ಗೆ, ಈ ನಾಡಿನಲ್ಲಿ ಆಗಿರುವಂಥ ಹಲವಾರು ಲೋಪದೋಷಗಳ ಬಗ್ಗೆ, ಯಾವ ರೀತಿಯಾಗಿ ಬದಲಾವಣೆಗಳನ್ನು ತರುತ್ತೇವೆನ್ನುವಂಥದ್ದನ್ನು ಪ್ರಸ್ತಾಪ ಮಾಡುವಂಥದ್ದು ಸಹಜ. ಇಲ್ಲಿ ಪ್ರಶ್ನೆ ಇರುವಂಥದ್ದು ಹಿಂದಿನ ಸರ್ಕಾರಗಳು ಏನು ಮಾಡಿವೆ, ಆ ಸರ್ಕಾರಗಳ ತಪ್ಪು–ಒಪ್ಪುಗಳಿಗೆ ಜನರು ತೀರ್ಮಾನವನ್ನು ಕೊಟ್ಟು ಬಿಟ್ಟಿರುತ್ತಾರೆ. ಇವತ್ತು ನಾವು ಮಾನ್ಯ ರಾಜ್ಯಪಾಲರ ಮುಖಾಂತರ ಭಾಷಣವನ್ನು ಮಾಡಿಸಬೇಕಾದರೆ, ಅದಕ್ಕೆ ಒಂದು ಉತ್ತಮವಾದಂಥ ರೀತಿಯಲ್ಲಿ ಜನರಲ್ಲೂ ಭಾವನೆ ಮೂಡಬೇಕಾಗುತ್ತದೆ. ಇವತ್ತು ಈ ಸರ್ಕಾರ ಒಂದು ಉತ್ತಮವಾದಂಥ ಮಾರ್ಗದಲ್ಲಿ ಹೆಜ್ಜೆ ಇಟ್ಟಿದ್ದಾರೆಂಬ ಭಾವನೆಯನ್ನು

ಜನಸಾಮಾನ್ಯರಲ್ಲೂ ಮೂಡಿಸಬೇಕಾಗಿತ್ತದೆನ್ನುವ ದೃಷ್ಟಿಯಿಂದ ಇವತ್ತು ರಾಜ್ಯಪಾಲರ ಭಾಷಣಗಳು ಕೇವಲ ವಿಧಾನಸಭೆಯ ಕಲಾಪದ ಸಂಪ್ರದಾಯಗಳಿಗಷ್ಟೆ ಎನ್ನುವ ಮಟ್ಟಕ್ಕೆ ಇಳಿಯಬಾರದೆಂಬುದು ನನ್ನ ಅಭಿಪ್ರಾಯವಾಗಿದೆ. ಅದು ಹಗರಣಗಳ ಬಗ್ಗೆ, ಭ್ರಷ್ಟಾಚಾರಗಳ ಬಗ್ಗೆ, ನಾನು ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಮಾನ್ಯ ಬಸವರಾಜ ರಾಯರೆಡ್ಡಿಯವರು ನಿನ್ನೆ ವಂದನಾ ನಿರ್ಣಯವನ್ನು ಮಂಡನೆ ಮಾಡಬೇಕಾದರೆ, ಹಲವಾರು ಭ್ರಷ್ಟಾಚಾರದ ವ್ಯವಸ್ಥೆಯಲ್ಲಿ ಈ ದೇಶ ಏನಾಗಿದೆಯೆಂಬುದನ್ನು ಹೇಳಿದ್ದಾರೆ. ಮತ್ತೆ ಗೌರವಾನ್ವಿತ ಮಾಜಿ ಅಧ್ಯಕ್ಷರು ನಿನ್ನೆ ಸಭೆಯಲ್ಲಿ ಕೊಟ್ಟಿರುವಂಥ ಪ್ರತಿಕ್ರಿಯೆಯನ್ನು ನಾನು ಗಮನಿಸಿದ್ದೇನೆ. ನಾವು ಭ್ರಷ್ಟಾಚಾರದ ಬಗ್ಗೆ ಭಾಷಣ ಮಾಡುವಂಥದ್ದನ್ನು ಕೇಳುವುದಕ್ಕೆ ಚೆನ್ನಾಗಿರುತ್ತದೆ, ಹಿತವಾಗಿರುತ್ತದೆ. ಆದರೆ ಯಾವ್ಯಾವ ರೀತಿಯಲ್ಲಿ ಈ ಸಮಾಜ ಹೋಗುತ್ತದೆ, ನಾವು ಮೌಲ್ಯಗಳನ್ನು ಎತ್ತಿ ಹಿಡಿಯುತ್ತೇವೆಂದು ಹೇಳಿದಂಥ ದಿನಗಳಲ್ಲಿ ಅದು ಇನ್ನೂ ಕುಸಿಯುತ್ತದೆಯೇ ಹೊರತು ಎತ್ತಿ ಹಿಡಿಯುವಂಥದ್ದನ್ನು ನಾವು ಈ ಒಂದು ವ್ಯವಸ್ಥೆಯಲ್ಲಿ ಕಾಣುವುದಕ್ಕೆ ಸಾಧ್ಯವಾಗುತ್ತಿಲ್ಲ. ಆದ್ದರಿಂದ ಇಲ್ಲಿ "ಕೆಲವು ವರ್ಷಗಳಲ್ಲಿ ಆಗಿರುವಂಥ ಭ್ರಷ್ಟಾಚಾರದ ಹಗರಣಗಳ ಬಗ್ಗೆ ದೇಶದ ಎದುರು ಕರ್ನಾಟಕ ರಾಜ್ಯ ತಲೆ ತಗ್ಗಿಸುವಂತಾಗಿದೆ" ಎಂದು ಹೇಳಿದ್ದಾರೆ. ಕಳೆದ ಚುನಾವಣೆಯಲ್ಲೂ ಕೆಲವು ಪ್ರಮುಖ ನಾಯಕರು ಬಂದು ಭಾಷಣ ಮಾಡಿದ ಸಂದರ್ಭದಲ್ಲೂ ಇದೇ ಪ್ರಮುಖ ವಿಷಯವಾಗಿತ್ತು. ಅದರಿಂದಲೇ ಇವತ್ತು ಕರ್ನಾಟಕದಲ್ಲಿ ತಮ್ಮ ಈ ವಿಷಯವನ್ನು ಏನು ಪ್ರಸ್ತಾಪ ಮಾಡಿದ್ದೀರಿ. ಅದಕ್ಕೆ ಜನರು ನಿಮ್ಮನ್ನು ಆಯ್ಕೆ ಮಾಡಿದ್ದಾರೆ, ಸಂತೋಷ. ಇವತ್ತು ಈ ಭ್ರಷ್ಟಾಚಾರದ ವಿಷಯದಲ್ಲಿ ರಾಜ್ಯ ಮತ್ತು ದೇಶದ ಮಟ್ಟದಲ್ಲಿ ಯಾವ್ಯಾವ ರೀತಿಯ ಪ್ರಕರಣಗಳು ಇವೆ. ಅದನ್ನು ಚರ್ಚೆ ಮಾಡುವಂಥದ್ದು ಅನವಶ್ಯಕ. ಆದರೆ ಭ್ರಷ್ಟಾಚಾರದ ವಿಷಯದಲ್ಲಿ ತಲೆ ತಗ್ಗಿಸುವಂಥ ವಿಚಾರವನ್ನು ಸರಿಪಡಿಸಿ, ಈ ರಾಜ್ಯಕ್ಕೆ ಹಿಂದೆ ಇದ್ದಂಥ ಉತ್ತಮವಾದಂಥ ಕೀರ್ತಿ, ಉತ್ತಮವಾದಂಥ ರೀತಿಯಲ್ಲಿ ಆಡಳಿತ ನಿರ್ವಹಣೆ ಮಾಡುತ್ತಾರೆಂಬ ಹೆಸರು ಏನು ಇತ್ತು ಅದನ್ನು ಇವತ್ತು ಪುನರ್ ಪ್ರತಿಷ್ಠಾಪನೆ ಮಾಡುವಂಥದ್ದಕ್ಕೆ ಮಾನ್ಯ ಮುಖ್ಯಮಂತ್ರಿಯವರು ಬದ್ಧರಾಗಿದ್ದಾರೆನ್ನುವಂಥದ್ದನ್ನು ಇವತ್ತು ಮಾಧ್ಯಮಗಳಲ್ಲಿ ಗಮನಿಸಿದ್ದೇನೆ. ಅದೇ ರೀತಿಯಲ್ಲಿ ಒಳ್ಳೆಯದಾಗಲಿ ಎಂದು ಹಾರೈಸುತ್ತೇನೆ. ಇನ್ನು ಇಲ್ಲಿ ಪ್ರಮುಖವಾದಂಥ ವಿಷಯಗಳೆಂದರೆ, ಮಾನ್ಯ ಮುಖ್ಯಮಂತ್ರಿಯವರು ಪ್ರಮಾಣವಚನವನ್ನು ಸ್ವೀಕಾರ ಮಾಡಿದ ದಿವಸದಂದು ಬಸವ ಜಯಂತಿ ಹಬ್ಬವೂ ಇತ್ತು. ಅವತ್ತು ಈ ರಾಜ್ಯದ ಜನತೆಗೆ ಹಲವಾರು ರೀತಿಯ

ಕಾರ್ಯಕ್ರಮಗಳನ್ನು ಏಕಾಂಗಿಯಾಗಿ ಘೋಷಣೆ ಮಾಡಿದರು. ಅದು ಆ ಒಂದು ವರ್ಗದ ಜನತೆಗೆ ಇರುವಂಥ ಸಮಸ್ಯೆಗಳಿಗೆ, ಅವರಲ್ಲಿರುವಂಥ ಕಾಳಜಿ ಏನೆಂಬುದನ್ನು ನಾವು ಅರ್ಥ ಮಾಡಿಕೊಳ್ಳುತ್ತೇವೆ. ಅವರು ಪ್ರಾರಂಭದಲ್ಲೇ ಒಂದು ಕ್ಷಣವನ್ನೂ ವ್ಯರ್ಥ ಮಾಡದೇ ಈ ರಾಜ್ಯದಲ್ಲಿ ಧ್ವನಿ ಇಲ್ಲದೇ ಇರುವಂಥ ವರ್ಗದ ಜನತೆ ಏನು ಇದ್ದಾರೆ, ಅವರಿಗೆ ತಕ್ಷಣ ಕಾರ್ಯಕ್ರಮಗಳನ್ನು ಕೊಡುವಂಥದ್ದು, ಅವರಿಗೆ ಆತ್ಮಸ್ಥೈರ್ಯವನ್ನು ತುಂಬಬೇಕೆಂಬ ಹಿನ್ನೆಲೆಯಲ್ಲಿ ಮಾಡಿದ್ದಾರೆನುವಂಥದ್ದು ನನ್ನ ಅಭಿಪ್ರಾಯವಾಗಿದೆ. ಅದು ಒಂದು ರೂ.ಗೆ ಒಂದು ಕೆ.ಜಿ.ಅಕ್ಕಿಯನ್ನು ಕೊಡುವಂಥದ್ದು ಇರಬಹುದು. ಇದರ ಜೊತೆಯಲ್ಲಿ ಅಲ್ಪಸಂಖ್ಯಾತರ ನಿಗಮ, ದಲಿತ ಸಮಾಜಗಳ ಅಂಬೇಡ್ಕರ್ ನಿಗಮದಲ್ಲಿ ಪಡೆದಿರುವಂಥ ಸಾಲವಿರಬಹುದು, ಹಿಂದುಳಿದ ವರ್ಗಗಳ ಜನತೆ ಮಾಡಿರುವಂಥ ಸಾಲವಿರಬಹುದು. ಇದರ ಜೊತೆಯಲ್ಲಿ ಭಾಗ್ಯಜ್ಯೋತಿ ಯೋಜನೆಯಡಿಯಲ್ಲಿ ಬಡವರಿಗೆ ಕೊಡುವಂಥ ಉಚಿತ ವಿದ್ಯುಚ್ಛಕ್ತಿ, ಇದನ್ನೂ ಮನ್ನಾ ಮಾಡಿರುವಂಥದ್ದು ಇವೆಲ್ಲವೂ ಉತ್ತಮವಾದಂಥ ಕಾರ್ಯಕ್ರಮಗಳಾಗಿವೆ. ಆ ಕಾರ್ಯಕ್ರಮಗಳನ್ನು ಘೋಷಣೆ ಮಾಡಿರುವುದಕ್ಕೆ ನಾನು ಅವರನ್ನು ಅಭಿನಂದಿಸುತ್ತೇನೆ. ಒಂದು ರೂಪಾಯಿಗೆ ಒಂದು ಕೆ.ಜಿ.ಅಕ್ಕಿ ಕೊಡುವ ಯೋಜನೆಯನ್ನು ಜೂನ್ ತಿಂಗಳಿಂದ ಜಾರಿಗೆ ತರಬೇಕೆಂದಿದ್ದರು. ಆದರೆ ಅದಕ್ಕಿರುವ ಹಲವಾರು ರೀತಿಯ ಸಮಸ್ಯೆಗಳು ನಮಗೂ ಅರ್ಥವಾಗುತ್ತದೆ. ನಾನು ಸಭಾನಾಯಕರಿಗೆ ತಮ್ಮ ಮುಖಾಂತರ ಮನವಿ ಮಾಡುತ್ತೇನೆ, ಬಿ.ಪಿ.ಎಲ್. ಕಾರ್ಡುಗಳಲ್ಲಿ ಲೋಪದೋಷಗಳಿದ್ದು, ಇವತ್ತೂ ಸಹ ಹಲವಾರು ಹಳ್ಳಿಗಳಲ್ಲಿ ಬಿ.ಪಿ.ಎಲ್. ಕಾರ್ಡ್ ಯಾವ ಫಲಾನುಭವಗಳಿಗೆ ದೊರಕಬೇಕೋ ಅವರಿಗೆ ದೊರಕದೇ ಇರುವುದನ್ನು ನಾವು ಕಾಣುತ್ತಿದ್ದೇವೆ. ನಾವು ಹಲವಾರು ಹಳ್ಳಿಗಳಿಗೆ ಭೇಟಿ ಕೊಟ್ಟಾಗ ನೋಡಿದಂತೆ ಬಿ.ಪಿ.ಎಲ್. ಕಾರ್ಡಿನ ವ್ಯವಸ್ಥೆಯಲ್ಲಿ ಹಲವಾರು ಲೋಪದೋಷಗಳಿವೆ. ಅವರು ಒಂದು ಒಳ್ಳೆಯ ಉದ್ದೇಶದಿಂದ ಈ ಕಾರ್ಯಕ್ರಮವನ್ನು ಜಾರಿಗೆ ತರಬೇಕೆಂದಿದ್ದಾರೆ. ಧ್ವನಿ ಇಲ್ಲದಿರುವಂಥ ದರಿದ್ರ ಬಡವನಿಗೆ ಅನ್ಯಾಯವಾಗದ ರೀತಿಯಲ್ಲಿ ಇದು ತಲುಪಬೇಕು ಎನ್ನುವುದನ್ನು ಸದನದ ಎಲ್ಲ ಸದಸ್ಯರೂ ಒಪ್ಪಿಕೊಳ್ಳಬಹುದು. ಆದ್ದರಿಂದ ಮೊದಲು, ಬಿ.ಪಿ.ಎಲ್. ಕಾರ್ಡಿನ ವ್ಯವಸ್ಥೆಯಲ್ಲಿರುವ ಲೋಪದೋಷಗಳನ್ನು ಸರಿಪಡಿಸುವುದರ ಮುಖಾಂತರ, ಮುಖ್ಯಮಂತ್ರಿಗಳೇ ಹೇಳಿರುವ ರೀತಿಯಲ್ಲಿ "ಸರ್ವರಿಗೂ ಸಮಪಾಲು, ಸರ್ವರಿಗೂ ಸಮಬಾಳು" ಎನ್ನುವಂತೆ ಎಲ್ಲರಿಗೂ ದೊರಕಬೇಕು. ಈ ಲೋಪದೋಷಗಳನ್ನು ಸರಿಪಡಿಸಲು ಅಧಿಕಾರಿಗಳಿಗೆ

ಸೂಚನೆ ಕೊಟ್ಟು ಬಡವರಿಗೆ ಆಗಿರುವ ಅನ್ಯಾಯವನ್ನು ಸರಿಪಡಿಸಬೇಕು ಎಂದು ಮುಖ್ಯಮಂತ್ರಿಗಳಿಗೆ ತಮ್ಮ ಮುಖಾಂತರ ಮನವಿ ಮಾಡುತ್ತೇನೆ. ಅದೇ ರೀತಿಯಲ್ಲಿ, ನಾನು ಮತ್ತೊಂದು ವಿಷಯ ಪ್ರಸ್ತಾಪ ಮಾಡುವುದೇನೆಂದರೆ, ಕೆಲವು ಕಡೆ ಚೆನ್ನಾಗಿ ಮಳೆಯಾಗಿದೆ, ಇನ್ನೂ ಮಳೆಯಾಗುತ್ತಿದೆ. ಹಾಗಾಗಿ ನಮ್ಮ ರೈತರು ಬಿತ್ತನೆ ಮಾಡುವಂಥ ಹುರುಪಿನಲ್ಲಿದ್ದಾರೆ. ಉತ್ತರ ಕರ್ನಾಟಕ ಭಾಗದಿಂದ ಕೆಲವು ರೈತರು ದೂರವಾಣಿ ಮುಖಾಂತರ ನನ್ನ ಬಳಿ ಮಾತನಾಡಿದ್ದಾರೆ. ಕಳೆದ ಬಿ.ಜೆ.ಪಿ. ಸರ್ಕಾರದಲ್ಲಿ ಯಡಿಯೂರಪ್ಪನವರು ಸರ್ಕಾರದ ಗಮನ ಸೆಳೆದ ಹಿನ್ನೆಲೆಯಲ್ಲಿ ಜಗದೀಶ್ ಶೆಟ್ಟರ್‌ರವರು ರೈತರ ಸಾಲ ಮನ್ನಾ ಮಾಡುವಂಥ ನಿರ್ಧಾರವನ್ನು ಘೋಷಣೆ ಮಾಡಿದರು. ಆದರೆ ಅದರ 3,500 ಕೋಟಿ ರೂಪಾಯಿ ಹಣ ಸಂಪೂರ್ಣವಾಗಿ ಸರ್ಕಾರದಿಂದ ಬಿಡುಗಡೆಯಾಗಲಿಲ್ಲ. ಮೊದಲ ಹಂತದಲ್ಲಿ 500 ಕೋಟಿ ರೂಪಾಯಿ ಬಿಡುಗಡೆ ಮಾಡಿದ್ದಾರೆ, ನಂತರ 400 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದು, ಒಟ್ಟು 900 ಕೋಟಿ ರೂಪಾಯಿಗಳು ಬಿಡುಗಡೆಯಾಗಿದೆ ಎಂದು ಸಹಕಾರಿ ಸಚಿವರು ಮೇಲ್ಮನೆಯಲ್ಲಿ ಹೇಳಿರುವುದು ಮಾಧ್ಯಮಗಳಲ್ಲಿ ವರದಿಯಾಗಿ-ರುವುದನ್ನು ನಾನು ಗಮನಿಸಿದ್ದೇನೆ. ರೈತರು ದೂರವಾಣಿ ಮಾಡಿ ಒಂದು ವಿಷಯವನ್ನು ನನ್ನ ಗಮನಕ್ಕೆ ತಂದಿದ್ದಾರೆ. ಅದನ್ನು ಸಭಾನಾಯಕರಿಗೆ ಹೇಳಲು ಬಯಸುತ್ತೇನೆ. 'ಬಿತ್ತನೆ ಬೀಜವನ್ನು ಕೊಂಡುಕೊಳ್ಳಲು, ಗೊಬ್ಬರವನ್ನು ಕೊಂಡುಕೊಳ್ಳಲು ನಮ್ಮ ಹತ್ತಿರ ಹಣವಿಲ್ಲ. ಕಳೆದ ಎರಡು ವರ್ಷಗಳಲ್ಲಿ ನಾವು ಬರಗಾಲದಿಂದ ಸಂಕಷ್ಟಕ್ಕೆ ಈಡಾಗಿದ್ದೇವೆ. ಇವತ್ತು ನಮ್ಮ ಹತ್ತಿರ ಒಂದು ರೂಪಾಯಿಯೂ ಇಲ್ಲದೇ ಇರುವ ಪರಿಸ್ಥಿತಿ ಇದೆ. ಬೆಲೆ ವಿಮೆ ಯೋಜನೆಯ ಹಣವನ್ನೂ ಸಹಕಾರಿ ಬ್ಯಾಂಕುಗಳವರು ಮುಟ್ಟುಗೋಲು ಹಾಕಿಕೊಂಡಿದ್ದಾರೆ. ಅದೂ ನಮಗೆ ದೊರಕುತ್ತಿಲ್ಲ. ದಯವಿಟ್ಟು ಸರ್ಕಾರದ ಗಮನ ಸೆಳೆದು ನಮ್ಮನ್ನು ಕಾಪಾಡಿ. ಬಿತ್ತನೆ ಬೀಜಗಳನ್ನು ಖರೀದಿ ಮಾಡಲು ಹೊಸ ಸಾಲವನ್ನು ಕೊಡಲು ಸಹಕಾರಿ ಬ್ಯಾಂಕುಗಳ ಹಿಂದೆಮುಂದೆ ನೋಡುತ್ತಿವೆ. ದಯವಿಟ್ಟು ನಮ್ಮನ್ನು ಕಾಪಾಡಿ. ದಯಮಾಡಿ ಸರ್ಕಾರ ತಕ್ಷಣ ಇದರ ಬಗ್ಗೆ ಏನಾದರೊಂದು ತೀರ್ಮಾನ ಮಾಡಿ, ಬಿತ್ತನೆ ಬೀಜ ಮತ್ತು ಗೊಬ್ಬರ ಖರೀದಿ ಮಾಡಲು ಸರ್ಕಾರ ನಮ್ಮ ನೆರವಿಗೆ ಬರಬೇಕು. ಅವರು ಜವಾಬ್ದಾರಿ ತೆಗೆದುಕೊಳ್ಳಬೇಕು' ಎಂದು ರಾಜ್ಯದ ಹಲವಾರು ಭಾಗಗಳಿಂದ ರೈತರು ದೂರವಾಣಿ ಮುಖಾಂತರ ಹೇಳಿರುವುದನ್ನು ನಾನು ಸರ್ಕಾರದ ಗಮನಕ್ಕೆ ತರಲು ಬಯಸುತ್ತಿದ್ದೇನೆ. ಇದರಲ್ಲಿರುವ ಲೋಪದೋಷಗಳನ್ನು ಸರಿಪಡಿಸಲು ಸರ್ಕಾರ ತಕ್ಷಣವೇ ಕ್ರಮವನ್ನು ತೆಗೆದುಕೊಳ್ಳಬೇಕು ಎನ್ನುವುದು ನನ್ನ ಅಭಿಪ್ರಾಯ. ಮತ್ತೆ ಜಾಗತಿಕ

ಬಂಡವಾಳ ಹೂಡಿಕೆದಾರರ–ಸಮಾವೇಶವನ್ನು ಕರೆಯಬೇಕೆಂದು ಹೊರಟಿದ್ದಾರೆ. ಈ ಭಾಗದಲ್ಲಿರುವ ನಮ್ಮ ಸ್ನೇಹಿತರು ಕಳೆದ ಐದು ವರ್ಷಗಳ ಅವಧಿಯಲ್ಲಿ ಎರಡು ಜಾಗತಿಕ ಬಂಡವಾಳ ಹೂಡಿಕೆದಾರರ ಸಮ್ಮೇಳನಗಳನ್ನು ಮಾಡಿದರು. ಅವರಿಗೆ ದೊಡ್ಡ ಮಟ್ಟದಲ್ಲೇ ಪ್ರಚಾರ ಸಿಕ್ಕಿತು. ಆ ವಿಷಯದಲ್ಲಿ ಸರ್ಕಾರದ ಜಾಹೀರಾತುಗಳಿಗೆ ಎಷ್ಟು ಖರ್ಚಾಗಿದೆ ಎನ್ನುವುದರ ಬಗ್ಗೆ ನಾನು ಚರ್ಚೆ ಮಾಡಲು ಹೋಗುವುದಿಲ್ಲ. ಬಹುಶಃ ನಮಗೆ ಆಗಿರುವ ಲಾಭ ಅದೇ ಇರಬೇಕು. ನಿನ್ನೆ ಬಸವರಾಜ ರಾಯರೆಡ್ಡಿಯವರು ಮಾತನಾಡುವಾಗ ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶದ ಬಗ್ಗೆ ಪ್ರಸ್ತಾಪ ಮಾಡಿದರು. ಈ ಸಮಾವೇಶಗಳಲ್ಲಿ ಕೆಲವು ವ್ಯಕ್ತಿಗಳು ಬಂಡವಾಳ ಹೂಡುವುದಕ್ಕೆ ಸರ್ಕಾರದ ಜೊತೆ ಒಪ್ಪಂದಗಳನ್ನು ಮಾಡಿಕೊಂಡು M.O.U. sign ಮಾಡಿರುವುದನ್ನು ನಾವು ಟಿ.ವಿ.ಯಲ್ಲಿ ನೋಡಿದ್ದೇವೆ. ಅದರ ಬಗ್ಗೆ ರಾಯರೆಡ್ಡಿಯವರು ಚರ್ಚೆ ಮಾಡಿದ್ದಾರೆ. ಪುನಃ ಅದೇ ರೀತಿಯ, ಜಾಗತಿಕ ಬಂಡವಾಳ ಹೂಡುವಂಥ ಸಮ್ಮೇಳನವಾಗಬಾರದು. ಸರ್ಕಾರ ಎಚ್ಚರಿಕೆಯಿಂದ ಇದರ ಬಗ್ಗೆ ತೀರ್ಮಾನಗಳನ್ನು ತೆಗೆದುಕೊಳ್ಳಬೇಕು. ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶಗಳ ಮೂಲಕ ಬಂಡವಾಳ ಹೂಡುತ್ತೇವೆಂದು ಬರುವವರು ನಮ್ಮ ರಾಜ್ಯದ ಒಳಿತಿಗಿಂತ, ನಮ್ಮ ರಾಜ್ಯದ ಯುವಕರಿಗೆ ಉದ್ಯೋಗವನ್ನು ಕೊಡುವುದಕ್ಕಿಂತ, ನಮ್ಮ ರಾಜ್ಯದ ಬೆಲೆ ಬಾಳುವ ಭೂಮಿಯನ್ನು ಕಬಳಿಕೆ ಮಾಡುವ ಉದ್ದೇಶದಿಂದ ದೊಡ್ಡದೊಡ್ಡ ಆಸೆಗಳನ್ನು ಹುಟ್ಟಿಸಿ ಬರುತ್ತಾರೆ. ಆ ಜಾಗದಲ್ಲಿ ಕುಳಿತಿದ್ದಾಗ ನನಗೂ ಅದರ ಅನುಭವವಾಗಿದೆ. K.I.A.D.B.ಯಲ್ಲಿ High Power Committee meetingಗಳನ್ನು ಮಾಡುತ್ತೇವೆ. ಪ್ರತಿ ಸಭೆಯಲ್ಲಿ ಅರವತ್ತು ಸಾವಿರ ಕೋಟಿ, ಒಂದು ಲಕ್ಷ ಕೋಟಿ ಬಂಡವಾಳ ಹೂಡುವ ಯೋಜನೆಗಳು ಬರುತ್ತಿದ್ದವು. ಆ ಸಭೆಯಲ್ಲಿ ನಾವು ಅವುಗಳನ್ನು ಕ್ಲಿಯರ್ ಮಾಡುತ್ತಿದ್ದೆವು. ಹೂಡಿಕೆದಾರರು ಯಾರು ಎಂದು ಅವರ ಮುಖಗಳನ್ನು ನೋಡದೇ ಕ್ಲಿಯರ್ ಮಾಡಿದ್ದೇವೆ. ನಾನು ಈ ಜಾಗದಲ್ಲಿ ಕೂರಲು ನನಗೆ ಅವಕಾಶ ಕೊಟ್ಟಿರುವುದರಿಂದ, ಆ ಸಭೆಗಳಲ್ಲಿ ನಾವು ತೆಗೆದುಕೊಂಡಂಥ ನಿರ್ಣಯಗಳಿಂದ ನಮ್ಮ ರಾಜ್ಯಕ್ಕೆ ಎಷ್ಟೆಷ್ಟು ಬಂಡವಾಳ ಹರಿದು ಬಂತು ಎನ್ನುವ ಮಾಹಿತಿಯನ್ನು ಮುಂದೆ ಪಡೆಯಲು ನಾನು ಪ್ರಯತ್ನ ಮಾಡುತ್ತೇನೆ. ಕಳೆದ ಏಳೆಂಟು ವರ್ಷಗಳಲ್ಲಿ ಯಾವಯಾವ ರೀತಿಯಲ್ಲಿ, ಎಷ್ಟೆಷ್ಟು ಬಂಡವಾಳ ಹರಿದು ಬಂದಿದೆ, ನನ್ನ ಕಾಲದಲ್ಲೂ ಏನು ಬಂದಿದೆ ಎನ್ನುವುದೆಲ್ಲವನ್ನೂ ಕ್ರೋಢೀಕರಿಸಲು ನಾನು ಪ್ರಯತ್ನ ಮಾಡುತ್ತೇನೆ. 2014ರಲ್ಲಿ

ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶವನ್ನು ಮಾಡಲು ದೇಶಪಾಂಡೆಯವರು ಮುಖ್ಯಮಂತ್ರಿಗಳ ಮೇಲೆ ಪ್ರಭಾವ ಬೀರಿರಬೇಕು. ಏಕೆಂದರೆ ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶ ಪ್ರಾರಂಭವಾದದ್ದೇ 1999–2004ರ ಮಧ್ಯದ ಅವಧಿಯಲ್ಲಿ. ಆಗ ದೇಶಪಾಂಡೆಯವರು ಕೈಗಾರಿಕಾ ಸಚಿವರಾಗಿದ್ದರು. ಆಗ ಇದು ಪ್ರಾರಂಭವಾಯಿತು ಎನ್ನುವುದು ನನ್ನ ಅಭಿಪ್ರಾಯ. ಅಲ್ಲಿಂದ ಇಲ್ಲಿಯವರೆಗೆ ಬಂಡವಾಳ ಯಾವಯಾವ ರೀತಿಯಾಗಿ ಹರಿದು ಬಂದಿದೆ ಎನ್ನುವುದನ್ನು ಸದನಕ್ಕೇ ಬಿಡುತ್ತೇನೆ. ಅದರ ಬಗ್ಗೆ ನಾನು ದೊಡ್ಡ ಮಟ್ಟದಲ್ಲಿ ವ್ಯಾಖ್ಯಾನ ಮಾಡಲು ಹೋಗುವುದಿಲ್ಲ. ಅದೇ ರೀತಿ ಕನ್ನಡವನ್ನು ಶಾಸ್ತ್ರೀಯ ಭಾಷೆಯನ್ನಾಗಿ ಮಾಡಿರುವುದರ ಬಗ್ಗೆ ಹೇಳಿದ್ದೀರಿ. ಕನ್ನಡವನ್ನು ಶಾಸ್ತ್ರೀಯ ಭಾಷೆ ಎಂದು ಘೋಷಣೆ ಮಾಡಿದರು ಅಷ್ಟೇ. ಆದರೆ ಅದಕ್ಕೆ ಕೇಂದ್ರ ಸರ್ಕಾರ ತಮಿಳುನಾಡಿಗೆ ಕೊಟ್ಟಂಥ ರೀತಿಯಲ್ಲಿ ಎಷ್ಟು ಹಣವನ್ನು ಕಳೆದ ಐದು ವರ್ಷಗಳಲ್ಲಿ ನಮ್ಮ ರಾಜ್ಯಕ್ಕೆ ಕೊಟ್ಟರು ಎನ್ನುವುದು ನನಗೆ ಗೊತ್ತಿಲ್ಲ. ಕೇಂದ್ರ ಸರ್ಕಾರದವರು ಕನ್ನಡ ರಾಷ್ಟ್ರೀಯ ಭಾಷೆ ಎಂದು ಘೋಷಿಸಿದ ಮೇಲೆ, ತಮಿಳುನಾಡಿಗೆ ಕೊಟ್ಟಂತೆ ಎಷ್ಟು ಹಣವನ್ನು ಕೊಟ್ಟಿದ್ದಾರೆ ಎನ್ನುವುದನ್ನು ಯಡಿಯೂರಪ್ಪನವರು ಮತ್ತು ಜಗದೀಶ್ ಶೆಟ್ಟರ್‌ರವರು ಸದನದ ಗಮನಕ್ಕೆ ತರಬೇಕು. ಪ್ರಮಾಣ ವಚನ ಸ್ವೀಕಾರ ಮಾಡಿದಂಥ ಬಸವ ಜಯಂತಿ ಹಬ್ಬದ ದಿನ ನಮ್ಮ ಮುಖ್ಯಮಂತ್ರಿಗಳು ಇನ್ನೊಂದು ಸಂಗತಿಯನ್ನು ಘೋಷಣೆ ಮಾಡಿದರು. ಹಿಂದಿನ ಸರ್ಕಾರದಲ್ಲಿ "ಬಸವ ವಸತಿ ಯೋಜನೆ" ಎನ್ನುವ ಯೋಜನೆಯನ್ನು ತಂದಿದ್ದರು. ಆ ಯೋಜನೆಯಲ್ಲಿ ಪ್ರತಿ ತಾಲ್ಲೂಕಿಗೆ, ಎಂಟು ಸಾವಿರ, ಹತ್ತು ಸಾವಿರ, ಹದಿನೈದು ಸಾವಿರ ಮನೆಗಳನ್ನು ಕೊಡುತ್ತೇವೆಂದು ಕಳೆದ ಸರ್ಕಾರ ಘೋಷಣೆಯನ್ನು ಮಾಡಿ, ಅದರ ಫಲಾನುಭವಿಗಳನ್ನು ಗುರುತಿಸಲೂ ನಿರ್ದೇಶನ ಕೊಟ್ಟರು. ನಮಗೂ ಮನೆ ಸಿಗುತ್ತದೆ ಎಂದು ಹೇಳಿ ಹಲವಾರು ಜಿಲ್ಲೆಗಳಲ್ಲಿ ಜನರು ಅರ್ಜಿ ಕೊಟ್ಟರು. ಆ ಅರ್ಜಿಗಳನ್ನು ಕಂಪ್ಯೂಟರ್‌ನಲ್ಲಿ ಫೀಡ್ ಮಾಡಿದರಂತೆ, ಆಮೇಲೆ ಆ ಕಂಪ್ಯೂಟರ್ ಲಾಕ್ ಆಗಿ ಹೋಯಿತಂತೆ. ಈ ಯೋಜನೆಯ ಲಾಭ ಸಿಗುತ್ತದೆ ಎಂದು ಹೇಳಿ ಹಲವಾರು ಜನರು ಇದ್ದಂಥ ಮನೆಗಳನ್ನು ಕೆಡವಿ ಹೊಸದಾಗಿ ಫೌಂಡೇಷನ್ ಹಾಕಿದ್ದಾರೆ. ಆದರೆ ಅದರ ದುಡ್ಡೂ ಬರಲಿಲ್ಲ, ಮನೆಯನ್ನೂ ಕಟ್ಟಲಿಕ್ಕೆ ಆಗಲಿಲ್ಲ. ಆದರಿಂದ ಲಕ್ಷಾಂತರ ಜನರು ಇವತ್ತು ಸಂಕಷ್ಟಕ್ಕೆ ಒಳಗಾಗಿದ್ದಾರೆ. ಆದ್ದರಿಂದ ನಾನು ಸಭಾನಾಯಕರಿಗೆ ಮನವಿ ಮಾಡುವುದೇನೆಂದರೆ, ಅವರು ಆಶ್ರಯ ಮನೆಗಳಿಗೆ ಒಂದೂಕಾಲು ಲಕ್ಷ, ನಗರ ಪ್ರದೇಶಗಳಲ್ಲಿ ಮನೆ ಕಟ್ಟಲು ಎರಡು ಲಕ್ಷ ರೂಪಾಯಿಗಳ ಸಹಾಯಧನ

ಕೊಡುತ್ತೇವೆಂದು ಹೇಳಿದ್ದಾರೆ. ಆ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿ ವಿವರಣೆಯಿಲ್ಲ; ಬಹುಶಃ ಬಜೆಟ್‌ನಲ್ಲಿ ಹೇಳಬಹುದು. ನಾನು ಸರ್ಕಾರದ ಗಮನಕ್ಕೆ ತರುವುದೇನೆಂದರೆ, ಹಿಂದಿನ ಸರ್ಕಾರದಲ್ಲಿ ಯಾರು ಮನವಿಯನ್ನು ಸಲ್ಲಿಸಿದ್ದಾರೆ, ಅರ್ಜಿಯನ್ನು ಸಲ್ಲಿಸಿದ್ದಾರೆ, ಇವತ್ತು ಸಂಕಷ್ಟದಲ್ಲಿರುವ ಅವರಿಗೆ ಅನಾನುಕೂಲವಾಗಬಾರದು. ಈ ಯೋಜನೆಯನ್ನು ನೀವು 2013–14ರ ಆರ್ಥಿಕ ವರ್ಷದಲ್ಲಿ ಜಾರಿಗೆ ತರುತ್ತೇವೆ ಎಂದರೆ ಹಿಂದೆ ಅರ್ಜಿ ಕೊಟ್ಟು ಅದು ಕಂಪ್ಯೂಟರ್‌ನಲ್ಲಿ ಲಾಕ್ ಆಗಿದೆ, ಈಗ ಅದು ಓಪನ್ ಆಗುತ್ತಿಲ್ಲ ಎನ್ನುವುದೇನಿದೆ, ಅವರನ್ನೂ ಗಮನದಲ್ಲಿಟ್ಟುಕೊಂಡು, ಅವರಿಗೂ ಅನುಕೂಲ ಮಾಡುವಂಥ ರೀತಿಯಲ್ಲಿ ತೀರ್ಮಾನ ಮಾಡುವುದು ಸೂಕ್ತ ಎನ್ನುವ ಒಂದು ಸಲಹೆಯನ್ನು ಕೊಡಲು ಬಯಸುತ್ತಿದ್ದೇನೆ. ಏಕೆಂದರೆ, ತಾವೇ ಹೇಳಿದಂಥ ರೀತಿಯಲ್ಲಿ, ಸರ್ವರಿಗೂ ಸಮಪಾಲು, ಸರ್ವರಿಗೂ ಸಮಬಾಳು ಎನ್ನುವುದು ಎಲ್ಲರಿಗೂ ಸಿಗಬೇಕು ಎನ್ನುವುದು ನನ್ನ ಅಭಿಪ್ರಾಯ. ಆ ದೃಷ್ಟಿಯಿಂದಲೇ ನಾನು ರೈತರ ಬಗ್ಗೆಯೂ ಹೇಳಿದ್ದು, ಬಿತ್ತನೆ ಬೀಜ ಮತ್ತು ಗೊಬ್ಬರವನ್ನು ಖರೀದಿ ಮಾಡಲು ಇವತ್ತು ರೈತರಿಗೆ ಕಷ್ಟವಿದೆ, ಅವರಿಗೆ ಸಹಕಾರಿ ಬ್ಯಾಂಕುಗಳಲ್ಲೂ ಈಗ ಸಾಲ ಕೊಡದೇ ಹೋದರೆ ಅವರು ಮತ್ತೆ ಶ್ರೀಮಂತ ವರ್ಗದ ಬಡ್ಡಿ ವ್ಯಾಪಾರಸ್ಥರ ಬಳಿ ಹೋಗಿ, ಅವರ ಕುಟುಂಬದ ಹೆಣ್ಣುಮಕ್ಕಳ ಚಿನ್ನವನ್ನೋ, ಮತ್ತೊಂದನ್ನೋ ಅಡವಿಟ್ಟು ಹೆಚ್ಚಿನ ಬಡ್ಡಿಗೆ ಹಣ ತೆಗೆದುಕೊಂಡು ಬಿತ್ತನೆ ಮಾಡಬೇಕಾಗುತ್ತದೆ. ರೈತರು ನಮಗೆ ಅನ್ನ ಕೊಡುವಂಥ ಅನ್ನದಾತರು. ಹಿಂದುಳಿದ ವರ್ಗದವರು, ಅಲ್ಪಸಂಖ್ಯಾತರು ಮತ್ತು ದಲಿತ ವರ್ಗದವರಿಗೆ ತಾವು ಇವತ್ತು ಆರಂಭದಲ್ಲೇ ಕಾರ್ಯಕ್ರಮಗಳನ್ನು ಘೋಷಣೆ ಮಾಡಿದ ರೀತಿಯಲ್ಲೇ ರೈತರ ಬಗ್ಗೆಯೂ ಸಣ್ಣ ಹಿಡುವಳಿದಾರರ ಬಗ್ಗೆಯೂ ಸರ್ಕಾರ ಸ್ವಲ್ಪ ಕನಿಕರದಿಂದ, ಸರ್ವರಿಗೂ ಸಮಪಾಲು ಸರ್ವರಿಗೂ ಸಮಬಾಳುವಿನಂತೆ ಅವರಿಗೂ ಅನುಕೂಲ ಮಾಡುವಂಥ ಕೆಲಸವನ್ನು ಮಾಡಿದರೆ ಆ ಪದಕ್ಕೆ ದೊಡ್ಡ ಮಟ್ಟದ ಅರ್ಥ ಮತ್ತು ಗೌರವ ಸಿಗುತ್ತದೆ ಎನ್ನುವುದು ನನ್ನ ಅಭಿಪ್ರಾಯ. ಈ ರೀತಿಯಲ್ಲಿ ಗೌರವಾನ್ವಿತ ರಾಜ್ಯಪಾಲರ ಭಾಷಣದಲ್ಲಿ ಹಲವಾರು ವಿಷಯಗಳನ್ನು ಪ್ರಸ್ತಾಪ ಮಾಡಿದ್ದೀರಿ. ಅದು ಆರೋಗ್ಯ ಕ್ಷೇತ್ರ ಇರಬಹುದು, ಶಿಕ್ಷಣ ಕ್ಷೇತ್ರ ಇರಬಹುದು, ವಿದ್ಯುಚ್ಛಕ್ತಿ ಕ್ಷೇತ್ರ ಇರಬಹುದು, ಇವುಗಳಿಗೆ ಯಾವ ರೀತಿಯಲ್ಲಿ ಸರ್ಕಾರ ಗುರಿ ಇಟ್ಟುಕೊಂಡಿದೆ, ಯಾವ direction ನಲ್ಲಿ ಇರತಕ್ಕಂಥ ಸಮಸ್ಯೆಗಳಿಗೆ ಪರಿಹಾರವನ್ನು ಕಲ್ಪಿಸುತ್ತೇವೆನ್ನುವ ಸುದೀರ್ಘವಾದ ವಿಷಯಗಳೇನೂ ಪ್ರಸ್ತಾಪವಾಗಿಲ್ಲ, ಆದರೆ ಅದರ ಬಗ್ಗೆ ಮುಂದೆ ಗಮನ ಹರಿಸುತ್ತೇವೆನ್ನುವುದು ಏನಿದೆ, ಅದರ ಜೊತೆಯಲ್ಲಿ ಹೈದರಾಬಾದ್–ಕರ್ನಾಟಕದ

Article 371,ಅಂತಿಮವಾಗಿ ಆ ಭಾಗದ ಜನರ ಹೋರಾಟದ ಪ್ರತಿಫಲವಾಗಿ ಕೇಂದ್ರ ಸರ್ಕಾರ ಆ ತೀರ್ಮಾನ ಮಾಡಿದ್ದಾರೆ, ಅದಕ್ಕೆ ನಾನು ಕೇಂದ್ರ ಸರ್ಕಾರಕ್ಕೆ ಅಭಿನಂದನೆ ಸಲ್ಲಿಸುತ್ತೇನೆ. ಅದರ ಬಗ್ಗೆ ಕೆಲವು guidelines ಮಾಡಿ ಹೆಚ್ಚಿನ ಹಣವನ್ನು ಅಲ್ಲಿಗೆ ತೊಡಗಿಸಬೇಕೆನ್ನುವ ತೀರ್ಮಾನ ಮಾಡಿರುವುದು ಅದು ಉತ್ತಮ ಕೆಲಸವಾಗಿದೆ. ಅದರ ಬಗ್ಗೆ ಈಗ ಟೀಕೆ ಮಾಡುವುದು ಸೂಕ್ತವಲ್ಲ. ನಾನು ಮೊದಲೇ ಹೇಳಿದ ಹಾಗೆ, 5–6 ತಿಂಗಳುಗಳ ಕಾಲ ಈ ಸರ್ಕಾರಕ್ಕೆ ನಾವು ಸ್ವಲ್ಪ ಅವಕಾಶ ಕೊಡಬೇಕಾಗುತ್ತದೆ. ಕೇವಲ ರಾಜ್ಯಪಾಲರ ಭಾಷಣದ ಮೇಲೆ ನಾವು ವಿರೋಧ ಪಕ್ಷದಲ್ಲಿದ್ದೇವೆನ್ನುವ ಒಂದೇ ಕಾರಣಕ್ಕೆ ಸರ್ಕಾರವನ್ನು ಬಹುಶಃ ಟೀಕೆ ಮಾಡುವಂಥದ್ದು, ಅದು ನಮ್ಮ ಸಣ್ಣತನ ತೋರಿಸುತ್ತದೆ ಎನ್ನುವುದು ನನ್ನ ಅಭಿಪ್ರಾಯ. ಜುಲೈ 2ನೇ ವಾರದಲ್ಲಿ ಹೊಸ ಬಜೆಟ್ ಮಂಡನೆ ಮಾಡುತ್ತೇವೆಂದು ಮುಖ್ಯಮಂತ್ರಿಯವರು ಹೇಳಿದ್ದಾರೆ. ಆ ಬಜೆಟ್‌ನಲ್ಲಿ ಯಾವ ರೀತಿಯಲ್ಲಿ ಅವರ ಸರ್ಕಾರದ ಮುಂದಿನ ಆರ್ಥಿಕ ವರ್ಷದ ನೋಟ ಏನಿರುತ್ತದೆ, ಅವರ vision ಏನಿರುತ್ತದೆ, ಅಲ್ಲಿಯವರೆಗೆ ನಾವು ಕಾಯಬೇಕಾಗುತ್ತದೆ. ರಾಜ್ಯಪಾಲರ ಭಾಷಣದ ಮೇಲೆಯೇ ಸುದೀರ್ಘವಾಗಿ ದೊಡ್ಡ ಮಟ್ಟದಲ್ಲಿ ನಾವು ಟೀಕೆಗೋಸ್ಕರ ಟೀಕೆ ಮಾಡುವುದು ಸೂಕ್ತವಲ್ಲವೆನ್ನುವುದು ನನಗೂ ಅದರ ಅರಿವು ಇದೆ. ಆದ್ದರಿಂದ, ಮುಂದಿನ ಬಜೆಟ್‌ವರೆಗೆ 'ನಮ್ಮ ಸರ್ಕಾರದ ಕಾರ್ಯಕ್ರಮಗಳು' ಎಂದು ರಾಜ್ಯಪಾಲರು ಭಾಷಣ ಮಾಡಿದ್ದಾರೆ, ಅದೆಲ್ಲದರ ಬಗ್ಗೆ ಮುಂದೆ ಸರ್ಕಾರ ಯಾವ ರೀತಿ ನಡೆದುಕೊಳ್ಳಬಹುದು, ಕಾರ್ಯಕ್ರಮಗಳ ರೂಪುರೇಷೆಗಳನ್ನು ಹಾಕಿಕೊಂಡು ಯಾವ ದಿಕ್ಕಿನಲ್ಲಿ ಹೋಗಬಹುದೆನ್ನುವುದನ್ನು ಬಜೆಟ್‌ನಲ್ಲಿ ಅವರೇನು ತೀರ್ಮಾನ ಮಾಡುತ್ತಾರೆ, ನಂತರದ ದಿನಗಳಲ್ಲಿ ಬಹುಶಃ ಅದರ ಬಗ್ಗೆ ನಾವು ಸದನದಲ್ಲಿ ಮತ್ತು ರಾಜ್ಯದ ಜನತೆಯ ಗಮನ ಸೆಳೆಯಲಿಕ್ಕೆ ಸಾಧ್ಯವಾಗಬಹುದೆನ್ನುವುದು ನನ್ನ ಅಭಿಪ್ರಾಯ. ಹಾಗಾಗಿ ಈಗ ಪ್ರಮುಖವಾಗಿ ಜನತೆ ಏನು ಕಷ್ಟದಲ್ಲಿದ್ದಾರೆ, ಅದು ಸೇರಿದಂತೆ ಎಲ್ಲದರ ಬಗ್ಗೆಯೂ ಗಮನ ಕೊಡಲಿ ಎನ್ನುವುದನ್ನು ಸರ್ಕಾರದ ಗಮನಕ್ಕೆ ತರಲಿಕ್ಕೆ ಬಯಸುತ್ತೇನೆ. ಇವತ್ತು ಕುಡಿಯುವ ನೀರಿನ ವಿಷಯದಲ್ಲಿ ನಮ್ಮ ಸದಸ್ಯರುಗಳು ನಿಲುವಳಿ ಸೂಚನೆ ತರುವುದಕ್ಕೆ ಹೊರಟಿದ್ದರು. ಅದಕ್ಕೆ ನಾನೂ ಸಹ ಸಹಿ ಹಾಕಿದ್ದೇನೆ. ಕುಡಿಯುವ ನೀರಿನ ವಿಷಯದಲ್ಲಿ ಮಾನ್ಯ ಮುಖ್ಯಮಂತ್ರಿಯವರು ಈಗಾಗಲೇ ಸಭೆ ಮಾಡಿದ್ದಾರೆ. ಮಾನ್ಯ ದೇಶಪಾಂಡೆಯವರು ಸಭೆಯಲ್ಲಿ ಗಮನ ಸೆಳೆದಿದ್ದರು ಎನ್ನುವುದನ್ನು ಪತ್ರಿಕೆಯಲ್ಲೂ ಓದಿದ್ದೆ. ಆದರೆ, ಹಲವಾರು ಹಳ್ಳಿಗಳಲ್ಲಿ

ಕುಡಿಯುವ ನೀರಿನ ಸಮಸ್ಯೆ ಇದೆ. ಕಳೆದ ಚುನಾವಣೆ ಸಂದರ್ಭದಲ್ಲಿ ಬಹುಶಃ ಕುಡಿಯುವ ನೀರಿನ ಸಮಸ್ಯೆ ಇದ್ದಾಗ, ಚುನಾವಣೆಯಲ್ಲಿ ಗೆಲ್ಲಬೇಕೆಂದು ಹಲವಾರು ಪಾರ್ಟಿಗಳ ಅಭ್ಯರ್ಥಿಗಳು ಆಗತಕ್ಕಂಥವರು competition ನಲ್ಲಿ ನೀರು ಕೊಡುವುದಕ್ಕೆ ಫೋಟೋಗಳನ್ನು ಹಾಕಿಸಿಕೊಂಡು tanker ಗಳನ್ನು ಬಿಟ್ಟಿದ್ದರು. ಬಹುಶಃ ಚುನಾವಣೆ ನಂತರ ಅವು ಮುಂದುವರೆದಿದೆಯೋ ಇಲ್ಲವೋ ಎನ್ನುವುದು ನನಗೆ ಗೊತ್ತಿಲ್ಲ. ನಮಗೆ ಸಮಸ್ಯೆ ಇರುವುದು ಏನೆಂದರೆ, ಸರ್ಕಾರದಲ್ಲಿ ಏನು guidelines ಇಟ್ಟುಕೊಂಡಿದ್ದೀರಿ, ಹೊಸ ಬೋರ್‌ವೆಲ್‌ಗಳನ್ನು ಕೊರೆಯಲಿಕ್ಕೆ ನೀವು ಹಣ ಕೊಡುವುದಿಲ್ಲ. ಈಗ ಕೊಟ್ಟಿದ್ದರೆ ಒಳ್ಳೆಯದು.

ಶ್ರೀ ಆರ್.ವಿ.ದೇಶಪಾಂಡೆ : ಹೊಸ ಬೋರ್‌ವೆಲ್‌ಗಳಿಗಾಗಿ Urban areas ಗೆ rural areas ಗೆ ವಿಶೇಷ ಅನುದಾನ ಕೊಟ್ಟಿದ್ದೇವೆ.

ಅಧ್ಯಕ್ಷರು : ನೀವು ಏನು ಅನುದಾನ ಕೊಟ್ಟಿದ್ದೇವೆಂದು ಹೇಳಿದ್ದೀರಿ ಅದು ಗ್ರಾಮಕ್ಕೆ ಬಂದಿಲ್ಲ. ನಾನು ಮೊನ್ನೆ ವಿಚಾರ ಮಾಡಿಕೊಂಡು ಬಂದಿದ್ದೇನೆ.

ಶ್ರೀ ಆರ್.ವಿ.ದೇಶಪಾಂಡೆ : ಜಿಲ್ಲಾಪರಿಷತ್ ಸಿಇಓ ಮುಖಾಂತರ ಗ್ರಾಮಾಂತರ ಪ್ರದೇಶಕ್ಕೆ release ಮಾಡಿದ್ದೇವೆ. ಮುನಿಸಿಪಾಲಿಟಿಗೆ through Deputy Commissioner release ಮಾಡಿದ್ದೇವೆ.

ಅಧ್ಯಕ್ಷರು : ನೋಡಿ verify ಮಾಡುತ್ತೇವೆ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ : ಈ ಸದನಕ್ಕೆ ಬರುವುದಕ್ಕೆ ಮುಂಚೆ ನಾನು ಲೋಕಸಭಾ ಸದಸ್ಯನಾಗಿದ್ದಾಗ ಕನಕಪುರ, ರಾಮನಗರ ಈ ಭಾಗದ ಕುಡಿಯುವ ನೀರಿನ ಸಮಸ್ಯೆ ನಿವಾರಣೆ ಸಲುವಾಗಿ ಅಲ್ಲಿಯ ಪರಿಸ್ಥಿತಿ ನೋಡಿ ಎರಡೂವರೆ ಕೋಟಿ ರೂಪಾಯಿಗಳಷ್ಟು MP grant ಕೊಟ್ಟಿದ್ದೇನೆ. ಹಾಗಾಗಿ ಇವತ್ತು 20ಲಕ್ಷ, 30ಲಕ್ಷ ರೂಪಾಯಿಗಳಲ್ಲಿ ಕುಡಿಯುವ ನೀರಿನ ಪರಿಹಾರಕ್ಕೆ ಸಾಕಾಗುತ್ತದೆ ಎಂದು ನಾನು ಹೇಳಲಿಕ್ಕೆ ತಯಾರಿಲ್ಲ. ಬಹುಶಃ ಕೆಲವು ಕ್ಷೇತ್ರಗಳಲ್ಲಿ ಚುನಾವಣೆ ಸಂದರ್ಭದಲ್ಲಿ 80-90 ಬೋರ್‌ವೆಲ್‌ಗಳನ್ನು ಕೊರೆಸಿದ್ದಾರೆ. ಆದರೆ, ಅದಕ್ಕೆ ಹಣ ಇನ್ನೂ ಕೊಟ್ಟಿಲ್ಲ.

ಅಧ್ಯಕ್ಷರು : ನಾವು ಮಾಡಿಲ್ಲ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ : ಆದ್ದರಿಂದ ಸರ್ಕಾರ ಕುಡಿಯುವ ನೀರಿನ ವಿಷಯದಲ್ಲಿ ಆದಷ್ಟು ದೊಡ್ಡಮಟ್ಟದಲ್ಲಿ ಮುಂಜಾಗ್ರತಾ ಕ್ರಮ ತೆಗೆದುಕೊಳ್ಳುವುದು ಸೂಕ್ತವೆನ್ನುವುದು ನನ್ನ ಅಭಿಪ್ರಾಯವಾಗಿದೆ. ಗೌರವಾನ್ವಿತ

ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆಯಲ್ಲಿ ನಾನು ಕೆಲವು ವಿಷಯಗಳ ಬಗ್ಗೆ ಮಾತ್ರ ಗಮನಸೆಳೆದಿದ್ದೇನೆ. ಈ ಕಾವೇರಿ ನೀರಿನ ವಿಷಯದಲ್ಲಿ ಯಾವ ಸಂಕಷ್ಟಗಳಿಗೆ ನಮ್ಮನ್ನೇ ನಾವು ದೂಡಿಕೊಳ್ಳುತ್ತಿದ್ದೇವೆ, ಇವತ್ತು ಅಂತಿಮ ಹಂತಕ್ಕೆ ಬಂದಿದ್ದೇವೆ ಎನ್ನುವುದು ನನ್ನ ಅಭಿಪ್ರಾಯ. ಅದು ನಮ್ಮನ್ನು ಒಂದು ರೀತಿಯಲ್ಲಿ ಹಂತ ಹಂತವಾಗಿ ಕತ್ತಿಗೆ ಕುಣಿಕೆ ಹಾಕಿಕೊಂಡು ಬಿಗಿಯುತ್ತಿದ್ದಾರೆ. ಆದರೆ, ಸದನದಲ್ಲಿರಬಹುದು, ಕಳೆದ 30–40 ವರ್ಷಗಳ ಇತಿಹಾಸದಲ್ಲಿ ಎಲ್ಲಾ ಪಕ್ಷಗಳು ಒಟ್ಟಾರೆಯಾಗಿ ಹೋರಾಟ ಮಾಡಿದ್ದಾರೆ. ಇದರಲ್ಲಿ ಸಣ್ಣಪುಟ್ಟ ಲೋಪದೋಷಗಳು ಆಗಿರಬಹುದು. ಆದರೆ, ಇವತ್ತು ನಾವು ಏನೇ ಹೋರಾಟ ಮಾಡಿದರೂ ಎಲ್ಲೋ ಒಂದು ಕಡೆ ನಮ್ಮ ರಾಜ್ಯಕ್ಕೆ ಅನ್ಯಾಯವಾಗಿರುವುದನ್ನು ನಾವು ಇವತ್ತು ಕಾಣತಕ್ಕಂಥದ್ದು ಏನಿದೆ, ಈಗ ಕೊನೆಯ ಹಂತಕ್ಕೆ ನಮ್ಮನ್ನು ತಂದು ನಿಲ್ಲಿಸಿದ್ದಾರೆ. ನಾನು ಗೌರವಾನ್ವಿತ ರಾಜ್ಯಪಾಲರ ಭಾಷಣದ ವಿಷಯದಲ್ಲಿ ಏನು ಒಂದು ಪ್ರಮುಖವಾದ ವಿಷಯವನ್ನು ಏನು ತಮ್ಮ ಗಮನಕ್ಕೆ ತಂದಿದ್ದೆ ಅಧ್ಯಕ್ಷರೆ, ನಾವು ಇಂದು ಬೆಳಗ್ಗೆ ಸದನದ ಕಾರ್ಯಕಲಾಪ ಆರಂಭವಾಗುವುದಕ್ಕೆ ಮುಂಚೆ ಸರ್ಕಾರ ಇವತ್ತು ತೆಗೆದುಕೊಂಡಂಥ ನಿರ್ಣಯವನ್ನು ತಾವು ಸದನದ ಮುಂದಿಟ್ಟಿದ್ದೀರಿ, ಅದಕ್ಕೆ ನಾನು ಈ ಸರ್ಕಾರಕ್ಕೆ ಮತ್ತು ತಮಗೆ ಈ ರಾಜ್ಯದ ಕಾವೇರಿ ಜಲಾನಯನ ಪ್ರದೇಶದ ಜನತೆಯ ಪರವಾಗಿ ಧನ್ಯವಾದ ಅರ್ಪಿಸುತ್ತೇನೆ. ಇವತ್ತು ಯಾವುದೇ ಒಂದು ಪ್ರತಿಷ್ಠೆಗೆ ಒಳಗಾಗದೆ ಬಹುಶಃ ನಮ್ಮ Advocate General ಮತ್ತು ಇನ್ನಿತರ ಕಾನೂನು ತಜ್ಞರು ಸರ್ಕಾರಕ್ಕೆ ಹೇಳಿರಬಹುದು. ರಾಜ್ಯಪಾಲರ ಭಾಷಣವನ್ನು ಯಾರು prepare ಮಾಡಿದರೋ ನನಗೆ ಗೊತ್ತಿಲ್ಲ. ಆ ಭಾಷಣ prepare ಮಾಡಬೇಕಾದರೆ ಸ್ವಲ್ಪ ಇದರ ಕಡೆಗೆ ಗಮನ ಕೊಟ್ಟಿದ್ದರೆ ಬಹುಶಃ ಇಂಥ ಒಂದು ಪರಿಸ್ಥಿತಿ ಬರುತ್ತಿರಲಿಲ್ಲ. ಅದಕ್ಕೆ ಇದರ ಬಗ್ಗೆ ಚರ್ಚೆಯೇ ಮಾಡುವುದು ಬೇಡ ಇದಕ್ಕೆ ಸದನ ತಕ್ಷಣ ಒಪ್ಪಿಗೆ ಕೊಡಲಿ, ಸಭಾನಾಯಕರು ಒಪ್ಪಿಗೆ ಕೊಡಲಿ ಎಂದು ಮೊನ್ನೆ ನಾನು ಹೇಳಿದ್ದೆ. ಆದರೆ, ಈ ಬಗ್ಗೆ ಚರ್ಚೆ ಮಾಡೋಣವೆಂದು ಸರ್ಕಾರದವರು ಹೇಳಿದರು. ನಾನು ತಮ್ಮ ಅನುಮತಿಯನ್ನು ಕೋರಲಿಕ್ಕೆ ಬಯಸುತ್ತೇನೆ, ಅಧ್ಯಕ್ಷರೆ. ಇವತ್ತು ಸದನದಲ್ಲಿ ಹಲವಾರು ಜನ ನಾನು ಮೊದಲೇ ಹೇಳಿದಂತೆ ನೂತನ ಶಾಸಕರು ಬಂದಿದ್ದಾರೆ. ಈ ರಾಜ್ಯದ ಮಾಧ್ಯಮದಲ್ಲಿ ಹೊಸ ಯುವಕರು ಬಂದಿದ್ದಾರೆ. ಕಳೆದ 40–50 ವರ್ಷಗಳಲ್ಲಿ ನಡೆದಿರತಕ್ಕಂಥ ಕಾವೇರಿ ನೀರಿನ ವಿಚಾರ ಅದು ಸ್ವಾತಂತ್ರ್ಯ ಪೂರ್ವದಲ್ಲಿಯೇ ಅಂದರೆ ಬಹುಶಃ 1856ರಿಂದಲೇ ನಡೆಯುತ್ತಿದೆ. ಬಹುಶಃ ನನಗೆ ತಿಳಿದ ಮಟ್ಟಿಗೆ ಆ ಬ್ರಿಟಿಷ್‌ನವರ

ಕಾಲದಲ್ಲಾದರೂ ಸ್ವಲ್ಪ ಕರುಣೆ ತೋರಿಸಿದರೇನೋ! ಅದರ ಬಗ್ಗೆ ಮಾನ್ಯ ರಮೇಶ್ ಕುಮಾರ್‌ರವರು ಗಮನ ಸೆಳೆಯಬೇಕು. ಈಗಾಗಲೇ ಈ Tribunal, ನಾನು ಜಡ್ಜ್‌ಗಳ ಬಗ್ಗೆ ಚರ್ಚೆ ಮಾಡುವುದಿಲ್ಲ, ಅವರ ನಡವಳಿಕೆ ಬಗ್ಗೆ ಚರ್ಚೆ ಮಾಡುವುದಿಲ್ಲ, ಆದರೆ, ಆ ತೀರ್ಪು ಏನಿದೆ, ಆ ತೀರ್ಪು ನಿಜಕ್ಕೂ ನ್ಯಾಯಯುತವಾಗಿ ಎರಡೂ ರಾಜ್ಯಗಳ ಪರಿಸ್ಥಿತಿ ಗಮನಿಸಿ ಆ ತೀರ್ಪು ಕೊಟ್ಟಿದ್ದಾರೋ? ಇವತ್ತು ನಮ್ಮನ್ನು ಏಕೆ ಇಂಥ ಒಂದು ಸಂಕಷ್ಟಕ್ಕೆ ಸಿಲುಕಿಸಿದ್ದಾರೆ? ಇವತ್ತು ಸನ್ಮಾನ್ಯ ಮುಖ್ಯಮಂತ್ರಿಯವರು ಸಭೆ ಕರೆದರು. ಯಾವ ಒಂದು ಹೊಸದಾಗಿ Supervisory Committee ಯ ತೀರ್ಮಾನ ಮಾಡಿಕೊಳ್ಳಲಿಕ್ಕೆ ಹೊರಟಿದ್ದಾರೆ, ಅದಕ್ಕೇ ನಾನು ಹೇಳಿರುವುದು, ನಮಗೆ ಕೊನೆಯ ಹಂತದ ಒಂದು ಕುಣಿಕೆ ಹಾಕುತ್ತಿದ್ದಾರೆ. ಅದರ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ಏನು ಇವತ್ತು ಸಭೆ ಕರೆದಿದ್ದರು, ಮಾಜಿ ಮುಖ್ಯಮಂತ್ರಿಯವರಾದ ಸನ್ಮಾನ್ಯ ಯಡಿಯೂರಪ್ಪನವರು, ಶ್ರೀ ಜಗದೀಶ್ ಶೆಟ್ಟರ್‌ರವರು, ನಮ್ಮ ಮಾಜಿ ನೀರಾವರಿ ಸಚಿವರಾದ ಬಸವರಾಜ ಬೊಮ್ಮಾಯಿ ಈಗ ಬಹಳಷ್ಟು ಜನರನ್ನು ಈ ಸಭೆಗೆ ಕರೆದಿದ್ದರು. ಆ ಸಭೆಯಲ್ಲಿ ಕೆಲವು ನಿರ್ಣಯ ಮಾಡಿದ್ದಾರೆ. ಅದಕ್ಕೆ ನಾವೆಲ್ಲ ಸಂಪೂರ್ಣ ಒಪ್ಪಿಗೆ ಕೊಟ್ಟಿದ್ದೇವೆ. ಸರ್ಕಾರದ ಕಾನೂನಿನ ಹೋರಾಟಕ್ಕೆ ಎಲ್ಲಾ ರೀತಿಯ ಸಹಕಾರ ಕೊಡುವುದು ನಮ್ಮ ಜವಾಬ್ದಾರಿ, ಅದನ್ನು ನಾವು ಮುಂದುವರಿಸುತ್ತೇವೆ. ಇದರಲ್ಲಿ ಸರ್ಕಾರ ತೆಗೆದುಕೊಳ್ಳುವ ಯಾವುದೇ ರೀತಿಯ ನಿರ್ಣಯ ನಮ್ಮ ರಾಜ್ಯದ ಕಾವೇರಿ ಜಲಾನಯನ ಪ್ರದೇಶದ ಜನತೆಯ ಉಳಿವಿಗೋಸ್ಕರವಾಗಿ ನಾವು ಒಗ್ಗಟ್ಟಿನ ಹೋರಾಟವನ್ನೇ ಮಾಡಬೇಕು. ಇಂಥ ಒಂದು ಪರಿಸ್ಥಿತಿಯಲ್ಲಿ ನಾನು ಕೆಲವು ವಿಷಯಗಳನ್ನು ಮೊನ್ನೆ ನಡೆದಂಥ ಹಿನ್ನೆಲೆಯಲ್ಲಿ ಸದನದ ಗಮನ ಸೆಳೆಯಲಿಕ್ಕೆ ಬಯಸುತ್ತೇನೆ. ಇವತ್ತಿನ ನಮ್ಮ ಮಾಧ್ಯಮದ ಸ್ನೇಹಿತರುಗಳಿಗೂ ಕೆಲವೊಂದು ವಿಷಯ ಅರ್ಥವಾಗಬೇಕು. ಈಗಿನ ಮಾಧ್ಯಮದಲ್ಲಿ ಹೊಸ ಯುವಕರು ಬಂದಿದ್ದಾರೆ. ಇತಿಹಾಸದಲ್ಲಿ ಏನೇನಾಗಿದೆ, ಮಾನ್ಯ ಅಧ್ಯಕ್ಷರೆ, ನಿಮ್ಮಗಳ ಕಾಲದಲ್ಲಿ ಇಲ್ಲಿ ಕುಳಿತು ಕೃಷ್ಣಾ ನೀರಾವರಿ ವಿಷಯದಲ್ಲಿ ಅವತ್ತು ಬಚಾವತ್ ಕಮಿಷನ್‌ದು, ಬಹುಶಃ ತಾವು ಅಲ್ಲಿದ್ದಿರಿ. ಇವತ್ತು ಬಹುಶಃ ಕಾಕತಾಳೀಯ. ದಿವಂಗತ ದೇವರಾಜ ಅರಸುರವರು ಒಬ್ಬ ಮಹಾನ್ ವ್ಯಕ್ತಿ. ಇವತ್ತು ಅವರ ದಿನಾಚರಣೆ ಆಚರಣೆ ಮಾಡುತ್ತಿದ್ದೇವೆ. ಇವತ್ತು ನಾನು ನೆನೆಸಿಕೊಳ್ಳುವುದಕ್ಕೆ ಬಯಸುತ್ತೇನೆ. ಅವತ್ತು ದೇವರಾಜ ಅರಸು ರವರು ಅಲ್ಲಿ ಎಂದರೆ ಆಡಳಿತ ಪಕ್ಷದಲ್ಲಿದ್ದರು. ಸನ್ಮಾನ್ಯ ದೇವೇಗೌಡರು ಈ ಜಾಗದಲ್ಲಿದ್ದರು, ಮಾನ್ಯ ಅಧ್ಯಕ್ಷರೆ, ನೀವು ಅವರ ಪಕ್ಕದಲ್ಲಿದ್ದಿರಿ. ಕೃಷ್ಣಾ ನೀರಿನ ವಿಷಯದಲ್ಲಿ ಅವತ್ತಿನ ಬಚಾವತ್

ಆಯೋಗ ತೆಗೆದುಕೊಂಡಂಥ ಒಂದು ಹೃದಯ ವೈಶಾಲ್ಯತೆ ಮತ್ತು ಅವರು ತೆಗೆದುಕೊಂಡಂಥ ನಿರ್ಧಾರಗಳು ಮತ್ತು ಇಲ್ಲಿ ಕಾವೇರಿ ನ್ಯಾಯಾಧಿಕರಣ ಕೊಟ್ಟಿರತಕ್ಕಂಥ ನಿರ್ಧಾರಗಳಲ್ಲಿ ಎಷ್ಟು ವ್ಯತ್ಯಾಸಗಳು ಇವೆ ಎನ್ನುವ ಬಗ್ಗೆ ಗಮನ ಸೆಳೆಯಲಿಕ್ಕೆ ಬಯಸುತ್ತೇನೆ. ಕೃಷ್ಣಾ ನೀರಿಗೆ ಸಂಬಂಧಿಸಿದಂತೆ ಬಚಾವತ್ ಕಮಿಷನ್‌ರವರು ಕೊಟ್ಟಂಥ ಆದೇಶದ ಮೊದಲು ಅವರು ತೆಗೆದುಕೊಂಡಂಥ ನಿರ್ಣಯವನ್ನು 3 ರಾಜ್ಯಗಳಿಗೂ circulate ಮಾಡುತ್ತಾರೆ. ಅವರು ಯಾವೊಂದು ನೀರನ್ನು ಹಂಚಿಕೆ ಮಾಡುತ್ತಾರೆ ಇದರ ಬಗ್ಗೆ ನಿಮ್ಮ ಅಭಿಪ್ರಾಯ ಏನು ಹೇಳಿ ಎಂದು ಅಂದಿನ ಬಚಾವತ್ ಆಯೋಗದವರು ಮೂರು ರಾಜ್ಯಗಳಿಗೆ ಕಳುಹಿಸುತ್ತಾರೆ. ಬಹುಶಃ ಅಂದು ಸಭೆಯಲ್ಲಿ ಚರ್ಚೆಯಾಗಿರುವುದು ನಿಮ್ಮ ಗಮನದಲ್ಲಿರಬಹುದು. ದೇವರಾಜು ಅರಸುರವರು ಮುಖ್ಯಮಂತ್ರಿಗಳಾಗಿ ದೇವೇಗೌಡರವರು ವಿರೋಧ ಪಕ್ಷದ ನಾಯಕರಾಗಿ ನೀವು ಈ ಭಾಗದ ಸದಸ್ಯರಾಗಿ ಆ ಒಂದು ತೀರ್ಮಾನದ ಬಗ್ಗೆ ನಾವು ವಾಕ್‌ಔಟ್ ಮಾಡಿ ಪ್ರತಿಭಟಿಸಬೇಕೆನ್ನುವ ನಿರ್ಧಾರ ಮಾಡಿಸಿದಿರಿ. ಅಂದು ಈ ಸದನದ ಎಲ್ಲಾ ಸದಸ್ಯರು ಅದಕ್ಕೆ ಒಪ್ಪಿಗೆ ಕೊಟ್ಟರು. ಅದರ ಹಿನ್ನೆಲೆಯಲ್ಲಿ ನಮಗೆ ಮೊದಲೇನು ಬಹುಶಃ 600 ಚಿಲ್ಲರೆ ಟಿಎಂಸಿ ನೀರು ಹಂಚಿಕೆಯಾಗಿತ್ತು ಅದು ಕೊನೆಗೆ 734 ಟಿಎಂಸಿ ನೀರನ್ನು ಕೊಡುವುದಕ್ಕೆ ನಿರ್ಧಾರ ಮಾಡಿದರು. ಅಂದು ಸದನದಲ್ಲಿ ದೇವರಾಜ ಅರಸು ರವರು ಕಾಂಗ್ರೆಸ್‌ನ ಮುಖ್ಯಮಂತ್ರಿಗಳಾಗಿದ್ದರು. ಆಂಧ್ರದಲ್ಲಿಯೂ ಕಾಂಗ್ರೆಸ್ ಸರ್ಕಾರವಿತ್ತು, ಕೇಂದ್ರದಲ್ಲಿಯೂ ಕಾಂಗ್ರೆಸ್ ಸರ್ಕಾರವಿತ್ತು.

ಶ್ರೀ ವಿ.ಶ್ರೀನಿವಾಸ ಪ್ರಸಾದ್ : Tribunal constitute ಆಗಿರಲಿಲ್ಲ, ಆಗ ಇನ್ನೂ negotiations, ಮಾತುಕತೆ ನಡೆಯುತ್ತಿತ್ತು. ಆಮೇಲೆ ಒಂದು ನಿರ್ಧಾರಕ್ಕೆ ಬರುತ್ತಿದ್ದರು. ಈ ಎಲ್ಲಾ ಸಮಸ್ಯೆ crop up ಆಗಿದ್ದು tribunal constitute ಆದಮೇಲೆ ಏನೇನು ಆಗಿದೆ ಎನ್ನುವುದನ್ನು ಹೇಳಬೇಕಾಗುತ್ತದೆ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ : ಇಲ್ಲ,ಇಲ್ಲ. ತಾವು ಒಂದು ನಿಮಿಷ ಕೇಳಿ. ಬಹುಶಃ ಅಂದು ಕೇಂದ್ರದ ನೀರಾವರಿ ಸಚಿವರು ಆಂಧ್ರದವರು. ಅಲ್ಲಿ ನಾಗಾರ್ಜುನ ಡ್ಯಾಂ ಕಟ್ಟುವುದಕ್ಕೆ ಎಲ್ಲಾ ರೀತಿಯ ಕಾರ್ಯಕ್ರಮಗಳನ್ನು ಮುಗಿಸಿದ ನಂತರ ಈ ಬಚಾವತ್ ಕಮಿಷನ್ ಅನ್ನು ನೇಮಕ ಮಾಡಿದ್ದು. ನಾನು ತಮ್ಮ ಮುಖಾಂತರ ಅವರ ಗಮನಕ್ಕೆ ತರಬಯಸುತ್ತೇನೆ. ಬಚಾವತ್ tribunal ರಚನೆಯಾದ ಮೇಲೆ ಅವರು final award ಮಾಡುವುದಕ್ಕಿಂತ ಮುಂಚೆ...

ಶ್ರೀ ಕೆ.ಆರ್.ರಮೇಶ್ ಕುಮಾರ್ : ಮಾನ್ಯ ಅಧ್ಯಕ್ಷರೆ, ಅನೇಕ ವೇಳೆ ನಾವು ಈ ಹಳೆಯ ವಿಚಾರಗಳನ್ನು ಮೆಲುಕು ಹಾಕುವಾಗ ಕೆಲವರ ಹೆಸರು ಬರುವುದಿಲ್ಲ, ಮರೆತು ಹೋಗಿಬಿಡುತ್ತೇವೆ. ಪ್ರಮುಖವಾಗಿ ಆ ದಿವಸ ದೇವರಾಜ ಅರಸುರವರಿಗೆ ಪ್ರತಿಪಕ್ಷದ ನಾಯಕರಿಗೆ ಬಹುಶಃ ಇಡೀ ವಿಧಾನ ಸಭೆಗೆ ಇದರ ಬಗ್ಗೆ ನಾವು walk out ಮಾಡೋಣ Participate ಮಾಡುವುದು ಬೇಡ ಇದರಲ್ಲಿ prejudice ಆಗಿರತಕ್ಕಂಥವರು ಕೆ.ಎಲ್.ರಾವ್ ಎನ್ನುವವರು Central Government Minister, ಆಂಧ್ರದವರು ಇದ್ದಾರೆ. He is an interested party ಎಂದು ತನ್ನದೇ ಪಕ್ಷದ ಸರ್ಕಾರ ಕೇಂದ್ರದಲ್ಲಿ ಮತ್ತು ಪಕ್ಕದಲ್ಲಿದ್ದರೂ ಸಹ ಆ ನಿರ್ಣಯ ತೆಗೆದುಕೊಳ್ಳುವುದಕ್ಕೆ ದೇವರಾಜ ಅರಸುರವರಿಗೆ ಪೂರ್ಣ ಸಹಕಾರ ತಿಳುವಳಿಕೆ ಕೊಟ್ಟಂತಹವರು ದಿ:ಆರ್.ಎನ್.ಭೈರಾರೆಡ್ಡಿಯವರು. He was the Advocate General. ಈ ಸಭೆ ಇವತ್ತು ಅವರನ್ನು ನಾವೆಲ್ಲರೂ ಗೌರವದಿಂದ ಸ್ಮರಿಸಬೇಕಾಗುತ್ತದೆ. In fact, ಈ Houseಗೆ ಅವರನ್ನು ಕರೆಸಿ ಎಂದಾಗ ಅವರು Houseಗೆ ಬಂದು convince ಮಾಡುವುದಕ್ಕೆ ತಯಾರಿದ್ದೇನೆಂದರು. ನಮ್ಮ ಸದನದಲ್ಲಿ, there is a provision to summon the Advocate General to be present in the House to explain such issues. ಆದ್ದರಿಂದ I am very glad, ಕುಮಾರಸ್ವಾಮಿಯವರು ಇದರ ಮೇಲೆ ಸಾಕಷ್ಟು ಅಭ್ಯಾಸ ಮಾಡಿಕೊಂಡು ಬಂದು ಮಾತನಾಡುತ್ತಿದ್ದಾರೆ. ಅವರ ಮಾತು ನಾನು ಕೇಳುತ್ತಿದ್ದೇನೆ. ಈ ಸದನ ಅತ್ಯಂತ ಕೃತಜ್ಞತಾ ಮನೋಭಾವದಿಂದ ದಿ:ಆರ್.ಎನ್.ಭೈರಾರೆಡ್ಡಿಯವರನ್ನು, ಅಂದಿನ ಅವರ ಸೇವೆಯನ್ನು ಸ್ಮರಿಸಬೇಕಾಗುತ್ತದೆ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ : ನಾನೂ ಕೂಡ ಅದೇ ವಿಷಯಕ್ಕೆ ಬರುತ್ತಿದ್ದೆ. Advocate General ಆಗಿ ಅಂದು ಕೆಲಸ ನಿರ್ವಹಿಸಿದ ಭೈರಾರೆಡ್ಡಿಯವರ ಹೆಸರನ್ನು ಹೇಳುತ್ತಿದ್ದೆ. ಅಷ್ಟರಲ್ಲಿ ತಾವೇ ಜ್ಞಾಪಕ ಮಾಡಿದಿರಿ. ಅಂದು ತೆಗೆದುಕೊಂಡಿರತಕ್ಕಂಥ ನಿರ್ಣಯಗಳಿಂದ ಕೃಷ್ಣಾ ಭಾಗದ ಜನತೆಗೆ ಏನು ಅನುಕೂಲವಾಯಿತು, ಅದರಲ್ಲೂ ನಾವು ತಮಿಳುನಾಡಿಗೆ ಔದಾರ್ಯ ತೋರಿಸಿದ್ದೇವೆ. ಇವತ್ತು ತಮಿಳುನಾಡಿನಲ್ಲಿ ಅಧಿಕಾರದಲ್ಲಿರುವವರ ನಡವಳಿಕೆ ಏನಿದೆ. ನಾವು ಶ್ರೀಮತಿ ಇಂದಿರಾಗಾಂಧಿಯವರು ಪ್ರಧಾನ ಮಂತ್ರಿಗಳಾಗಿದ್ದಾಗ ಅಂದು ಅವರ ಮನವಿಯ ಮೇರೆಗೆ ನಮ್ಮ ರಾಜ್ಯ, ಆಂಧ್ರ ಮತ್ತು ಮಹಾರಾಷ್ಟ್ರ

5 ಟಿಎಂಸಿ ನೀರು ಅಂದರೆ 15 ಟಿಎಂಸಿ ನೀರನ್ನು ನಮಗೆ ಹಂಚಿಕೆಯಾದ ನೀರಿನ ಒಂದು ಪಾಲಿನಲ್ಲಿ ತಮಿಳುನಾಡಿನ ಚೆನ್ನೈಗೆ ಕುಡಿಯುವ ನೀರು ಕೊಡುವ ಔದಾರ್ಯ ನಾವು ತೋರಿಸಿದೆವು. ಆದರೆ ಇವತ್ತು ಅವರು ನಮಗೆ ಯಾವ ರೀತಿಯ ಗೌರವ ಸಲ್ಲಿಸುತ್ತಿದ್ದಾರೆ? ಇದು ಎಲ್ಲೋ ಒಂದು ಕಡೆಗೆ ನಮಗೆಲ್ಲರಿಗೂ ನೋವು ಆಗತಕ್ಕಂಥ ಘಟನೆಗಳನ್ನು ಈ ಒಂದು ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ನಾನು ಮೊನ್ನೆ ಯಾವ ಕಾರಣಕ್ಕಾಗಿ ಆ ಒಂದು ಪದವನ್ನು ತಿದ್ದುಪಿ ಮಾಡಿ ಎಂದು ಮನವಿ ಸಲ್ಲಿಸಿದೆ ಎಂದರೆ 2007 ರ ಫೆಬ್ರವರಿ ತಿಂಗಳಲ್ಲಿ..

ಅಧ್ಯಕ್ಷರು : ದಯವಿಟ್ಟು ಕ್ಷಮಿಸಿ, ಸ್ವಲ್ಪ ಕೆಲಸವಿರುವುದರಿಂದ ನಾನು ಹೊರಗಡೆ ಹೋಗುತ್ತಿದ್ದೇನೆ. ಮಾನ್ಯ ಬಿ.ಆರ್.ಯಾವಗಲ್‌ರವರು ಇಲ್ಲಿ ಇರುತ್ತಾರೆ. ತಾವು ಮುಂದುವರಿಸಿ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ : ಆಗಬಹುದು ಅಧ್ಯಕ್ಷರೆ.

(ಈ ಹಂತದಲ್ಲಿ ಶ್ರೀ ಬಿ.ಆರ್.ಯಾವಗಲ್‌ರವರು ಸಭಾಧ್ಯಕ್ಷರ ಪೀಠದಲ್ಲಿ ಆಸೀನರಾದರು)

ಶ್ರೀ ಹೆಚ್.ಡಿ.ಕುಮಾರಸ್ವಾಮಿ : 2007ರಲ್ಲಿ Cauvery water Disputes Tribunal ನಮಗೆ ಅಂತಿಮವಾದ award ಕೊಡುತ್ತಾರೆ, ಆ awardನಲ್ಲಿ ಕನಿಷ್ಠ ಸೌಜನ್ಯ ತೋರಿಸುವುದಿಲ್ಲ. ಅಂದು Tribunal ತೀರ್ಮಾನ ಮಾಡುವುದಕ್ಕಿಂತ ಮುಂಚೆ ಅಂತಿಮವಾಗಿ ನೀರನ್ನು ಹಂಚಿಕೆ ಮಾಡುವ ವಿಚಾರದಲ್ಲಿ ಕರಡನ್ನು ಸಿದ್ಧಮಾಡುತ್ತಾರೆ, ನಾನು ಏಕೆ ಕೃಷ್ಣಾ ನೀರಿನ ವಿಚಾರದಲ್ಲಿ ಮೊದಲು ಗಮನ ಸೆಳೆದೆ ಎಂದರೆ, ಅಂದು ಆ ಒಂದು ಐತೀರ್ಪು ಕೊಡುವುದಕ್ಕಿಂತ ಮುಂಚೆ ಅಲ್ಲಿನ ಕೃಷ್ಣಾ Tribunal ನಿಂದ ಮೂರು ರಾಜ್ಯ ಸರ್ಕಾರಗಳಿಗೆ ಅವರು ತೆಗೆದುಕೊಳ್ಳತಕ್ಕಂಥ ನಿರ್ಣಯಗಳ ಬಗ್ಗೆ ನಿಮ್ಮ ಅಭಿಪ್ರಾಯ ಕೊಡಿ ಎಂದು ಕಳುಹಿಸುತ್ತಾರೆ. ಆ ರೀತಿಯ ತೀರ್ಮಾನವನ್ನು ಇವರು ಮಾಡಬಹುದಾಗಿತ್ತು. ಆದರೆ, suomotu ತೀರ್ಮಾನ ಅವರೇ ಮಾಡಿ ಬಿಡುತ್ತಾರೆ. ಆ Tribunal ನಲ್ಲಿ ಐತೀರ್ಪನ್ನು ಘೋಷಣೆ ಮಾಡುವುದಕ್ಕಿಂತ ಮುಂಚೆ ನಮ್ಮಗಳ ಪ್ರತಿಕ್ರಿಯೆ, ಅಭಿಪ್ರಾಯ ಕೇಳದೆ ಅವರು ತೆಗೆದುಕೊಂಡಂಥ ಆ ಒಂದು ನಿರ್ಣಯ ಎಷ್ಟರ ಮಟ್ಟಿಗೆ ಸಮಂಜಸ? ಇಂದು ಸದನದಲ್ಲಿರತಕ್ಕಂಥ ಸದಸ್ಯರುಗಳೆಲ್ಲರೂ ತಿಳಿದುಕೊಳ್ಳಬೇಕಾಗುತ್ತದೆ. ಇದೆಲ್ಲದರ ಬಗ್ಗೆ ತಿಳಿದುಕೊಳ್ಳದೇ ಇದ್ದರೆ ಮುಂದಿನ ದಿನಗಳಲ್ಲಿ ನಮಗೆ ಆಗತಕ್ಕಂಥ ಅನಾಹುತ ಬಹಳವಿದೆ. ನಮಗೆ ಯಾರು ರಕ್ಷಣೆ ಕೊಡುತ್ತಾರೋ ಗೊತ್ತಿಲ್ಲ, ಸರಿಯಾದ ರೀತಿ ಮಳೆ

ಬಂದರೆ ತೊಂದರೆಯಿಲ್ಲ. ಇವತ್ತು ವರುಣ ದೇವನೊಬ್ಬನೆ ನಮ್ಮನ್ನು ರಕ್ಷಣೆ ಮಾಡಬೇಕೇ ಹೊರತು ಬೇರೆ ಯಾರು ರಕ್ಷಣೆ ಮಾಡುವುದಕ್ಕಾಗುತ್ತದೆಯೋ ಗೊತ್ತಿಲ್ಲ. ಅವರು ಎಷ್ಟರ ಮಟ್ಟಿಗೆ ತೀರ್ಮಾನ ಮಾಡಿದರು, ಆ ನೀರು ಯಾವ್ಯಾವ ತಿಂಗಳಲ್ಲಿ ಹಂಚಿಕೆಯಾಗಬೇಕು ಅದೆಲ್ಲಾ ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ, ultimately, ಅವರು ಏನು ಹೇಳುತ್ತಾರೆಂದರೆ,

"Any upper riparian state shall not take any action so as to affect the scheduled deliveries of the water to the lower riparian states. However, the states concerned can, by mutual agreement and in consultation with the Regulatory Authority, make any amendment in the pattern of water deliveries. The use of underground waters by any riparian states and UT of pondicherry shall not be reckoned as usewater of river Cauvery." ಆ ಒಂದು Cauvery water Disputes Tribunal ಕೊಟ್ಟಿರುವ ಐತೀರ್ಪು ಏನಿದೆ ಅದರ ಮೇಲೆ ನಾವು SLP ಹಾಕಿದ್ದೇವೆ. 2ನೇ ತಾರೀಖಿನಂದು Tribunalನವರು ಏನು ತೀರ್ಪು ಕೊಡುತ್ತಾರೆ ಅದರ ಬಗ್ಗೆ ಅಂದಿನ ಲೋಕಸಭಾ ಸದಸ್ಯರಾದ ಸನ್ಮಾನ್ಯ ದೇವೇಗೌಡರವರು ಪ್ರಧಾನ ಮಂತ್ರಿಗಳಿಗೆ 8ನೇ ತಾರೀಖಿನ ದಿವಸ ಒಂದು ಪತ್ರ ಬರೆಯುತ್ತಾರೆ. ಏಕೆಂದರೆ, ತಮಿಳುನಾಡಿನ ಸರ್ಕಾರ ಅದರಲ್ಲೂ ವಿಶೇಷವಾಗಿ ಈಗ ಬಂದಿರತಕ್ಕಂತ ಅಲ್ಲಿನ ಮುಖ್ಯಮಂತ್ರಿಗಳು ಪ್ರತಿಯೊಂದು ಕ್ಷಣವೂ ನಮಗೆ ಕೊಡುತ್ತಿರುವ ಹಲವಾರು ರೀತಿಯ ತೊಡಕುಗಳು ಎಷ್ಟರ ಮಟ್ಟಿಗೆ ನಮ್ಮನ್ನು ಇಕ್ಕಟ್ಟಿಗೆ ಸಿಲುಕಿಸುತ್ತಿದ್ದಾರೆ. ಅದಕ್ಕೆ ನಮಗೆ ರಕ್ಷಣೆ ದೊರೆಯದೇ ಇರತಕ್ಕಂಥ ಸಂದರ್ಭದಲ್ಲಿ ಅಂದು ನಮ್ಮ ರಾಜ್ಯದಿಂದ ಮಾನ್ಯ ಪ್ರಧಾನ ಮಂತ್ರಿಗಳಿಗೆ ಗಮನ ಸೆಳೆದಿದ್ದೇವೆ. ಇಲ್ಲಿ ಆಗಿರತಕ್ಕಂಥ ಆ ಒಂದು ಐತೀರ್ಪಿನ ಹಿನ್ನೆಲೆಯಲ್ಲಿ ನಮ್ಮ ರಾಜ್ಯಕ್ಕೆ ಯಾವೊಂದು ತೊಂದರೆಗಳಾಗಿವೆ ಎಂಬುದರ ಬಗ್ಗೆ ಮಾನ್ಯ ಪ್ರಧಾನ ಮಂತ್ರಿಗಳ ಗಮನಕ್ಕೆ ಸಂಪೂರ್ಣವಾಗಿ ಗಮನ ಸೆಳೆಯುತ್ತಾರೆ.

"Cutting across the political lines, there is an immense sense of disappointment and anger among the people in karnataka over the share of cauvery waters awarded to the state. I am sure, your goodself would agree that such a discontentment and sense of being

discriminated against, among the people of a state does not, angur well either for our democracy or our cherished federal polity." ಇವೆಲ್ಲವನ್ನು ಹೇಳುತ್ತಾ ಅಂದಿನ ಪ್ರಧಾನ ಮಂತ್ರಿಗಳಿಗೆ ಗಮನ ಸೆಳೆದಿದ್ದಾರೆ. "Of the 270 TMC apportioned for karnataka as afainst its demand for 465 TMC, drinking water for greater Bangalore, Mysore, Mandya, Hassan, Chickmagalur, Tumkur and 34 city municipalities alone would require a minimum of 75 TMC of water which would leave the state with a meagse 195 TMC. In a distress year, the state would not be able to comply with the Tribunal's directive to release 134 TMC water during june-September even if its entire storage capacity of 92 TMC is released."

ಹೇಮಾವತಿ, ಕಬಿನಿ, ಹಾರಂಗಿ, ಹಲವಾರು ಜಲಾಶಯುಗಳನ್ನು ಏನು ನಿರ್ಮಾಣ ಮಾಡಿದ್ದೇವೆ ಅದರ ವ್ಯಾಪ್ತಿಯಲ್ಲಿ, ಮೊನ್ನೆಯ ಚುನಾವಣೆಯಲ್ಲಿ ಪಿರಿಯಾಪಟ್ಟಣದ ಜನತೆ ನಿಮ್ಮ ಅಭ್ಯರ್ಥಿಯನ್ನು ಗೆಲ್ಲಿಸುವುದರ ಮೂಲಕ ನಮ್ಮ ಸಭಾನಾಯಕರಿಗೆ ಗೌರವನ್ನು ಕೊಟ್ಟಿದ್ದಾರೆ. ಈ ಒಂದು ಐತೀರ್ಪಿನಲ್ಲಿ ಪಿರಿಯಾಪಟ್ಟಣ ಲಿಫ್ಟ್ ಇರಿಗೇಷನ್ ಪ್ರಾಜೆಕ್ಟ್, ಹುಚ್ಚಿನಕೊಪ್ಪಲು, ಕಾಮಸಮುದ್ರ ಪ್ರಾಜೆಕ್ಟ್ ಮತ್ತು ಹೇಮಾವತಿ ಪ್ರಾಜೆಕ್ಟ್‌ಗಳಿಗೆ ಏನೊಂದು ತೀರ್ಮಾನಗಳನ್ನು ಮಾಡಿದ್ದಾರೆಂದರೆ, "The implication is that these projects on which our state Government invested more than Rs.8,000/- crores to construct all these dams..."ಆದರೆ, ಇವತ್ತಿನದಿವಸ ಆ ಡ್ಯಾಂಗಳ ಸಂಪೂರ್ಣ ನೀರನ್ನು ತಮಿಳುನಾಡಿಗೆ ಕೊಡತಕ್ಕಂಥ ಒಂದು ತೀರ್ಮಾನಗಳು ಈ ಒಂದು ಐತೀರ್ಪಿನಲ್ಲಿ ಆಗಿದೆ. "In fact these projects are meant for semi-dry crops. If these projects are shut down, there will be absolute poverty in these areas and the people will starve. By allocating the water, low reduction has been made in respect of single crop areas in Tamil Nadu. However, in the case of Karnataka, out of 20.98 lakh acres of land for irrigation in its existing and on on-going projects, only 18.85 lakh acres have been taken in to consideration by the

Tribunal."ಈ ಎಲ್ಲ ವಿಷಯಗಳನ್ನು ಫೆಬ್ರವರಿ ತಿಂಗಳ 8ನೇ ತಾರೀಖಿನ ದಿವಸ ಪ್ರಧಾನ ಮಂತ್ರಿಗಳಿಗೆ ಸನ್ಮಾನ್ಯ ದೇವೇಗೌಡರು ಈ ಬಗ್ಗೆ ಸಂಪೂರ್ಣ ಮಾಹಿತಿಯನ್ನು ಕೊಡುತ್ತಾರೆ. 2007ರಲ್ಲಿ ಸನ್ಮಾನ್ಯ ಸೋಮನಾಥ ಚಟರ್ಜಿಯವರು ಲೋಕಸಭೆಯಲ್ಲಿ ಸಭಾಧ್ಯಕ್ಷರಾಗಿದ್ದರು. ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ಅನುಮತಿ ಕೋರಿದಾಗ ಪಕ್ಕದ ತಮಿಳುನಾಡು ರಾಜ್ಯದ 40 ಜನ ಲೋಕಸಭಾ ಸದಸ್ಯರು ಸಂಪೂರ್ಣವಾಗಿ ಪ್ರತಿಭಟನೆ ಮಾಡಿ ನಮ್ಮ ರಾಜ್ಯದ ಲೋಕಸಭಾ ಸದಸ್ಯರು ಮಾತನಾಡುವುದಕ್ಕೆ ಅವಕಾಶವನ್ನೇ ಕೊಡುವುದಿಲ್ಲ. 2007ರಲ್ಲಿ ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ಹೋದಾಗ ಅದನ್ನು ರಿಜೆಕ್ಟ್ ಮಾಡುತ್ತಾರೆ. ಇದರ ಎಲ್ಲ ವಿಷಯಗಳ ಬಗ್ಗೆ ಆಗ ಗಮನ ಸೆಳೆದಿದ್ದಾರೆ. ಹಾಗೆಯೇ ಮಾನ್ಯ ದೇವೇಗೌಡರು ವೈಯಕ್ತಿಕವಾಗಿ ಯುಪಿಎ ಛೇರ್ಮನ್‌ರವರನ್ನು ಭೇಟಿ ಮಾಡಿ ಐತೀರ್ಪಿನ ಹಿನ್ನೆಲೆಯಿಂದ ನಮ್ಮ ರಾಜ್ಯಕ್ಕೆ ಆಗತಕ್ಕಂಥ ಏನೊಂದು ಕೆಟ್ಟ ನಿರ್ಧಾರಗಳ ಬಗ್ಗೆ ಹೇಳಿ ಇದರ ಬಗ್ಗೆ ಒಂದು ಜವಾಬ್ದಾರಿಯನ್ನು ನಿರ್ವಹಿಸುವುದಕ್ಕೆ ತಾವು ಪ್ರಧಾನ ಮಂತ್ರಿಯವರಿಗೆ ಸೂಚನೆ ಕೊಡಬೇಕೆಂದು ಅವರನ್ನು ಭೇಟಿ ಮಾಡಿ ಹೇಳುತ್ತಾರೆ. ತಾವು ಪ್ರಧಾನ ಮಂತ್ರಿಯವರನ್ನು ಭೇಟಿ ಮಾಡಿ ಎಂದು ಅವರು ಇವರಿಗೆ ಹೇಳುತ್ತಾರೆ. ಇದರ ಎಲ್ಲ ಮಾಹಿತಿಗಳನ್ನು ಪತ್ರದ ಮುಖೇನ ಹೇಳಿದ್ದಾರೆ. ಇಂಥ ಒಂದು ಪರಿಸ್ಥಿತಿಯಲ್ಲಿ 2004ರಲ್ಲಿ ಅಂದರೆ ಇದಕ್ಕಿಂತ ಮುಂಚೆ ದಿ.ನಂಜೇಗೌಡರು ಮತ್ತು ಸನ್ಮಾನ್ಯ ರಮೇಶ್ ಕುಮಾರ್‌ರವರು ಅವತ್ತಿನ ಮಾನ್ಯ ಧರ್ಮಸಿಂಗ್‌ರವರ ಸಭೆಯಲ್ಲಿ ಭಾಗವಹಿಸಿದ್ದರು. ಇಂದಿನ ಸಭಾನಾಯಕರು ಅವತ್ತು ನಮ್ಮ ಪಕ್ಷದ ಉಪ ಮುಖ್ಯ ಮಂತ್ರಿಯಾಗಿದ್ದರು. ಆಗ ಮಾನ್ಯ ಧರ್ಮಸಿಂಗ್‌ರವರು ಮುಖ್ಯಮಂತ್ರಿಗಳಾಗಿದ್ದರು. ಆಗ ಗಾಂಧಿ ಸಾಹಿತ್ಯ ಮುಖಾಂತರ ಸುಪ್ರೀಂ-ಕೋರ್ಟ್‌ಗೆ ಒಂದು ಅರ್ಜಿ ಸಲ್ಲಿಸಬೇಕೆಂದು ತೀರ್ಮಾನ ಮಾಡುತ್ತಾರೆ. ಆ ಸಂದರ್ಭದಲ್ಲಿಯೂ ಕೂಡ ಸನ್ಮಾನ್ಯ ದೇವೇಗೌಡರು ಆ ಸರ್ಕಾರಕ್ಕೆ ಒಂದು ಮನವಿ ಮಾಡುತ್ತಾರೆ. ಆ ಸಂದರ್ಭದಲ್ಲಿ ಮಾನ್ಯ ಧರ್ಮಸಿಂಗ್‌ರವರು ಒಂದು ಸಭೆಯನ್ನು ಕರೆದಿದ್ದರು. ಆ ಸಭೆಯಲ್ಲಿ ತಾವೂ ಭಾಗವಹಿಸಿದ್ದೀರಿ. ದಿ.ನಂಜೇಗೌಡರು ಆ ಸಭೆಯಲ್ಲಿ ಭಾಗವಹಿಸಿ ಎಲ್ಲ ವಿಚಾರಗಳನ್ನು ಮಂಡನೆ ಮಾಡಿದರು. ಆದರೆ, ಅಲ್ಲಿ ಒಂದು ಅಚಾತುರ್ಯ ನಡೆಯಿತು. ಆ ಒಂದು ಸಮಿತಿಯ ಮುಖಾಂತರ ಅರ್ಜಿಯನ್ನು ಸಲ್ಲಿಸುವುದಕ್ಕೆ ಮುಖ್ಯ ಕಾರಣ ಏನೆಂದರೆ, ಅಲ್ಲಿದ್ದಂಥ ಟ್ರಿಬ್ಯುನಲ್‌ನ ಛೇರ್ಮನ್‌ರವರು ಹಾಗೂ ಇಬ್ಬರು ಸದಸ್ಯರಲ್ಲಿ difference ಇತ್ತು. ಆ ವಿಷಯಕ್ಕೆ ಸಂಬಂಧಪಟ್ಟಂತೆ ಈಗ ಅರ್ಜಿಯನ್ನು ಸಲ್ಲಿಸಿದರೆ ಟ್ರಿಬ್ಯುನಲ್ ಅನ್ನು ಮತ್ತೆ ಬೇರೆ ರಚನೆ

ಮಾಡುತ್ತಾರೆಂಬ ನಿರ್ಧಾರಗಳು ಆಗಬಹುದೆಂಬ ಹನ್ನೆಲೆಯಲ್ಲಿ ನಾವು ಪ್ರಯತ್ನಪಟ್ಟೆವು. ಬೆಳಿಗ್ಗೆ ಸರ್ಕಾರದ ಮುಖಾಂತರ ಮನವಿಯನ್ನು ಸಲ್ಲಿಸುತ್ತೇವೆಂದು ಅವತ್ತಿನದಿವಸ ಸನ್ಮಾನ್ಯ ಧರ್ಮಸಿಂಗ್‌ರವರು ಅದಕ್ಕೆ ಒಪ್ಪಿಗೆ ಕೊಟ್ಟರು. ಮಧ್ಯಾಹ್ನ 12 ಗಂಟೆ ಆಯಿತು, 1 ಗಂಟೆ ಆಯಿತು, ಆದರೂ ಸಹ ರಾಜ್ಯ ಸರ್ಕಾರದ ಮುಖಾಂತರ ಯಾರೇ ಹೋಗಿ ಈ ಒಂದು ಗಾಂಧಿ ಸಾಹಿತ್ಯ ಸಂಘ ಟ್ರಸ್ಟ್‌ಗೆ ಬೆಂಬಲವಾಗಿ ನಿಲ್ಲುವುದಕ್ಕೆ ತೀರ್ಮಾನ ಮಾಡದೇ ಇರುವುದು ಎಲ್ಲೋ ಒಂದು ಕಡೆ ಮಿಸ್ಟೇಕ್ ಆಯಿತೆಂದು ನನ್ನ ಅಭಿಪ್ರಾಯ. ಅವರ ಮೂಲಕ ಹಾಕುವುದು ಬೇಡ ಎಂದು ಯಾರು ಒತ್ತಡ ಹಾಕಿದರೆಂದು ಗೊತ್ತಿಲ್ಲ. ಅವತ್ತಿನದಿವಸ ನಮಗೊಂದು ಅವಕಾಶ ಇತ್ತು. "The second and third orders passed ere entirely improper and contrary to all norms of judicial etiquette. However, nothing turns on the second and third orders dated 3rd August 2004 which were in our view an unseemly and wholly unnecessary exercise."ಆನಂತರ ನಮ್ಮ ಸರ್ಕಾರಕ್ಕೆ ಸ್ವಲ್ಪ ಮನವರಿಕೆ ಆಯಿತು. ಆನಂತರ ಐದಾರು ದಿವಸ ಬಿಟ್ಟು supportive ಆಗಿ ಇರುವುದಕ್ಕೆ ಹೋದರು. ಆಗ ಸುಪ್ರೀಂ ಕೋರ್ಟ್‌ನವರು ಒಂದು ಮಾತನ್ನು ಹೇಳಿದರು. "on the other hand, it is clear from the facts as narrated above, that it had accepted the orders of the Tribunal." ಏಕೆಂದರೆ, ಎರಡು ರಾಜ್ಯಗಳಿಗೆ ಆ ಇಬ್ಬರು ಸದಸ್ಯರು ಭೇಟಿ ಕೊಡಬೇಕೆಂದು ಹೇಳುತ್ತಾರೆ. ಆದರೆ, ಅದಕ್ಕೆ ಛೇರ್ಮನ್‌ರವರ ಪರ್ಮಿಷನ್ ಇರುವುದಿಲ್ಲ. ಛೇರ್ಮನ್ ಅದಕ್ಕೆ ಒಪ್ಪಿಗೆ ಕೊಡದೇ ಇದ್ದರೂ ಸಹ ಅವರಿಬ್ಬರು ಅವರದೇ ಆದಂಥ wayನಲ್ಲಿ ಬರಬೇಕೆಂದು ಹೊರಡುತ್ತಾರೆ. ಆಗ ಅಲ್ಲಿ difference create ಆಗುತ್ತದೆ. ಈ ಒಂದು ಹಿನ್ನೆಲೆಯಲ್ಲಿ ನಾವು ಸುಪ್ರೀಂ ಕೋರ್ಟ್ ಮುಂದೆ ಅರ್ಜಿ ಸಲ್ಲಿಸಬೇಕೆಂದು ಹೋದಂಥದ್ದು. ಆದರೆ, ನಾವು ಸ್ವಲ್ಪ ತಡವಾಗಿ ಹೋಗುತ್ತೇವೆ. "On the other hand, it is clear from the facts as narrated above, that it had accepted the orders of the Tribunal and had submitted a detailed programme giving effect to the directions of the Tribunal. We are not therefore prepared to allow the State of karnataka to step into the shoes of the appellant as was prayed by it during the

hearing."ಅವತ್ತು ಆದಂಥ ಒಂದು ಸಣ್ಣ ಮಿಸ್ಟೇಕ್ ನಿಂದ ಈ ಒಂದು ಸಂಕಷ್ಟಕ್ಕೆ ನಮ್ಮನ್ನು ನಾವೇ ದೂಡಿಕೊಂಡೆವು. "Having regard to the absence of *locus standi* in the appellant, it is unnecessary for us to decide the other issues raised by the appellant." 2007 ಫೆಬ್ರವರಿ 2ನೇ ತಾರೀಖಿನ ದಿವಸ ಟ್ರಿಬ್ಯುನಲ್ ಐತೀರ್ಪು ಕೊಟ್ಟಿದೆ. ಆ ಸಂದರ್ಭದಲ್ಲಿ ನಾನೇ ಮುಖ್ಯಮಂತ್ರಿಯಾಗಿದ್ದೆ. ಫೆಬ್ರವರಿ ತಿಂಗಳಲ್ಲಿ ಆದೇಶವಾಗುತ್ತದೆ, ಏಪ್ರಿಲ್ ತಿಂಗಳಲ್ಲಿ ನಾವು Special Leave petition ಹಾಕಿದ್ದೇವೆ. ಏಕೆಂದರೆ, ಕಾವೇರಿ ನೀರು ಉಳಿಸುವುದಕ್ಕೆ ನೀವು ಮುಖ್ಯ ಮಂತ್ರಿಯಾಗಿದ್ದಾಗ ಏನು ಮಾಡಿದ್ದೀರೆಂದು ಈಗಿನ ನಮ್ಮ ಮುಖ್ಯಮಂತ್ರಿಗಳು ಹಲವಾರು ಕಡೆ ಭಾಷಣ ಮಾಡಿರುವುದನ್ನು ನಾನು ನೋಡಿದ್ದೇನೆ. ಐತೀರ್ಪು ಬಂದಂಥ ಅವತ್ತಿನದಿವಸ ತಕ್ಷಣವೇ ಕೆಲವು ಕ್ರಮಗಳನ್ನು ತೆಗೆದುಕೊಳ್ಳುವುದರ ಮುಖಾಂತರ ಈ ಐತೀರ್ಪಿನಲ್ಲಿ ನಮ್ಮ ರಾಜ್ಯಕ್ಕೆ ಆಗಿರತಕ್ಕಂಥ ಹಲವಾರು ಅನ್ಯಾಯಗಳ ಬಗ್ಗೆ ಸುಪ್ರೀಂ ಕೋರ್ಟ್‌ನಲ್ಲಿ ಹಾಕಿದ್ದಂಥ SLP ಅರ್ಜಿಯನ್ನು ಸುಪ್ರೀಂ ಕೋರ್ಟ್ ಬಹುಶಃ ಆಗಸ್ಟ್ 6ನೇ ತಾರೀಖು ವಿಚಾರಣೆಗೆ ತೆಗೆದುಕೊಳ್ಳುತ್ತಿದೆ. ಇವತ್ತಿನದಿವಸ ನಮಗೆ ಐತೀರ್ಪಿನಿಂದ ಯಾವರೀತಿಯಾಗಿ ಅನ್ಯಾಯವಾಗಿದೆ ಎಂಬ ಕೆಲವೊಂದು ವಿಷಯಗಳನ್ನು ಈ ಸದನದ ಸದಸ್ಯರ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಇದರ ಹಿನ್ನೆಲೆಯಲ್ಲಿ ನಾನು ಸರ್ಕಾರದ ಗಮನ ಸೆಳೆದಿದ್ದು ಏತಕ್ಕೆ ಎಂದರೆ ರಾಜ್ಯಪಾಲರ ಭಾಷಣದಲ್ಲಿ "ಐತೀರ್ಪಿಗೆ ಅನುಸಾರವಾಗಿ" ಎಂದು ಇರುವುದನ್ನು ತೆಗೆಯಬೇಕೆಂದು ಈ ದೃಷ್ಟಿಯಿಂದ ನಾನು ಮವಿ ಮಾಡಿದ್ದೇನೆ. ನಮಗೆ ಯಾವ್ಯಾವ ಮಟ್ಟಿಗೆ ನಮಗೆ ಅನ್ಯಾಯವಾಗಿದೆ ಎಂಬ ಬಗ್ಗೆ SLP ಹಾಕಿದ್ದೇವೆ." Karnataka has right from the beginning objected to Tamil Nadu's affidavit and particularly response affidavit which is Exhibit No.1665 dated 8th July 2004. The entire argument of Tamil Nadu is based on wrongly over-estimated evaposated transpiration and incorrectly under estimated, effective rainfall in Tamil Nadu, Exhibit-1665 and other materials said to be given across the Bar in the form of statements and notes. This Hon'ble Tribunal has repeatedly clarified that Tamil Nadu Exhibit No.1665 and similar materials can only be used against

party states as on admission and could not be used in support of any affirmative case. Contrary to the above assurance. The Tribunal in its decision principally relied on Tamil Nadu's affidavit to ascertain and record finding on the crop water requirement of Tamil Nadu as being 391 TMC for irrigating 24.7 lakh acres ignoring the entire case of karnataka, Even relying on the affidavit, it could only have been about 256 TMC, Argument advanced in KAR note No.25 does not even dealt with fully. The bickering amongst the Hon'ble Judges of the Tribunal hearing the matter had prompted the senior counsel for the State of Tamil Nadu on 10.07.2006 to state in exasperation as follows:"

ತಮಿಳುನಾಡಿನ ಕೌನ್ಸಿಲ್‌ನವರು Judgesಗೆ ಹೇಳುತ್ತಾರೆ. "The judges are there to resolve the differences among counsels, but the Bar is not there to solve your differences. Please solve all your differences in your cabin. I have never seen this bitterness or experienced this in my 56 years as an advocate." ಇದನ್ನು ತಮಿಳುನಾಡು Advocateರವರು ಬಹುಶಃ ಪರಾಶರನ್‌ರವರು ಇರಬಹುದು. ಅವರು ಅವತ್ತು tribunal ಸದಸ್ಯರಿಗೆ ಆ tribunal ಮುಂದೆ ಹೇಳಿರತಕ್ಕಂಥದ್ದು. ನಾನು Judgesನ integrity ಬಗ್ಗೆ ಚರ್ಚೆ ಮಾಡುವುದಿಲ್ಲ. ಅವರಲ್ಲಿಯೇ divided house ಏನಿತ್ತು ಆ ಪರಿಸ್ಥಿತಿಯಲ್ಲಿ ನಾವು ಸ್ವಲ್ಪ ಬುದ್ಧಿವಂತಿಕೆಯಿಂದ ಕೆಲವೊಂದು ತೀರ್ಮಾನಗಳನ್ನು ಮಾಡಿದ್ದರೆ ಇವತ್ತು ಇಂತಹ ಪರಿಸ್ಥಿತಿ ನಮಗೆ ಇರುತ್ತಿರಲಿಲ್ಲ. ಆದರೂ, "A statement was concurred in by the counsel of the State of karnataka, it is apprehended that this bitterness has conditioned the entire approach in the final decision." ನಂತರ ನಮ್ಮ Senior Counsel ನಾರಿಮನ್‌ರವರು Supreme Courtನ ಮುಂದೆ ಒಂದು note ನಲ್ಲಿ ಹೇಳುತ್ತಾರೆ, ಇದು PIL admit ಆದ ಮೇಲೆ. "The State of Karnataka reserves its right to make appropriate submissions on the functioning

of the Hon'ble Tribunal and the prejudicial impact on the decision and the adjudicatory process involved therein including adverse impact on the life of future generations of karnataka people particularly farmers." ಇಲ್ಲಿ ಹಲವಾರು meetingನಲ್ಲಿ 21.04.2006, 10.05.2006, ಹಲವಾರು ವಿಷಯಗಳ ಬಗ್ಗೆ 'Hon'ble Chairman dissented, 'Hon'ble Chairman dissented.' ಇಷ್ಟೆಲ್ಲಾ ಇದ್ದರೂ ಕೂಡ ಇವತ್ತು ಆ tribunal ನಲ್ಲಿ ಇರತಕ್ಕಂಥ ಒಡಕು ಏನಿದೆ ಇದೆಲ್ಲದರ ವಿಷಯವನ್ನು ನಾವು ಇವತ್ತು Supreme Courtನ ಗಮನಕ್ಕೆ ಏನು ತಂದಿದ್ದೇವೆ, ಇವತ್ತು ನಮ್ಮ ಹೊಸ ಮುಖ್ಯಮಂತ್ರಿಗಳು ಬಹುಶಃ ಇಲ್ಲಿ ಎಲ್ಲೋ ಹೇಳಿದ್ದಾರೆ. "ಕುಡಿಯುವ ನೀರು ಕೊಡದಿದ್ದರೆ ನೀರು ಇಳಿಸುತ್ತೇನೆ ಹುಷಾರ್" ಎಂದು ಹೇಳಿದ್ದೀರಿ. ಅಧಿಕಾರಿಗಳಿಗೆ ಎಚ್ಚರಿಕೆ ಕೊಡಬೇಕು, ಅದಕ್ಕೆ ನಾನು ಒಪ್ಪಿಗೆಯನ್ನು ಕೊಡುತ್ತೇನೆ. "ಕುಡಿಯುವ ನೀರು ಕೊಡದಿದ್ದರೆ ನೀರು ಇಳಿಸುತ್ತೇನೆ ಹುಷಾರ್' ಅಧಿಕಾರಿಗಳಿಗೆ ಸಿ.ಎಂ. ಸಿದ್ದು ಖಡಕ್ ಎಚ್ಚರಿಕೆ" ಎಂದು ಬರೆದಿದ್ದಾರೆ. ಆದರೆ ಇವತ್ತು ಈ ಕಾವೇರಿ Tribunalನ ಐತೀರ್ಪು ನಮಗೆ ಮಾಡಿರುವ ದೊಡ್ಡ ಅನ್ಯಾಯ. "The drinking water needs of 2/3rd of the population of Bangalore-Merely on the ground that 2/3rd of the area of Bangalore Metropolitan City did not fall within the Cauvery Basin area...ಈ ಐತೀರ್ಪಿನಲ್ಲಿ ಕೊಟ್ಟಿದ್ದಾರೆ. ಮುಖ್ಯಮಂತ್ರಿಗಳು ನೀವು ಅಧಿಕಾರಿಗಳಿಗೆ ಎಚ್ಚರಿಕೆ ಕೊಟ್ಟಿದ್ದೀರಿ, ಮುಂದೆ ನಾವು ಜನಪ್ರತಿನಿಧಿಗಳು ಇದರಲ್ಲಿ ದಾರಿ ತಪ್ಪಿ ಮುಂದೆ ಹೆಚ್ಚು ಕಡಿಮೆ ಐತೀರ್ಪಿನಿಂದ ಅನಾಹುತ ಆದರೆ ಐತೀರ್ಪು ಅನುಮೋದನೆಯಾಗಿ ಅಂತಿಮ ನಿರ್ಣಯವಾದರೆ ಮುಂದೆ ರಾಜ್ಯದ ಜನತೆ ನಮ್ಮಗಳಿಗೆ ನೀರು ಇಳಿಸುತ್ತಾರೆ. ಜನಪ್ರತಿನಿಧಿಗಳಿಗೆ ನೀರು ಇಳಿಸುತ್ತಾರೆ. ಜನರಿಗೆ ಅಧಿಕಾರಿಗಳು ಸಿಕ್ಕುವುದಿಲ್ಲ. ಕೊನೆಗೆ ಸಿಕ್ಕಿಹಾಕಿಕೊಳ್ಳುವಂಥವರು ನಾವು. ಮುಂದೆ ಜನ ನಮಗೆ ನೀರು ಇಳಿಸುತ್ತಾರೆ. ಜನರಿಗೆ ಅರ್ಥವಾಗುವುದಿಲ್ಲ, ಅವರಿಗೆ ನೀರು ಬೇಕಾಗಿರುತ್ತದೆ. ನೀರು ಕೊಡಬೇಕು ಅವರಿಗೆ, ಏನು ತೀರ್ಪು ಕೊಟ್ಟಿದ್ದಾರೆ ಅದು ಅವರ ಮುಂದೆ ಇರುವುದಿಲ್ಲ. ನಾವು ಹಳ್ಳಿಗೆ ಹೋಗಬೇಕು. ಜನರ ಮುಂದೆ ಹೋದಾಗ ಅವರು ನೀರು ಕೇಳಿದಾಗ ಏನು ಉತ್ತರ ಕೊಡುವುದು? ಆಗ ನಮ್ಮನ್ನು ನೀರು ಇಳಿಸತಕ್ಕಂಥ ಪರಿಸ್ಥಿತಿ ಬರಬಾರದು. ಅದಕ್ಕಾಗಿ ನಾನು

ಹೇಳಿರುವುದು ಆ ಐತೀರ್ಪು ಎನ್ನುವಂಥ ಪದವನ್ನು ತೆಗೆದು ಹಾಕಬೇಕು ಎಂದು ಹೇಳಿದ್ದೆ. ನಂತರ "Did the Tribunal err in disallow in the Aayakat area of 2.15 lakh acres of karnataka falling under the category 2nd and 3rd on the ground of constraint of available water and then incosistently with that finding allocate 445 TMC as balance water giving 24.71 TMC to Tamil Nadu for use in the unknown and undisclosed projects." Tribunal ನವರು ಆ ತೀರ್ಪಿನಲ್ಲಿ ತಮಿಳುನಾಡಿಗೆ ಯಾವ ರೀತಿಯಲ್ಲಿ gift ಕೊಟ್ಟಿದ್ದಾರೆ. "...Unknown and undisclosed projects." They can utilize 24.71 TMC of water. ಇಲ್ಲಿ ನಮಗೆ ಏನು ಹೇಳುತ್ತಾರೆ. ನಮ್ಮ ಹಣದಿಂದ ಕಟ್ಟಿರುವ ಯಾವ ಡ್ಯಾಂಗಳು ಇವೆ, ನಮಗೆ ಅವರು restriction ಹಾಕಿದ್ದಾರೆ. ಅದರ ಜೊತೆಯಲ್ಲಿ, "16,000 acres of second crop of pre 1924 have been double accounted by including in both Tamil Nadu and pondicherry. Therefore, 16,000 acres should be deducted from the total of 24.71 lakh acres. Then 37,334 acres of second crop of farming coming under category-1 have been double-accounted including in both delta and Salem-Thirchi Channels. Therefore, 37,334 acres should be deducted from the total 24.71 lakh acres. Again 22,000 acres of first crop coming under category-3,beyond the terms of 1924 agreement have been double-accounted by including both in katta line and polambadi schemes and under minor irrigation, Therefore, 22,000 acres of first crop should be deducted from the total 24.71 lakh acres."ಇದೆಲ್ಲಾ additional ಆಗಿ ಕೊಡುತ್ತಾ ಹೋಗುತ್ತಾರೆ. ಮತ್ತೆ, one more issue. "44,000 acres of irrigation under Mettur canal is not permissible under category-2. But it could have been considered under category-3." ಈ ರೀತಿಯಾಗಿ ಅವರಿಗೆ additional ಆಗಿ, "Did the Tribunal act arbitrarily in allowing 3.32 lakh acres of irrigation in tamil Nadu under category-3, i.e., area

beyond the terms of 1924 agreement which includes 2.53 lakh acres of paddy and 0.79 lakh acres of semi-dry crops leading to disparity in the allocation?" ಇವತ್ತು ಆ ಐತೀರ್ಪಿನಲ್ಲಿ ಹಲವಾರು ರೀತಿಯಲ್ಲಿ ನಮಗೆ ಅನ್ಯಾಯ ಆಗತಕ್ಕಂಥ ರೀತಿಯಲ್ಲಿ ತೀರ್ಪುಗಳು ಆಗಿವೆ. ನಮಗೆ ಏನು ಮಾಡಿದ್ದಾರೆಂದರೆ, "Did the Tribunal fail to apply its mind when it allocated only 8.75 TMC i.e., conceptive use of 1.75 TMC as domestic supplies in karnataka including drinking water supplies to Bangalore city when Delhi. Mumbai require 62 TMC and 38TMC respectively." ನಮಗೆ drinking water ಬಗ್ಗೆ 2025 ಇಸವಿಯವರೆಗೆ ನಮಗೆ ಕೊಡಿ ಎಂದು ನಾವು ಕೇಳಿದ್ದೇವೆ. ಅವರು order- ಮಾಡಬೇಕಾದರೆ 2011ಕ್ಕೆ limit ಮಾಡುತ್ತಾರೆ. ಇವತ್ತು ಬೆಂಗಳೂರಿನ ನಾಗರಿಕರು ಕುಡಿಯುವ ನೀರಿನ ಬಗ್ಗೆ ಮುಂದೆ ಏನಾಗುತ್ತದೆ ಎನ್ನುವುದರ ಬಗ್ಗೆ ಚಿಂತನೆ ಇಲ್ಲ, ಇವತ್ತು ಯಾರೂ ಪ್ರತಿಭಟನೆ ನಡೆಸುವುದಕ್ಕೂ ಮುಂದೆ ಬರುವುದಿಲ್ಲ. ಮುಂದಿನ ದಿನಗಳಲ್ಲಿ ನಮಗೆ ಏನಾಗಬಹುದು? "Whether the decision of the Tribunal is ultra vires of the constitution unless the aggrieved State is given an opportunity in the form of an appeal against such decision being a part of fair procedure?" Drinking waterಗೆ 2/3rd area ಬೆಂಗಳೂರು ನಗರ Cauvery basinಗೆ ಬರುವುದಿಲ್ಲವೆಂದು ಹೇಳಿ ಇಲ್ಲಿ ಬೆಂಗಳೂರು ನಗರವನ್ನು consider ಮಾಡುವುದಕ್ಕೆ ಬರುವುದಿಲ್ಲವೆಂದು ತೀರ್ಪು ಕೊಡುತ್ತಾರೆ. ದೆಹಲಿಯಲ್ಲಿ ನೀರು ಕೊಟ್ಟಿದ್ದಾರೆ. ಇದರ ಬಗ್ಗೆ ನಮ್ಮ ಮಾಜಿ ಅಧ್ಯಕ್ಷರು ಗಮನವನ್ನು ಸೆಳೆಯಬೇಕು. ನರ್ಮದಾ ನದಿಯಿಂದ, 400 ಕಿ.ಮೀ.ದಿಂದ ದೆಹಲಿಗೆ ನೀರು ಕೊಡುವುದಕ್ಕೆ ಅಲ್ಲಿ ಒಪ್ಪಿಗೆ ಕೊಡುತ್ತಾರೆ. ಇಲ್ಲಿ ಕಾವೇರಿ ನೀರನ್ನು ಬೆಂಗಳೂರು ನಗರಕ್ಕೆ ಕೊಡುವುದಕ್ಕೆ consider ಮಾಡುವುದಕ್ಕೆ ಸಾಧ್ಯವಿಲ್ಲವೆಂದು ಈ ಕಾವೇರಿ ಐತೀರ್ಪು ಕೊಟ್ಟಿರುವಂಥದ್ದು." Whether the Tribunal erred in allocating a meagse quantity of 8.75 TMC i.e., 1.75 TMC of consumptive use to meet the domestic supplies in Karnataka including drinking water supply of Bangalore city? It is submitted that as against the demand of 52 TMC made by

karnataka on their projected population of 2025, the Tribunal erroneously found the domestic requirement of karnataka as 17.22 TMC based upon the projected population of 2011. While so estimating, the Tribunal strangely excluded the major part of the Bangalore city on the ground that it does not fall in the Cauvery catchment area. After having found that the karnataka's drinking water requirement is 17.22 TMC, the Tribunal has surmised that 50% of the quantity comes from the ground water which is 8.72 TMC. Thereafter, the Tribunal records that out of remaining 8.72 TMC which should be met from the surface water of Cauvery, the conceptive utilization is only 20% as the remaining 80% returns to the system.of this logic the Tribunal ends up by allocating 1.75 TMC as drinking water requirement to karnataka." ಇವತ್ತು 2 1/4 ಕೋಟಿ ಜನತೆ ಏನಿದ್ದಾರೆ ಅವರಿಗೆ ಕಾವೇರಿ ಐತೀರ್ಪಿನಲ್ಲಿ 1.75 ಟಿ.ಎಂ.ಸಿ. ಕಾವೇರಿ ನೀರನ್ನು ಕೊಟ್ಟಿದ್ದೀರಿ. 'After adding industrial water requirement of 0.10 TMC, the domestic water requirement has been totalled as 1.85 TMC in karnataka.' ಇದು ಈ ಐತೀರ್ಪಿನಲ್ಲಿ ಕೊಟ್ಟಿರತಕ್ಕಂಥದ್ದು ಏನಿದೆ, ನಾವು ಬೆಂಗಳೂರು ನಗರದ ನಾಗರಿಕರು ಮುಂದೆ ಎಲ್ಲಿ ಹೋಗಿ ನಿಲ್ಲುತ್ತೇವೆ? ಇವತ್ತು ನಮ್ಮ ಪಕ್ಷದವರು ಲಕ್ಷಾಂತರ ರೂಪಾಯಿ ಖರ್ಚು ಮಾಡಿ ಜಾಹೀರಾತು ಕೊಟ್ಟೆವು. 'ಮಹಾತ್ಮರೆ, ನಿಮ್ಮ ಹಣೆಬರಹ ನೋಡಿಕೊಳ್ಳಿ. ಮುಂದೆ ಎಲ್ಲಿ ಹೋಗಿ ನಿಲ್ಲುತ್ತೀರಿ? ಹುಷಾರು, ಹುಷಾರು' ಎಂದು ಹೇಳಿದೆವು. ಬಹುಶಃ ಮಾನ್ಯ ರಮೇಶ್ ಕುಮಾರ್‌ರವರು ಸಭಾಧ್ಯಕ್ಷರು ಆಗಿದ್ದರು. ಸನ್ಮಾನ್ಯ ಸಭಾ ನಾಯಕರು ಅವತ್ತು Deputy chief Minister, ಇಲ್ಲ Finance Minister ಇರಬೇಕು. ಆಗ ಸನ್ಮಾನ್ಯ ದೇವೇಗೌಡರು ಮುಖ್ಯಮಂತ್ರಿಗಳಾಗಿದ್ದರು. ಬಹುಶಃ ಬೆಂಗಳೂರಿಗೆ ಕುಡಿಯುವ ನೀರಿನ ವ್ಯವಸ್ಥೆಗಾಗಿ Asian Development Bank ನಿಂದ 1,300 ಚಿಲ್ಲರೆ ಕೋಟಿ ರೂಪಾಯಿ aid ನ ಹಣವನ್ನು ಪಡೆಯುತ್ತಾರೆ. ಅದರಲ್ಲಿ 900 ಕೋಟಿ ರೂಪಾಯಿ aid ನದ್ದು. ಅದನ್ನು ವಾಪಸ್ಸು ಕೊಡತಕ್ಕಂಥದ್ದು ಏನೂ ಇಲ್ಲ. ಅವತ್ತು ಕೇಂದ್ರ ಸರ್ಕಾರಕ್ಕೆ ನಾವು 9 ಟಿ.ಎಂ.ಸಿ ನೀರನ್ನು ಉಪಯೋಗ ಮಾಡಿಕೊಳ್ಳುವುದಕ್ಕೆ ಅನುಮತಿ ಕೊಡಿ

ಎಂದು ಪತ್ರ ಬರೆಯುತ್ತೇವೆ. ಆ ಒಂದು requirement ಅನ್ನು ತೆಗೆದುಕೊಂಡು ಹೋಗುತ್ತೇವೆ, request ಮಾಡುತ್ತೇವೆ. ಅವತ್ತು ಕೇಂದ್ರ ಸರ್ಕಾರದವರು reject ಮಾಡಿದರು. ಈ ರಾಜ್ಯದ ಜನ ಒಂದು ಅವಕಾಶವನ್ನು ಕಲ್ಪಿಸಿಕೊಟ್ಟರು. ದೇವೇಗೌಡರು ಆಗ ಲಾಟರಿ ಪ್ರಧಾನಿ ಮಂತ್ರಿಗಳು ಆಗಿಬಿಟ್ಟರು. ಆಗ ಮತ್ತೆ ಅವರು 1,300 ಕೋಟಿ ಪ್ರಾಜೆಕ್ಟ್‌ನಲ್ಲಿ ಮಾಡಲಿಕ್ಕೆ ಬಹುಶಃ ಹಿಂದೆ ಇದ್ದಂತಹ ಸರ್ಕಾರ ಕೇವಲ 100 ರೂಪಾಯಿ ಬಜೆಟ್‌ನಲ್ಲಿ ಇಟ್ಟಿದ್ದರು. ಈ ಬೆಂಗಳೂರು ನಗರದ ನಾಗರಿಕರಿಗೆ 3rd stage ಇರಬೇಕು. ಹಿಂದೆ ಇದ್ದಂತಹ ಸರ್ಕಾರ, ದೇವೇಗೌಡರ ಸರ್ಕಾರ ಬರುವುದಕ್ಕೆ ಮುಂಚೆ ಬಹುಶಃ ವೀರಪ್ಪ ಮೊಯಿಲಿಯವರ ಸರ್ಕಾರ ಇರಬೇಕು. ಬಜೆಟ್‌ನಲ್ಲಿ 100 ರೂಪಾಯಿ ಇಟ್ಟಿದ್ದರು. ಆದರೆ 1,300 ಕೋಟಿ ರೂಪಾಯಿ ಹಣವನ್ನು ತರುವುದರಲ್ಲಿ ಏನು ಯಶಸ್ವಿಯಾಗಿದ್ದರು, ಕಾವೇರಿಯಿಂದ ಆ 9 ಟಿ.ಎಂ.ಸಿ. ನೀರನ್ನು ಕೊಡಲಿಕ್ಕೆ ಕೇಂದ್ರ ಸರ್ಕಾರದವರು reject ಮಾಡುತ್ತಾರೆ. ನಮಗೆ ಕೊಡುವುದಿಲ್ಲ. ನಂತರ ದೇವೇಗೌಡರೇ ಪ್ರಧಾನ ಮಂತ್ರಿಗಳಾಗಿ 9 ಟಿ.ಎಂ.ಸಿ. ನೀರನ್ನು ಕೊಟ್ಟಿದ್ದರಿಂದ, ಬೆಂಗಳೂರು ನಗರದ ನಾಗರಕರಿಗೆ ಕುಡಿಯಲು ನೀರನ್ನು ಕೊಡುವುದಕ್ಕೆ ನಮ್ಮ ಸ್ನೇಹಿತರುಗಳು ಮೊನ್ನೆ ನವೆಂಬರ್ ತಿಂಗಳಿನಲ್ಲಿ 4th Stage ಕಾರ್ಯಕ್ರಮವನ್ನು inaugurate ಮಾಡಿದರು. ಅದರಿಂದ ಇವತ್ತು ಈ ಎಲ್ಲಾ ಕಾರ್ಯಕ್ರಮಗಳು ಏನು ಮಾಡಿಕೊಂಡಿದ್ದೇವೆ, ಈ ಐತೀರ್ಪು ಅಂತಿಮವಾಗಿ, ಇವತ್ತು ಯಾವ Supervisory Committee ಮಾಡುವುದಕ್ಕೆ ಹೊರಟಿದಾರೆ, ಎಲ್ಲಿ ಹೋಗಿ ನಿಲ್ಲುತ್ತೇವೆ, ಮಾನ್ಯ ಅಧ್ಯಕ್ಷರೆ? ಮುಂದೆ ಇಲ್ಲಿಗೆ ನೀರನ್ನು ಎಲ್ಲಿಂದ ತರುತ್ತೀರಿ? The Tribunal ought to have noted that the drinking water is a part of Article 21 of the Constitution which guarantees right to life as held by this Hon'ble Court in Delhi Municipal supply case, 1995 reported in 1996 (2) SSC 572. Having regard to these considerations, karnataka, Andhra pradesh and Maharashtra agreed to part 15 TMC of their allocated water in krishna to meet the drinking water requirements of madras city under the Telugu Ganga in 1978. Delhi, which is the part of yamuna basin, gets a good part of its requirement from outside the Ravi-Beas basin, which is

about 400 km. away." ನಮ್ಮನ್ನು ಇವತ್ತು ಯಾವ ರೀತಿ ಗುರುತಿಸುತ್ತಿದ್ದಾರೆ? ಬಹುಶಃ ಕರ್ನಾಟಕ ರಾಜ್ಯ ಈ ದೇಶದ ಭೂಪಟದಲ್ಲಿ ಇದೆ ಎನ್ನುವುದನ್ನೇ ಮರೆಯುತ್ತಿದ್ದಾರೋ ಏನೋ ಗೊತ್ತಿಲ್ಲ. ಇವತ್ತು ನಮಗೆ ಯಾವ ಒಂದು ನ್ಯಾಯ ಕೊಡುತ್ತಿದ್ದಾರೆ? ನಮ್ಮನ್ನು ಯಾವ ರೀತಿ ಮಲತಾಯಿ ಧೋರಣೆಯಿಂದ ಗುರುತಿಸುತ್ತಿದ್ದಾರೆ? ಇವತ್ತು ಬೇರೆ ರಾಜ್ಯಗಳಿಗೆ ಯಾವ ರೀತಿ top priority ಸಿಗುತ್ತಿದೆ? ಇದಕ್ಕೆ ಯಾವ ರೀತಿಯಲ್ಲಿ ಮುಂದೆ ತೀರ್ಮಾನಗಳನ್ನು ಮಾಡಬೇಕು ಎನ್ನುವುದನ್ನು ಸದನ ನಿರ್ಣಯ ಮಾಡಬೇಕು. ಇವತ್ತು, ಹುಚ್ಚಿನಕೊಪ್ಪಲು, ಚನ್ನಪಟ್ಟಣದ ಶಾಸಕರು ಬಂದಿದ್ದಾರೋ ಇಲ್ಲವೋ ಗೊತ್ತಿಲ್ಲ ಅಧ್ಯಕ್ಷರೆ, ಚನ್ನಪಟ್ಟಣದ ರಸ್ತೆಗಳಲ್ಲಿ ಭಗೀರಥ ಎನ್ನುವುದನ್ನು ನೋಡಿದೆ. ಕಬಿನಿ, ಪಿರಿಯಾಪಟ್ಟಣ Lift Component of Harangi Reservoir Project, ತಾರಕ, ಇಗ್ಗಲೂರು, Devaraj Urs canal. ಇವುಗಳನ್ನು ಈ ಒಂದು ತೀರ್ಪಿನಲ್ಲಿ ಏನು ಮಾಡಿದ್ದಾರೆ, ಇವತ್ತು ಯಾವ ಒಂದು ಪಿರಿಯಾಪಟ್ಟಣದ ಜನ ನಮ್ಮ ಮುಖ್ಯಮಂತ್ರಿಗಳಿಗೆ ಗೌರವ ತಂದು ಕೊಟ್ಟರು 30,000 ಎಕರೆ ನೀರಾವರಿ ವ್ಯವಸ್ಥೆ ಮಾಡಲಿಕ್ಕೆ ಯಾವ Lift Irrigation Scheme ಮಾಡಿಕೊಂಡಿದ್ದೀರಿ? ಇವತ್ತು except ಸೋಮವಾರ ಪೇಟೆಯಲ್ಲಿ ಹಾರಂಗಿ ಜಲಾಶಯದ ನಿರ್ಮಾಣಕ್ಕೆ 1,500 ಎಕರೆ ಭೂಮಿಯನ್ನು ಅಲ್ಲಿಯ ಜನ ಏನು ಕಳೆದುಕೊಂಡಿದ್ದಾರೆ, ಆ 1,500 ಎಕರೆಗೆ ಮಾತ್ರ ನೀರಿನ ಸೌಲಭ್ಯವನ್ನು ಕೊಟ್ಟಿದ್ದಾರೆ.

(ಈ ಹಂತದಲ್ಲಿ ಮಾನ್ಯ ಸಭಾಧ್ಯಕ್ಷರಾದ ಶ್ರೀ ಕಾಗೋಡು ತಿಮ್ಮಪ್ಪನವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ನೀವು Lift Irrigation Scheme ಅನ್ನು ಸಂಪೂರ್ಣವಾಗಿ ಬಂದ್ ಮಾಡಬೇಕು. ಇಗ್ಗಲೂರಿನಲ್ಲಿ ಎಲ್ಲಾ ಹಳ್ಳಿಗಳಿಗೂ ನೀರನ್ನು ಕೊಡುತ್ತೇವೆ ಎಂದು ಹೇಳಿದ್ದೀರಿ. ಸದನದಲ್ಲಿ ರಾಜ್ಯಪಾಲರ ಬಾಯಿಯಿಂದ ಹೇಳಿಸಿದ್ದಾರೆ. ತುಮಕೂರು, ಚಿತ್ರದುರ್ಗ...

ಅಧ್ಯಕ್ಷರು : ಅದು ಆರೋಗ್ಯಕರವಾದ ನೀರು.

ಶ್ರೀ ಹೆಚ್.ಡಿ.ಕುಮಾರಸ್ವಾಮಿ : ಕೆರೆಗಳನ್ನು ತುಂಬಿಸುತ್ತೇವೆ ಎಂದು ಹೇಳಿದ್ದಾರೆ. ಎಲ್ಲಿಂದ ತುಂಬಿಸುತ್ತಾರೆ ಎನ್ನುವುದನ್ನು ನೋಡಬೇಕು. ಇಲ್ಲಿ ನಮಗೆ ಆಗಿರತಕ್ಕಂಥ damageಗಳು ಏನಿವೆ? Secondly the Tribunal arbitraily disallowed large areas of karnataka coming under the on going projects in category-3 and beyond the

unsustainable basis of water after denying water to the legitimate areas in karnataka. ಈ ರೀತಿಯ ಐತೀರ್ಪು ಏನಿದೆ ಮಾನ್ಯ ಅಧ್ಯಕ್ಷರೆ, "By refusing to consider $^2/3^{rd}$ of the Bangalore city area for supplies from Cauvery to meet its drinking water requirements on the ground that such $^2/3^{rd}$ area lies outside the Cauvery basin, it is submitted that right to access to drinking water is a fundamental right under Article 21 of the Constitution. Its fulfilment cannot be denied by the State unless water is not physically accessible. The basin boundaried have no sanctity or protection in law. Under such circumstances they are merely principles enunciated by the courts to achieve better utilization of water. The Tribunal therefore committed grave error of law by disallowimg $^2/3^{rd}$ of Bangalore from the zone of consideration for drinking water supplies particularly when there are no other supplies for that area." ಅದಕ್ಕೋಸ್ಕರವೇ ನಾವು ಮೊನ್ನೆ ನಮ್ಮ ಸಭಾನಾಯಕರಿಗೆ ತಮ್ಮ ಮುಖಾಂತರ ತಿದ್ದುಪಡಿ ತನ್ನಿ ಎಂದು ಮನವಿ ಸಲ್ಲಿಸಿದ್ದು. ಇವತ್ತು ಬೆಂಗಳೂರಿನಲ್ಲಿ ನಿಮ್ಮನ್ನು ಗೆಲ್ಲಿಸಿದ್ದಾರೆ. ಬಹುಶಃ 12–13 ಸೀಟನ್ನು ಗೆದ್ದಿದ್ದೀರಿ. ನಿಮ್ಮ ಶಾಸಕರು ಬೆಂಗಳೂರು ನಾಗರಿಕರ ಮುಂದೆ ಏನು ಹೇಳುತ್ತಾರೆ? ಕೇವಲ 1.75 ಟಿ.ಎಂ.ಸಿ. ನೀರಿನಿಂದ 2 $^1/4$ ಕೋಟಿ ಜನತೆಗೆ ನೀರನ್ನು ನಾವು ಎಲ್ಲಿಂದ ಕೊಡುವುದು? ಈ ರೀತಿಯ ತೀರ್ಮಾನಗಳು ಏನಾಗಿವೆ? ನಮ್ಮ ಜನತೆಗೆ ಅದರ ಮಾಹಿತಿಗಳು ಇಲ್ಲ. ಹಿಂದೆ ಈ ಸದನದಲ್ಲಿ ಇದ್ದರು. ಕಾವೇರಿ ಹಿತ ರಕ್ಷಣಾ ಹೋರಾಟ ಸಮಿತಿ ಮಾಡಿಕೊಂಡಿದ್ದಾರೆ. ನಮ್ಮ ಶಾಸಕರು ಪಾಪ ಬಹಳ ಅವರ ಜೊತೆ ಹೋರಾಡುತ್ತಾರೆ. ನಮಗೆ ಕೆ.ಆರ್.ಎಸ್.ನದ್ದು Key ಕೊಟ್ಟುಬಿಡಿ. ನಾವು ನೀರನ್ನು ಬೇಕಾದಾಗ ಬಿಟ್ಟುಕೊಳ್ಳುತ್ತೇವೆ, ಬೇಡದೇ ಇದ್ದಾಗ close ಮಾಡಿಕೊಳ್ಳುತ್ತೇವೆ ಎಂದು ಹೇಳುತ್ತಾರೆ. ಅವರೇ ಆ ರೀತಿ ಇದ್ದಾಗ, ಪಾಪ ಸಾಮಾನ್ಯ ಪ್ರಜೆ. ತಿಳಿವಳಿಕೆ ಇಲ್ಲ ಅವನು ಏನು ಮಾಡಬೇಕು? ಪಾಪ ಅವನನ್ನು ತಿಳಿವಳಿಕೆ ಮೂಡಿಸಿಕೊಂಡು ಹೋರಾಟ ಮಾಡು ಎಂದರೆ ಹೇಗೆ? ರಸ್ತೆಯಲ್ಲಿ ಅನ್ನ ಬೇಯಿಸುವುದೋ, ಮಟನ್ ಬೇಯಿಸಿಕೊಂಡು ತಿಂದುಕೊಂಡು ರಸ್ತೆನಲ್ಲಿ ನಿಲ್ಲಿಸಿದರೆ, ನಮಗೆ ನೀರು ಸಿಗುತ್ತದೆಯೇ? ಕನ್ನಡ ಸಂಘಟನೆಗಳು ಟೈರ್

ಸುಡುತ್ತಾರೆ. ಅಲ್ಲಿ ಎಲ್ಲೋ ಹೋಗಿ ನಾವೇ ನೀರನ್ನು ಹಿಡಿಯುತ್ತೇವೆ ಎಂದು ಹೇಳುತ್ತಾರೆ. ಇಲ್ಲಿ ಪ್ರಶ್ನೆ ಇರುವುದು, ಇವತ್ತು ಜನತೆಯಲ್ಲಿ ನಾವು ಯಾವ ರೀತಿಯಲ್ಲಿ ಇರತಕ್ಕಂಥ ಸಮಸ್ಯೆಗಳ ಬಗ್ಗೆ ತಿಳಿವಳಿಕೆ ಮೂಡಿಸಬೇಕಾಗುತ್ತದೆ. ಬಹುಶಃ ನಾವುಗಳೇ ಎಡವುತ್ತಿದ್ದೇವೆ. ಇವತ್ತಿನ ಕಾನೂನು ಚೌಕಟ್ಟಿನಲ್ಲಿ, ಈ ದೇಶದ federal systemನಲ್ಲಿ ನಾವೆಲ್ಲರೂ ಆ ಕಾನೂನಿಗೆ ತಲೆಬಾಗಬೇಕಾದಂತಹ ಪರಿಸ್ಥಿತಿಗಳು ಇವೆ. ಇವತ್ತು ಪ್ರತಿ ಸಂದರ್ಭದಲ್ಲಿ ನ್ಯಾಯಾಲಯಗಳು ಕೊಡತಕ್ಕಂಥ ಆದೇಶವನ್ನು ಪಾಲಿಸಬೇಕಾಗುತ್ತದೆ. ದೆಹಲಿಯಲ್ಲಿ, ಉತ್ತರ ಭಾರತಕ್ಕೆ ಹೋದರೆ, ಕರ್ನಾಟಕದವರು ಇವತ್ತು ಯಾವುದೇ ರೀತಿಯ ಕಾನೂನನ್ನು ಗೌರವಿಸುವಂತವರಲ್ಲ ಎನ್ನುವ ಭಾವನೆಯನ್ನು ತಮಿಳುನಾಡಿನವರು ಮೂಡಿಸಿದ್ದಾರೆ. ನಾವು ಎಲ್ಲಾ ರೀತಿಯ ಸಹಕಾರವನ್ನು ಕೊಟ್ಟೆವು. ನಮ್ಮ ರಾಜ್ಯದ ರೈತರಿಗೆ ಅನ್ಯಾಯ ಮಾಡಿ ಕಾನೂನಿನ ವ್ಯವಸ್ಥೆಗೆ ತಲೆಬಾಗಿ ಹಲವಾರು ಸರ್ಕಾರಗಳು, ಇವತ್ತು ನಾವು ಗೌರವಿಸುತ್ತಿರುವಂತಹ ಪರಿಸ್ಥಿತಿಯಲ್ಲಿಯೂ ನೀರೂ ಇಲ್ಲ. ನಮ್ಮ ಬಗ್ಗೆ ಒಂದು ರೀತಿಯ ಕೆಟ್ಟ ಪ್ರಚಾರವನ್ನು ಮಾಡತಕ್ಕಂಥದ್ದು ಇದು ವ್ಯವಸ್ಥಿತವಾಗಿ ನಡೆಯುತ್ತಿದೆ. The finding of the Tribunal in non-consideration of the projects namely Nallur Amanikere 1975, kotehole 1977, Yagachi 1983, Harangi 1964, Chiklihole 1978, Tharaka 1970, Arkavathi 1975, Iggaloor 1979, Uduthorehalla 1978 under Clause 10 of the 1924 Agreement on the ground that these Schemes are either those which are not are on non-schedule rivers or which have been constructed after 1974, though on non-Schedule rivers. It is submitted that the Tribunal has not mentioned which projects are not in the non-Schedule rivers. However in respect of schemes falling in the non-Schedule streand, the fact that they are constructed after 1974 should not make any differnce because there is no time limit prescribed in Clause 10 of the Agreement of 1924, sead with Agreement of 1892. Therefore, the decision of the Tribunal is based on consideration of irrelevant factors.

ಅಧ್ಯಕ್ಷರು : ಮಾನ್ಯ ಪ್ರತಿಪಕ್ಷದ ನಾಯಕರೆ, ಒಂದು ನಿಮಿಷ ತಾವು ಕುಳಿತುಕೊಳ್ಳಿ ಮಾನ್ಯ ರಮೇಶ್ ಕುಮಾರ್‌ರವರು ಮಾತನಾಡುತ್ತಾರೆ.

ಶ್ರೀ ಕೆ.ಆರ್.ರಮೇಶ್ ಕುಮಾರ್ (ಶ್ರೀನಿವಾಸಪುರ) : ಮಾನ್ಯ ಅಧ್ಯಕ್ಷರೆ, ಮಾನ್ಯ ಪ್ರತಿಪಕ್ಷದ ನಾಯಕರು ಬಹಳ ಶ್ರಮಪಟ್ಟು ಈ Tribunal Judgment after effects ಏನು ಎನ್ನುವುದನ್ನು Houseಗೆ convince ಮಾಡುತ್ತಿದ್ದಾರೆ. Unfortunately ತೀರ್ಮಾನ ಈಗಾಗಲೇ ಬಂದಾಗಿದೆ. ಇದನ್ನೆಲ್ಲಾ ಕೇಳುವಂತಹ ತಾವಾಗಲಿ, ಮುಖ್ಯಮಂತ್ರಿಗಳಾಗಲಿ, ಇದನ್ನು ಮರುಪರಿಶೀಲನೆ ಮಾಡುವುದಕ್ಕೆ ನಮಗೆ ಅವಕಾಶವಿಲ್ಲ. ಮಾನ್ಯ ಪ್ರತಿಪಕ್ಷದ ನಾಯಕರಾದಿಯಾಗಿ ಇಡೀ ರಾಜ್ಯದ ಜನರಿಗೆ ಗೊತ್ತಾಗಿದೆ. ಈ ತೀರ್ಪಿನಿಂದ ನಮಗೆ ಸುಧಾರಿಸಿಕೊಳ್ಳುವುದಕ್ಕೆ ಆಗದೇ ಇರುವಷ್ಟು ನಷ್ಟವಾಗಿದೆ. ಆ voluntary agency ಅವತ್ತು appear ಆಗಿದ್ದಿದ್ದರೆ Tribunal ತನ್ನ ಕೆಲಸವನ್ನು ಮುಂದುವರಿಸುವುದಕ್ಕೆ ಆಗುತ್ತಿರಲಿಲ್ಲ. ಇಂತಹದ್ದೇ ಒಂದು earlier situationನಲ್ಲಿ Tribunal Membersಗೆ ಅಥವಾ Judgesಗೆ ಕೆಲವು ಕಡೆಗಳಲ್ಲಿ gifts ಕೊಟ್ಟರು ಎಂದು ಹೇಳಿ ಪೇಪರ್‌ನಲ್ಲಿ ಬಂದಿದ್ದರಿಂದ ಅವರು touchyಆಗಿಬಿಟ್ಟು, ಅಲ್ಲಿಗೇ ಬಿಟ್ಟರು. ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಹೆಚ್.ಡಿ.ಕುಮಾರಸ್ವಾಮಿಯವರು ಜಾಗ್ರತೆಯಿಂದ ಹೇಳುತ್ತಾ ನಾನು Judgment ಅನ್ನು criticize ಮಾಡುತ್ತಿಲ್ಲವೆಂದು ಹೇಳಿದರು. ಈ ಸದನದಲ್ಲಿ ಮೊದಲು ಕೂಡ ನಾವು Judiciaryಗೆ ಸಂಬಂಧಪಟ್ಟಂತೆ ಕೆಲವು ಸೂಕ್ಷ್ಮ ವಿಚಾರಗಳು ಬಂದಾಗ ನಾವು ನಮ್ಮ rights ಅನ್ನು as Legislature accept ಮಾಡಿಕೊಂಡಿದ್ದೇವೆ. ನಮಗೆ Judiciaryಬಗ್ಗೆ ಗೌರವ ಇರಲೇಬೇಕು. ಆದರೆ Judiciaryಗೆ ನಾವು ಆಧೀನ ಅಲ್ಲ. Judiciary when it goes wrong, this House has all the authority to express its views.ಈಗ ನಮಗೆ Tribunal ಅನ್ನು ಇಲ್ಲಿ ಮರು ವ್ಯಾಖ್ಯಾನಕ್ಕೆ ಒಳಪಡಿಸುವುದರಿಂದ ನ್ಯಾಯ ಸಿಗುವುದಿಲ್ಲ. ನಾನು ಮಾನ್ಯ ವಿರೋಧ ಪಕ್ಷದ ನಾಯಕರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ನಾವು ನಮ್ಮದೇ ಆದ ಅನೇಕ ಕಾರಣಗಳಿಗಾಗಿ ನಾವು ಈ ಸದನದ ಒಳಗೆ ಬಂದಿದ್ದೇವೆ. ಈ ಸದನದ ಒಳಗೆ ಬರುವುದಕ್ಕೆ ಆಗದೇ ಇದ್ದವರು ಈ ವಿಷಯದಲ್ಲಿ ಸಾಕಷ್ಟು ಪರಿಣಿತಿಯನ್ನು ಇರುವಂತಹವರು ರಾಜ್ಯಕ್ಕೆ ಮಾರ್ಗದರ್ಶನವನ್ನು ಕೊಡುವವರು ಹೊರಗಡೆ ಇದ್ದಾರೆ. ಅವರುಗಳು ಬೇರೆ

ಬೇರೆ ಕ್ಷೇತ್ರಗಳಲ್ಲಿ ಇರಬಹುದು. ಮಾನ್ಯ ಪ್ರತಿಪಕ್ಷದ ನಾಯಕರುಗಳು ಮತ್ತು ಎಲ್ಲಾ ಬೇರೆ ಬೇರೆ ಪಕ್ಷದ ಮುಖಂಡರುಗಳು ಮಾನ್ಯ ಮುಖ್ಯಮಂತ್ರಿಗಳ ನಾಯಕತ್ವದಲ್ಲಿ ಅಥವಾ ತಮ್ಮ ನಾಯಕತ್ವದಲ್ಲಿ ನಾವು ಎಲ್ಲೋ ಒಂದು ಕಡೆಯಲ್ಲಿ ಕುಳಿತುಕೊಳ್ಳಬೇಕಾಗುತ್ತದೆ. ನಾವು ಕುಳಿತುಕೊಂಡು Tribunal Judgment ಅನ್ನು ನಾವು ಸ್ಪಷ್ಟವಾಗಿ ಕಾನೂನು ಸಮರದ ಮುಖಾಂತರವೇ ಎದುರಿಸಬೇಕಾಗುತ್ತದೆ. ನಮ್ಮ ಜನರಿಗೆ ನಾವು ನ್ಯಾಯವನ್ನು ದೊರಕಿಸಿಕೊಡಬೇಕಾಗುತ್ತದೆ. ಸುಮ್ಮನೆ ನಾನು ಒಂದು sentence ಅನ್ನು ಓದುತ್ತೇನೆ. ಇದೊಂದು Justice Versus Justices ಎಂಬ ಪುಸ್ತಕ.

ಅಧ್ಯಕ್ಷರು : ಮಾನ್ಯ ಸದಸ್ಯರುಗಳಿಗೆ ಹೇಳುವುದೇನೆಂದರೆ, ಚರ್ಚೆಯಲ್ಲಿ ಭಾಗವಹಿಸಿ ಇದರ ಬಗ್ಗೆ ಇನ್ನೂ ವಿವರವಾಗಿ ಹೇಳಬಹುದಿತ್ತು.

ಶ್ರೀ ಕೆ.ಆರ್.ರಮೇಶ್ ಕುಮಾರ್ : ಹೇಳುತ್ತೇನೆ. 'If the people feel that they suffer from the Judicial functioning, the Judiciary cannot escape from their criticism.' ಜನರಿಗೆ ತೊಂದರೆಯಾದಾಗ...

ಅಧ್ಯಕ್ಷರು : ಇದು ಯಾವುದು?

ಶ್ರೀ ಕೆ.ಆರ್.ರಮೇಶ್ ಕುಮಾರ್ : ಈ ಪುಸ್ತಕ Justice Versus Justices ಎಂದು Justice Ashok A.Desai ಎನ್ನುವವರು ಬರೆದಿದ್ದಾರೆ. ಇದರಲ್ಲಿ ನ್ಯಾಯಾಂಗದ ಬಗ್ಗೆ ಒಂದು ವ್ಯಾಖ್ಯಾನ ಇದೆ.

ಅಧ್ಯಕ್ಷರು : ಅದರ ಬಗ್ಗೆ ನೀವು ಸಹ ಹೇಳುತ್ತೀರಿ.

ಶ್ರೀ ಕೆ.ಆರ್.ರಮೇಶ್ ಕುಮಾರ್ : ಅವರು ಇದರಲ್ಲಿ ಇಷ್ಟೇ ಹೇಳುತ್ತಾರೆ. ನ್ಯಾಯಾಂಗದ ವರ್ತನೆಯಿಂದ ಜನರಿಗೆ ತೊಂದರೆ ಆದಾಗ ಜನರು ಅದನ್ನು criticize ಮಾಡಿದರೆ ಅದು ತಪ್ಪಲ್ಲವೆಂದು ಅವರೇ Judges ಹೇಳುತ್ತಾರೆ.

ಅಧ್ಯಕ್ಷರು : ಹೇಳುತ್ತಾರೆ. ಅದಕ್ಕಾಗಿ ಇಲ್ಲಿ ಕಾನೂನನ್ನು ತರುವುದಕ್ಕೆ ಅವಕಾಶವಿದೆ, ಅದನ್ನು ತಂದುಬಿಡಿ.

ಶ್ರೀ ಕೆ.ಆರ್.ರಮೇಶ್ ಕುಮಾರ್ : ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಇಲ್ಲಿ ಸಾಕಷ್ಟು ಅವಕಾಶಗಳು ಇವೆ. ಮಾನ್ಯ ವಿರೋಧಪಕ್ಷದ ನಾಯಕರು, he has made out an excellent case. In fact, ಇದು ಅಷ್ಟು ಸುಲಭದಲ್ಲಿ ಮಾಡುವುದಕ್ಕಾಗುವುದಿಲ್ಲ. He must have spent a lot of time. ಈ ಬಗ್ಗೆ ಬಹಳ ಜನರ ಹತ್ತಿರ

ಕುಳಿತುಕೊಂಡು ಮಾತನಾಡಬೇಕು. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳು ಇದ್ದಾರೆ. He is not averse to that.ಸದನದ ಹೊರಗೆ ಇರುವವರೂ ಕೂಡ ರಾಜ್ಯದ ಹಿತದ ಬಗ್ಗೆ ಅವರ ಸಹಾಯವನ್ನು ಪಡೆದುಕೊಳ್ಳಬಹುದು. I think we must find a solution to this. Further ಇಲ್ಲಿ ನಾನು ತಮ್ಮ ಸಹಾಯಕ್ಕಾಗಿ ಓದಿ ಹೇಳುತ್ತಿದ್ದೇನೆ. 'The Judiciary cannot and shall not repeal it by exercising the authority of contempt.Sometime criticism might prove to be for betterment. Again it depends on the design of a critic. Influx of criticism is mostly out of personal pride.'Lastನಲ್ಲಿ, conclusionನಲ್ಲಿ ಇಷ್ಟು ಹೇಳುತ್ತಾರೆ. 'The agony of the best talented legal mind further is still piercing. Justice V.R.Krishna Iyer holds: 'The myth is that Courts of law administer justice. The truth is that they are the agents of injustice". The courts of law administer justice. The truth is that they are the agents of injustice. The truth is delivering justice. I think we have the liberty. The Hon'ble Leader of the House should take care and also we must take all steps to protect the interest of this.

ಅಧ್ಯಕ್ಷರು : ಆದರೆ ಅವರು ಹೇಳಿದರು ಅಂತ ಸುಮ್ಮನಿದ್ದಾರೆಯೇ judiciary ಯವರು. ನೀವೇನಾದರೂ ಹೊರಗಡೆ ಹೋಗಿ ಇದೇ ಭಾಷೆಯನ್ನು ಬಳಸಿದರೆ ತೊಂದರೆಯಾಗುತ್ತಿತ್ತು.

ಶ್ರೀ ಕೆ.ಆರ್.ರಮೇಶ್ ಕುಮಾರ್ : ಅಧ್ಯಕ್ಷರೆ, ಅಲ್ಲಿಯೇ ಕುಳಿತು ಬಳಸಿದ್ದೇನೆ. ನಿಮಗೆ ಈ ಬಗ್ಗೆ ಅನುಮಾನವಿದ್ದರೆ ನಾನು ಆ ಜವಾಬ್ದಾರಿಯನ್ನು ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು : ನೀವು ಇಲ್ಲಿ ತೆಗೆದುಕೊಳ್ಳುತ್ತೀರಿ. ಹೊರಗಡೆ ತೆಗೆದು–ಕೊಳ್ಳುತ್ತಿದ್ದೀರಾ?

ಶ್ರೀ ಕೆ.ಆರ್.ರಮೇಶ್ ಕುಮಾರ್ : ಇಲ್ಲಿ ನಾನು ನಿಮ್ಮನ್ನು ಸಿಕ್ಕಿಸದೆ ಏನಾದರೂ ಬರುವುದಿದ್ದರೆ first accused ನಾನು ಇರುತ್ತೇನೆ. ನನಗೆ accused ಆಗಿ ಅಭ್ಯಾಸವಾಗಿ ಹೋಗಿದೆ. I will take will take care. Don't worry.

ಶ್ರೀ ಬಿ.ಎಸ್.ಯಡಿಯೂರಪ್ಪ (ಶಿಕಾರಿಪುರ) : ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಪ್ರತಿಪಕ್ಷದ ನಾಯಕರು ಕಾವೇರಿ issue ಬಗ್ಗೆ ಬಹಳ detail ಆಗಿ ಬೆಳಕನ್ನು ಚೆಲ್ಲುತ್ತಿದ್ದಾರೆ ಆ ಬಗ್ಗೆ 19.04.1992ರಲ್ಲಿ ಮಾನ್ಯ ನಿಜಲಿಂಗಪ್ಪನವರು ಪತ್ರ ಬರೆದಿದ್ದರು. ಅದರ ಹೇಳಿಕೆಯೂ ಈ ರೀತಿ ಇದೆ. ಮಾನ್ಯ ವಿರೋಧಪಕ್ಷದ ನಾಯಕರಾದ ಶ್ರೀ ಹೆಚ್.ಡಿ.ಕುಮಾರಸ್ವಾಮಿಯವರಿಗೆ ಬೆಂಬಲವಾಗಿ ಇದು important para ಆಗಿದೆ. 'It is pertinent to point out that there is no National Water policy on the basis of which the Tribunal could allocate waters equitably. Therefore, it is imperative that the Government of India should formulate the principles of equitqble distribution of water as part of the National Water policy. Therefore it stands to reason that the work of the Tribunal should be suspended until the National Water policy is framed and suitable guidelines formulated by the Government of India'. National Water policy ಇಲ್ಲದೆಯೇ ಯಾವುದೇ Tribunal ಈ ರೀತಿಯಾದ ತೀರ್ಮಾನವನ್ನು ಕೊಡಬಾರದು ಎನ್ನುವಂತಹ ಮಾತನ್ನು ಅವತ್ತಿನ ಕಾಲದಲ್ಲಿಯೇ ಸನ್ಮಾನ್ಯ ನಿಜಲಿಂಗಪ್ಪನವರು, ಜತ್ತಿಯವರು, ರಾಮಕೃಷ್ಣ ಹೆಗಡೆಯವರು, ಗುಂಡೂರಾವ್‌ರವರು ಇದರಲ್ಲಿ ನಾಲ್ಕು ಜನರೂ ಸಹಿ ಮಾಡಿ ಇಲ್ಲಿ ಹೇಳಿದ್ದಾರೆ.

ಅಧ್ಯಕ್ಷರು : ಅವರೆಲ್ಲರೂ ಅಲ್ಲಿ ಇದ್ದರಲ್ಲಾ ಆಗ ಮಾಡಿಕೊಳ್ಳಬಹುದಿತ್ತಲ್ಲಾ? ಅವರೆಲ್ಲರೂ ದೆಹಲಿಯಲ್ಲಿದ್ದರಲ್ಲಾ ಮಾಡಿಸಿಕೊಳ್ಳಬಹುದಿತ್ತು.

ಶ್ರೀ ಬಿ.ಎಸ್.ಯಡಿಯೂರಪ್ಪ : ಮಾನ್ಯ ಸದಸ್ಯರಾದ ಶ್ರೀ ರಮೇಶ್‌ಕುಮಾರವರು ಹೇಳಿದ್ದಕ್ಕೆ ಹೇಳುತ್ತೇನೆ. ನಾವು ಆಗಲೇ ಬಹಳಷ್ಟು ಎಡವಿ ಮುಂದೆ ಹೋಗಿ ನಮ್ಮ ತಲೆಯ ಮೇಲೆ ಕಲ್ಲನ್ನು ಹಾಕಿಕೊಂಡಿದ್ದು ಆಗಿದೆ. ಈಗ ಚರ್ಚೆ ಮಾಡುವುದರಿಂದ ಏನೂ ಪ್ರಯೋಜನವಿಲ್ಲ. ಈಗ ನಾವು ಮುಂದೆ ಹೋಗಿ ಬಿಟ್ಟಿದ್ದೇವೆನ್ನುವಂತಹ ಮಾತನ್ನು ಅವರು ಹೇಳಿದರು. ಆ ಕಾಲದಲ್ಲಿಯೇ 4 ಜನ ಮುಖ್ಯಮಂತ್ರಿಗಳು ಬರೆದಂತಹ ಪತ್ರವನ್ನು ನಾನು ಓದಿದ್ದೇನೆ.

ಶ್ರೀ ವಿ.ಶ್ರೀನಿವಾಸ ಪ್ರಸಾದ್ (ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೆ, ಈ ಹಿಂದೆ Chief Minister ಆಗಿದ್ದಂತಹ ಶ್ರೀ ಹೆಚ್.ಡಿ.ದೇವೇಗೌಡರಿಗೂ

ಸಹ ಗೊತ್ತಿತ್ತು. ತಮಗೆ ಗೊತ್ತಿರುವ ಹಾಗೆ Tribunal interim order ಬಂದಾಗ ಅದನ್ನು ಯಾವ ರೀತಿಯಾಗಿ implement ಮಾಡಬೇಕೆಂದು courtಗೆ ಹೋಗಿ court, Prime ministerಗೆ binding ಮಾಡಿದಂತಹ ಸಮಯದಲ್ಲಿ ಮಾನ್ಯ ಹೆಚ್.ಡಿ.ದೇವೇಗೌಡರು ಇಲ್ಲಿ Chief Minister ಆಗಿದ್ದರು. ನಾವು ಯಾರ್ಯಾರು ಕಾವೇರಿ basin ದಿಂದ represent ಮಾಡುತ್ತೇವೆ ಎಲ್ಲಾ ಎಂಪಿಗಳನ್ನು ಕರೆದು Prime minister ಮತ್ತು Chief minister ಕೂಡ, ಚರ್ಚೆ ಮಾಡಿದರು. ಆ ಸಮಯದಲ್ಲಿ ಮಾನ್ಯ ದೇವೇಗೌಡರಿಗೆ ಒಂದು suggestion ಅನ್ನು ಕೊಟ್ಟೆವು. ಆ ಸಮಯದಲ್ಲಿ ಅವರು ಒಪ್ಪಿದರು. ಮೂಗು ಹಿಡಿದರೆ ಬಾಯಿ ಬಿಡುವಂತಹದ್ದು' Interim order ಅನ್ನು Prime minister binding ಮಾಡಿ ನಮಗೆ ಕೇಳಿದರೆ ನಾವು ನೀರನ್ನು ಬಿಡಬೇಕಾಗುತ್ತದೆ. ಅದನ್ನು ನಾವು implement ಮಾಡಬೇಕಾಗುತ್ತದೆ. ಇದರಿಂದ ಕಷ್ಟವಾಗುತ್ತದೆ.' ಎಂದು ನಮಗೆಲ್ಲರಿಗೂ convince ಮಾಡಿ.; ನಾನು ಇದೇ ಸಮಯದಲ್ಲಿ Prime Minister ರವರ ಜೊತೆಯಲ್ಲಿ ಮಾತನಾಡುತ್ತೇನೆ. ಇದನ್ನು ಬಿಡಬೇಕಾದರೆ ಒಂದು condition, broad based guidelines ಇಟ್ಟುಕೊಂಡು National water policy evolve ಮಾಡೋಣ ಎಂದು ಅವರಿಗೆ ಒಪ್ಪಿಸುತ್ತೇನೆ, ಇದಕ್ಕೆ ನೀವು ಒಪ್ಪುವುದಾದರೆ ನಾನು ಮಾತನಾಡುತ್ತೇನೆ.' ಎಂದು ದೇವೇಗೌಡರು ಹೇಳಿದ್ದರು. who hase to initiate the National water policy?

ಇದನ್ನು ಯಾರು ಮಾಡಬೇಕು? ಇದನ್ನು Prime minister ಮಾಡಬೇಕು. ಆಗ Chief minister ಆಗಿದ್ದ ದೇವೇಗೌಡರು National water policy ಅನ್ನು ಪ್ರಧಾನ ಮಂತ್ರಿಗಳು ಮಾಡಬೇಕೆಂದು ಹೇಳಿದ್ದರು. ಅದೇ ದೇವೇಗೌಡರು ಪ್ರಧಾನ ಮಂತ್ರಿಯಾದಾಗ ಅವರು National water policy ಬಗ್ಗೆ ಏಕೆ initiative ತೆಗೆದುಕೊಳ್ಳಲಿಕ್ಕೆ ಆಗಲಿಲ್ಲ? ಆಗಲೇ ಮಾಡಿದ್ದರೆ ಅದಕ್ಕೇನಾದರೂ ಒಂದು policy ಆಗುತ್ತಿತ್ತು. ತಮಗೆ ಗೊತ್ತಿದೆ, ರಮೇಶ್ ಕುಮಾರ್‌ರವರು ಇವತ್ತು ಹೇಳುತ್ತಿದ್ದರು. ನಾವು ಪಾರ್ಲಿಮೆಂಟ್‌ನಲ್ಲಿದ್ದವರು. Interim order, Tribunal Constitute ಮಾಡುವುದು ನಮಗೆ ಗೊತ್ತಿತ್ತು. We have no case ಎಂದು ಹೇಳಿ

ನಮಗೆ ಗೊತ್ತಿತ್ತು. ನ್ಯಾಯಮಂಡಳಿ ಬಂದರೆ ನಮಗೇನು ಕಷ್ಟವಾಗುತ್ತದೆ ಎಂದು ನಮಗೆ ಗೊತ್ತಿದೆ. ಅದಕ್ಕೆ ನಾವು ವಿರೋಧ ಮಾಡಿಕೊಂಡು ಬಂದಿದ್ದೇವೆ. ಕಾಂಗ್ರೆಸ್ ಸರ್ಕಾರವಿರುವವರೆಗೆ ನಾವು Tribunal Constitute ಮಾಡುವುದಕ್ಕೆ ಅವಕಾಶ ಕೊಟ್ಟಿರಲಿಲ್ಲ. ಇದು Public interest litigation ನಲ್ಲಿ ಒಬ್ಬ ತಮಿಳುನಾಡಿನ ರೈತ ಹೋದಾಗ ಅಂದಿನ ಸರ್ಕಾರದ Additional Solicitor General ರವರು Tribunal constitute ಮಾಡುವುದಕ್ಕೆ ಅವಕಾಶ ಕೊಟ್ಟುಬಿಟ್ಟಿದ್ದರು. ಇದಾದ ಮೇಲೆ ನಾವೆಲ್ಲಾ ಬಹಳ ಗಲಾಟೆ ಮಾಡಿದ್ದೇವೆ. ದೇವೇಗೌಡರೂ ಸಹ Interim Order ಬಗ್ಗೆ Parliament Member ಆಗಿ ಬಂದು ಅವರು ನಾವೆಲ್ಲಾ Participate ಮಾಡಿ ಇದರ ಬಗ್ಗೆ ಹೇಳಿದ್ದೇವೆ. ಅದು ಬೇರೆ ವಿಚಾರ. ನಾವು ಆ ಸಮಯದಲ್ಲಿ ಬಹಳ ಸ್ಪಷ್ಟವಾಗಿ ಹೇಳಿದ್ದೇವೆ. Nowhere in the World or nowhere in the Country National Water problem ಇದೆಯೆಲ್ಲಾ ಈ dispute either by the Tribunal or by the court ಇದನ್ನು solve ಮಾಡಲಿಕ್ಕಾಗುವುದಿಲ್ಲ, By way of Negotiation ಮಾಡಬೇಕು. ಅಥವಾ ಈಗ Legal fight ಮಾಡುತ್ತಿಲ್ಲವೇ? ಕಾನೂನು ಸಮರವನ್ನು ಮಾಡುತ್ತಿದ್ದೇವೆ, ರಾಜಕೀಯ ಸಮರವನ್ನು ಮಾಡುತ್ತಿದ್ದೇವೆ. ಸುಮ್ಮನೆ ನಾವು ಅಲ್ಲಿ ಕುಳಿತುಕೊಂಡಾಗ ಒಂದು ಮಾತನಾಡುತ್ತೇವೆ, ಈ ಕಡೆ ಕುಳಿತುಕೊಂಡಾಗ ಒಂದು ಮಾತನ್ನು ಆಡುತ್ತಿದ್ದೇವೆ. ನಾವು ಸುಮ್ಮನೆ ಮಾತನಾಡಬಹುದೇ ವಿನಃ ಇದರ ಬಗ್ಗೆ ಸಭೆಯಲ್ಲಿ ಕುಳಿತು ಚರ್ಚೆ ಮಾಡಿ ಇದಕ್ಕೆ permanent solution ಸಿಗುವವರೆಗೂ ಕೂಡ ಇದು ಬಹಳ ಕಗ್ಗಂಟಾಗಿರುತ್ತದೆ. ನಾನು ಏಕೆ ಈ ಮಾತನ್ನು ಹೇಳಿದೆನೆಂದರೆ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಹೇಳಿದಂತೆ ರಾಷ್ಟ್ರ ಜಲನೀತಿ ಮಾಡುವಂಥ ಒಂದು ಅವಕಾಶ ನಮ್ಮ ರಾಜ್ಯಕ್ಕೆ ದೊರೆತಿತ್ತು, ಏಕೆ ಮಾಡಲಿಲ್ಲ? ಇದನ್ನು ಕುಮಾರಸ್ವಾಮಿಯವರು ಮಾತನಾಡುವಾಗ ಪ್ರಸ್ತಾಪ ಮಾಡಬಹುದಾಗಿತ್ತು. ದೇವೇಗೌಡರು ಏಕೆ ಮಾಡಲಿಲ್ಲ? ಆಗ ಏಕೆ initiative ತೆಗೆದುಕೊಳ್ಳಲಿಲ್ಲ? ಮಾಡಬಹುದಾಗಿತ್ತು.

(ಗೊಂದಲ)

ಅಧ್ಯಕ್ಷರು : ಈಗ ಅವರು ಮಾತನಾಡಲಿ. ನೀವು ಸುಮ್ಮನಿರಿ.

(ಗೊಂದಲ)

ಶ್ರೀ ವೈ.ಎಸ್.ವಿ.ದತ್ತ (ಕಡೂರು) : ಶ್ರೀನಿವಾಸ ಪ್ರಸಾದ್‌ರವರು ಎತ್ತಿರುವಂಥ ವಿಷಯ ಪ್ರಾಮುಖ್ಯವಾಗಿದೆ. ಈ ವಿಷಯದ ಬಗ್ಗೆ ಸದನದಲ್ಲಿ ಬೆಳಕು ಚೆಲ್ಲಲ್ಲಿಕ್ಕೆ ನಮಗೂ ಸಹ ಅವಕಾಶ ಕೊಡಬೇಕು. ಇದಕ್ಕೆ ಸ್ಪಷ್ಟೀಕರಣ ಕೊಡುವುದಕ್ಕಿಂತ ಮುಂಚೆ ಮಾನ್ಯ ಯಡಿಯೂರಪ್ಪನವರು ಉಲ್ಲೇಖಿಸಿದ ಪತ್ರದ ಹಿನ್ನೆಲೆಯಲ್ಲಿ ಹೇಳಬಯಸುತ್ತೇನೆ. ಶ್ರೀನಿವಾಸ ಪ್ರಸಾದ್‌ರವರಿಗೆ ಆಗ ಜ್ಞಾಪಕ ಬರಬಹುದು. 1992 ರಲ್ಲಿ Tribunal constitute ಆಯಿತು. ಆಗ ಕರ್ನಾಟಕ ವಿಕಾಸ ವೇದಿಕೆ ಮಾಡಿ ಡಾ: ಸಿದ್ದಯ್ಯ ಪುರಾಣಿಕ ಎಂಬ ಸಾಹಿತಿಗಳು ಎಲ್ಲಾ ಸೇರಿ ಮೈಸೂರಿನಲ್ಲಿ ರೈತರು, ಜನರೆಲ್ಲಾ ಸೇರಿ ಸಭೆ ಮಾಡಿದ್ದರು..

(ಗೊಂದಲ)

ಅಧ್ಯಕ್ಷರು : ಮಾನ್ಯ ಸಚಿವರು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಎನ್.ಚಲುವರಾಯಸ್ವಾಮಿ : 50 ವರ್ಷಗಳ ಹಿಂದಿನಿಂದ ಪ್ರಧಾನ ಮಂತ್ರಿಗಳಾಗಿದ್ದವರು ಏನೂ ಮಾಡಲಿಕ್ಕೆ ಆಗಲಿಲ್ಲ. ಒಂದು ವರ್ಷ ಪ್ರಧಾನ ಮಂತ್ರಿಗಳಾದವರು ಏಕೆ ಮಾಡಲಿಲ್ಲವೆಂದು ಕೇಳುತ್ತಿದ್ದಾರೆ.

(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಶ್ರೀನಿವಾಸ ಪ್ರಸಾದ್‌ರವರು ಪ್ರಸ್ತಾಪ ಮಾಡಿದ್ದಾರೆ, ಕಾಂಗ್ರೆಸ್ ಪಕ್ಷ ಇರುವವರೆಗೂ Tribunal constitute ಮಾಡಲಿಕ್ಕೆ ಅವಕಾಶ ಕೊಟ್ಟಿರಲಿಲ್ಲವೆಂದು ಹೇಳಿದರು. ಕಾಂಗ್ರೆಸ್ ಪಕ್ಷ 1992 ರಲ್ಲಿ, ಶ್ರೀನಿವಾಸ ಪ್ರಸಾದ್‌ರವರೇ ಭಾಷಣ ಮಾಡಿದ್ದಾರೆ. ಅಂದು ಕಾಂಗ್ರೆಸ್ ಸರ್ಕಾರವಿತ್ತು. ಆಗಲೇ Tribunal constitute ಮಾಡಿದ್ದಾರೆ. ಅಂದಿನ ನೀರಾವರಿ ಮಂತ್ರಿಗಳೂ ಅದನ್ನು ಸ್ವಾಗತ ಮಾಡಿದ್ದಾರೆ.

ಅಧ್ಯಕ್ಷರು : ಮುಂದೆ ಏನು ಮಾಡಬೇಕೆಂದು ಹೇಳಿ, ಹಿಂದಿನದನ್ನೇ ಹೇಳುವುದು ಬೇಡ.

(ಗೊಂದಲ)

ಶ್ರೀ ವೈ.ಎಸ್.ವಿ.ದತ್ತ : ಒಂದೇ ಒಂದು line. ಶ್ರೀ ಯಡಿಯೂ–ರಪ್ಪನವರು ಆ ಪತ್ರದ ಬಗ್ಗೆ ಉಲ್ಲೇಖ ಮಾಡದಿದ್ದರೆ ನಾನು ಹೇಳುತ್ತಿರಲಿಲ್ಲ. ನಿಜಲಿಂಗಪ್ಪನವರು, 80 ವರ್ಷದ ಮುದುಕರನ್ನು ಮೈಸೂರಿನಲ್ಲಿ ಕರೆದುಕೊಂಡು ಹೋಗಿ ಅವರು ಆ ಪತ್ರವನ್ನು ಬರೆದು ಅದನ್ನು ಕೇಂದ್ರ ಸರ್ಕಾರಕ್ಕೆ ಕೊಟ್ಟಾಗ ದೊಡ್ಡ ಕಾವೇರಿ ಹೋರಾಟವನ್ನು ಅಂದು ದೇವೇಗೌಡರ ನೇತೃತ್ವದಲ್ಲಿ

ಪಕ್ಷಾತೀತವಾಗಿ ಸದನದ ಒಳಗೆ ಹೊರಗೆ ಎಲ್ಲರನ್ನು ಸೇರಿಸಿಕೊಂಡು ಮಾಡಲಾಗಿತ್ತು. ಶ್ರೀರಮೇಶ್‌ಕುಮಾರ್ ಹೇಳಿದ್ದು ಸ್ವಾಗತಾರ್ಹ. ಪತ್ರದ ಹಿನ್ನೆಲೆ ಏನು ಎಂದು ನಾನು ನಿಮಗೆ ಹೇಳಿದೆ.

ಅಧ್ಯಕ್ಷರು : ಆಯಿತು. ದತ್ತರವರೇ, ಸಾಕು ಬಿಡಿ.

ಶ್ರೀ ವೈ.ಎಸ್.ವಿ.ದತ್ತ : ನನ್ನ ಹತ್ತಿರ documents ಇದೆ.

ಅಧ್ಯಕ್ಷರು : ಸಾಕು. ದತ್ತ, ಪ್ಲೀಸ್.

ಶ್ರೀ ಎಂ.ಬಿ.ಪಾಟೀಲ್ (ಮಾನ್ಯ ಬೃಹತ್ ಮತ್ತು ಮಧ್ಯಮ ನೀರಾವರಿ ಸಚಿವರು) : ಸನ್ಮಾನ್ಯ ಅಧ್ಯಕ್ಷರೆ, ತಮ್ಮ ಗಮನಕ್ಕೆ ತರುವುದೇನೆಂದರೆ, ಈಗಾಗಲೇ Central Government UPA ಸರ್ಕಾರ Central water policy draft ಅನ್ನು ಅವರು Web ನಲ್ಲಿ ಬಿಟ್ಟಿದ್ದಾರೆ.'

We are under the process of forming Central water policy.' ಅದಕ್ಕೆ ಈಗಾಗಲೇ Process start ಆಗಿದೆ ಎಂದು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಅಧ್ಯಕ್ಷರು : ಒಳ್ಳೆಯದು, ಪುಟ್ಟಣ್ಣಯ್ಯ ಹೇಳಿ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ : ನಾನು ಆ ಭಾಗದವನು ಮಾತನಾಡುತ್ತೇನೆ.

ಅಧ್ಯಕ್ಷರು : ನಿಮಗೆ ಅವಕಾಶ ಇರುತ್ತದೆ, ಆಗ ಬೇಕಾದಷ್ಟು ಮಾತನಾಡಿ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ : 1991 ನೇ ಇಸವಿಯಿಂದ ಇಲ್ಲಿಯವರೆಗೆ ಶ್ರೀ ದೇವೇಗೌಡರಾಗಲಿ, ಶ್ರೀ ಎಸ್.ಎಂ.ಕೃಷ್ಣರವರಾಗಲಿ ಯಾರ್‍ಯಾರು ದೊಡ್ಡವರಿದ್ದಾರೆ, ತಪ್ಪು ನಿರ್ಣಯ ಆದದ್ದು 1991ನೇ ಇಸವಿಯಲ್ಲಿ. 1991ನೇ ಇಸವಿಯಲ್ಲಿ ಉದ್ದೇಶಪೂರ್ವಕವಾಗಿ ಯಾವ ತಪ್ಪು ನಿರ್ಣಯವನ್ನೂ ಮಾಡಿಲ್ಲ. ಅಂದಿನ ಮಳೆಗಾಲ ಹಾಗಿತ್ತು, ಅಂದು ಬೀಸೋ ದೊಣ್ಣೆಯ ಏಟು ತಪ್ಪಿಸಿಕೊಂಡರೆ ಸಾಕು ಎಂದು ಹೇಳಿ ಯಾವುದೇ National water policy ಯೋಚನೆ ಮಾಡಲಿಲ್ಲ. LGG formula international level ನಲ್ಲಿ, ಅದ್ಯಾವುದನ್ನೂ ಆಲೋಚನೆ ಮಾಡದೇನೆ sign ಹಾಕಿದರು. 192.50 TMC,ಜಗತ್ತಿನಲ್ಲಿ ಯಾವ ತೀರ್ಮಾನಗಳೂ ಆಗಲಿಕ್ಕೆ ಸಾಧ್ಯವಿಲ್ಲ. ಪ್ರತಿ ತಿಂಗಳು ನೀರು ಬಿಡುತ್ತೇವೆಂದು ಹೇಳುವಂಥ ತೀರ್ಮಾನ ಜಗತ್ತಿನಲ್ಲಿ ಎಲ್ಲಿಯೂ ಇಲ್ಲ. ಆದ್ದರಿಂದ ಪ್ರತಿ ತಿಂಗಳು ನಾವು ನೀರು ಬಿಡುವ ವಿಷಯದಲ್ಲಿ ಸಹಿ ಹಾಕಿ ಅವತ್ತಿನ ದಿವಸ 192.50 ಟಿಎಂಸಿ ನೀರು ಬಿಟ್ಟಿದ್ದು. ಈಗ ಯಾರನ್ನು ಯಾರೂ ಟೀಕೆ ಮಾಡುವಂತಿಲ್ಲ. ಈಗ ರೈತರು ನಾಶವಾಗಿದ್ದಾರೆ. ನಾನು ಈಗ ತಮ್ಮಲ್ಲಿ

ವಿನಂತಿಸುವುದೇನೆಂದರೆ, ರಾಜ್ಯದ ಮುಖ್ಯಮಂತ್ರಿ, ಪ್ರಧಾನ ಮಂತ್ರಿ ಏನಾದರೂ ಮಾಡಬಹುದು ಎಂದರೆ ನ್ಯಾಯಾಲಯದ ಮುಂದೆ ಏನೂ ಮಾಡಲಿಕ್ಕಾಗುವುದಿಲ್ಲ. ಮಾಡುತ್ತೇವೆಂದು ಹೇಳಿದರೆ ದಯವಿಟ್ಟು Out of the Court ಏನಾದರೂ ಒಂದು discussion ಮಾಡಿ ನಾಲ್ಕು ರಾಜ್ಯದ ಮುಖ್ಯಮಂತ್ರಿಗಳು ಏನಾದರೂ ಒಂದು ತೀರ್ಮಾನ ಮಾಡಲಿಕ್ಕೆ ಸಾಧ್ಯವಾದರೆ ಮಾಡಬೇಕೇ ಹೊರತು ಕಾನೂನಿನಲ್ಲಿ ಯಾವುದೇ ಕಾರಣಕ್ಕೂ ಏನೂ ಮಾಡಲಿಕ್ಕೆ ಸಾಧ್ಯವಿಲ್ಲ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ : ನಾನು ಏತಕ್ಕೆ ಈ ವಿಷಯವನ್ನು ಪ್ರಸ್ತಾಪ ಮಾಡುತ್ತಿದ್ದೇನೆಂದರೆ ಯಾವುದೇ ಮೆರಿಟ್ ತೆಗೆದುಕೊಳ್ಳಬೇಕೆಂದಾಗಲಿ, ಕಿರೀಟ ತೆಗೆದುಕೊಳ್ಳುವುದಕ್ಕಲ್ಲ. ನಾವು ಈಗಾಗಲೇ ಮುಳುಗಿ ಹೋಗಿದ್ದೇವೆ, ಅಧ್ಯಕ್ಷರೆ.

ಅಧ್ಯಕ್ಷರು : ಮೇಲೆ ಏಳುವುದು ಹೇಗೆ ಎಂದು?

ಶ್ರೀ ಹೆಚ್.ಡಿ.ಕುಮಾರಸ್ವಾಮಿ : ಅದೇ ಈಗ ಬಂದಿರುವ ಪ್ರಶ್ನೆ. ಏತಕ್ಕೆ ನಾನು ಇವತ್ತು ಈ ವಿಷಯವನ್ನು ತಂದೆ ಎಂದು ಈ ವಿಷಯಗಳನ್ನು ಆರಂಭಿಕ ಹಂತದಲ್ಲಿ ಹೇಳಿದೆನು. ಹಲವಾರು ಜನ ಮಾನ್ಯ ಸದಸ್ಯರುಗಳಿಗೆ ಈ ವಿಷಯ ಗೊತ್ತಿಲ್ಲ. ಈ ವಿಷಯಗಳನ್ನು ತರಲಿಕ್ಕೆ ಕಾರಣವನ್ನು ಮೊನ್ನೆ ಸಭೆಯಲ್ಲಿ ಹೇಳಿದ್ದೇನೆ. ಬೇಡ ಈ ವಿಷಯ ಸೂಕ್ಷ್ಮವಾಗಿರುವುದರಿಂದ ಈ ವಿಷಯವನ್ನು ಚರ್ಚೆ ಮಾಡುವುದು ಬೇಡ. ತಿದ್ದುಪಡಿ ತಂದು ಇದಕ್ಕೆ ಒಪ್ಪಿಗೆ ಕೊಟ್ಟುಬಿಟ್ಟರೆ ನಾವು ಇದರ ಬಗ್ಗೆ ಚರ್ಚೆ ಮಾಡುವುದು ಬೇಡ ಎಂದು ಹೇಳಿದೆ. ಈಗ ಕಾನೂನು ತಜ್ಞರು ಸಲಹೆ ಕೊಟ್ಟಿದ್ದಾರೆ. ಅದನ್ನೆಲ್ಲಾ ಮಾಡಿದ್ದಾರೆ. ಮಾನ್ಯ ಶ್ರೀನಿವಾಸ ಪ್ರಸಾದ್‌ರವರು ಹಿರಿಯ ಸಚಿವರಿದ್ದಾರೆ, ಅವರಿಗೆ ಅನುಭವವಿದೆ. ಆದರೆ ಒಂದು ಮಾತನ್ನು ನಾನು ಅವರಿಗೆ ಹೇಳಬಯಸುತ್ತೇನೆ. ದೇವೇಗೌಡರ ಹೋರಾಟದ ಬಗ್ಗೆ ಈ ರಾಜ್ಯದಲ್ಲಿ ನೀರಿನ ವಿಷಯದಲ್ಲಿ ಚರ್ಚೆ ಮಾಡುವುದಕ್ಕೆ ಯಾರಿಗೂ ಶಕ್ತಿಯಿಲ್ಲ. ಅವರು ಕೊಟ್ಟಿರುವಂಥ ಕೊಡುಗೆಯನ್ನು ಇವತ್ತು ಯಾರೂ ಪ್ರಶ್ನೆ ಮಾಡಲಿಕ್ಕೆ ಸಾಧ್ಯವಿಲ್ಲ. ಇವತ್ತು ತಮಿಳುನಾಡಿನ ಮುಖ್ಯಮಂತ್ರಿಗಳು ಪ್ರತಿ ದಿವಸ ಏನು ಮಾಡುತ್ತಿದ್ದಾರೆ? ಯಾವ್ಯಾವ ರೀತಿಯಲ್ಲಿ ಇವತ್ತು ಕೇಂದ್ರ ಸರ್ಕಾರದ ಮುಂದೆ ಹೋಗಿ, ಸುಪ್ರೀಂ ಕೋರ್ಟ್‌ನ ಮುಂದೆ ಹೋಗಿ ಅವರು ಯಾವ ರೀತಿ ನಿರ್ಣಯಗಳನ್ನು ತೆಗೆದುಕೊಳ್ಳುತ್ತಿದ್ದಾರೆ? ನೀವೇನು ಮಾಡುತ್ತಿದ್ದೀರಿ? ಶ್ರೀ ಹೆಚ್.ಡಿ.ದೇವೇಗೌಡರು ಪ್ರಧಾನ ಮಂತ್ರಿಗಳಾಗಿ ಅಧಿಕಾರದಲ್ಲಿದ್ದುದು ಕೇವಲ 10 ತಿಂಗಳು. ಕಾವೇರಿ ನ್ಯಾಯಾಧಿಕರಣ ರಚನೆಯಾಗುವುದಕ್ಕೆ ಕಾಂಗ್ರೆಸ್ ಇರುವವರೆಗೂ ಅವಕಾಶ

ಕೊಡಲಿಲ್ಲವೆಂದು ಹೇಳಿದ್ದಾರೆ. ಸದನವನ್ನು ತಪ್ಪು ದಾರಿಗೆ ಎಳೆಯುವುದು ಬೇಡ. 1989ನೇ ಇಸವಿಯಲ್ಲಿ ಶ್ರೀ ವೀರೇಂದ್ರ ಪಾಟೀಲ್‌ರವರು ಮುಖ್ಯಮಂತ್ರಿಯಾಗಿದ್ದಾಗ ಹೊಳೆನರಸೀಪುರ ಕ್ಷೇತ್ರದಿಂದ ಶ್ರೀ ಹೆಚ್.ಡಿ.ದೇವೇಗೌಡರವರನ್ನು ಸೋಲಿಸಿ ವಿಧಾನ ಸಭೆಗೆ ಆಯ್ಕೆಯಾಗಿ ಬಂದಂತಹ ಶ್ರೀ ಪುಟ್ಟಸ್ವಾಮಿಗೌಡರವರನ್ನು ನೀರಾವರಿ ಸಚಿವರನ್ನಾಗಿ ಮಾಡಿಸಿದರು. ಯಾರು ಮಾಇಸಿದರೆಂಬ ಬಗ್ಗೆ ನಾನು ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಅವತ್ತು ಎರಡು ಕಡೆ ಶ್ರೀ ಹೆಚ್.ಡಿ.ದೇವೇಗೌಡರು ಸೋತಿದ್ದರು. ಸೋತಿದ್ದೇನೆಂದು ಅವರು ಮನೆಯಲ್ಲಿ ಕುಳಿತುಕೊಂಡಿರಲಿಲ್ಲ. ಆಗಲೂ ಕೂಡ ಹೋರಾಟ ಮಾಡಿಕೊಂಡು ಬಂದಿದ್ದಾರೆ. ಕಾವೇರಿ ನ್ಯಾಯಾಧಿಕರಣದ ರಚನೆಯಾಗುವ ಹಿನ್ನೆಲೆ ಏನೆಂದರೆ, ತಮಿಳುನಾಡಿನಲ್ಲಿ ನೀರಿಗೆ ತೊಂದರೆಯಿದೆಯೆಂದು ಹೇಳಿ ಎರಡು ಟಿ.ಎಂ.ಸಿ. ಅಥವಾ ಮೂರು ಟಿ.ಎಂ.ಸಿ. ನೀರನ್ನು ಬಿಡಿಎಂದು ಕರ್ನಾಟಕ ರಾಜ್ಯ ಸರ್ಕಾರಕ್ಕೆ ಮನವಿಯನ್ನು ಸಲ್ಲಿಸುವುದಕ್ಕೆ ತಮಿಳುನಾಡಿನ ನೀರಾವರಿ ಸಚಿವರು ಒಂದು ದಿವಸ ಕುಮಾರ ಕೃಪಾ guest house ನಲ್ಲಿ ಬಂದು ಕುಳಿತರು. ಅಂದು ಮುಖ್ಯಮಂತ್ರಿಯಾಗಿದ್ದ ಶ್ರೀ ವೀರೇಂದ್ರ ಪಾಟೀಲರು ಅವರನ್ನು ಭೇಟಿ ಮಾಡಲಿಲ್ಲ. ನೀರಾವರಿ ಸಚಿವರು ಅವರನ್ನು ಭೇಟಿ ಮಾಡಿದರು. ಅವರು ಹೊಳೆನರಸೀಪುರದಲ್ಲಿದ್ದರು. ಭೇಟಿ ಮಾಡಲಿಲ್ಲ. ತಮಿಳುನಾಡಿನ ನೀರಾವರಿ ಸಚಿವರು ಕುಮಾರ ಕೃಪಾ ಗೆಸ್ಟ್ ಹೌಸ್‌ನಲ್ಲಿ ಕುಳಿತಿದ್ದರು. ಕರ್ನಾಟಕ ರಾಜ್ಯ ಸರ್ಕಾರದಿಂದ ಯಾರೂ ಅವರನ್ನು ಕರೆದು ಚರ್ಚೆ ಮಾಡುವ ಒಂದು ಔದಾರ್ಯತೆಯನ್ನು ತೋರಿಸಲಿಲ್ಲವೆಂಬ ಒಂದು ದೊಡ್ಡ ಚಿತ್ರ ಮಾರನೆ ದಿವಸ ಹಿಂದು ದಿನಪತ್ರಿಕೆಯಲ್ಲಿ ಬಂತು. ಆಗ ಕರುಣಾನಿಧಿಯವರು ಕೇಂದ್ರ ಸರ್ಕಾರದ ಮುಂದೆ ಹೋಗಿ ಕಾವೇರಿ ನ್ಯಾಯಾಧಿಕರಣವನ್ನು ರಚನೆ ಮಾಡಿಎಂದರು. ಅದಕ್ಕಿಂತ ಮುಂಚೆ ಶ್ರೀ ಹೆಚ್.ಡಿ.ದೇವೇಗೌಡರು ಅಂದು ಶ್ರೀ ರಾಮಕೃಷ್ಣ ಹೆಗಡೆಯವರ ಮಂತ್ರಿಮಂಡಲದಲ್ಲಿ ನೀರಾವರಿ ಸಚಿವರಾಗಿದ್ದಾಗ ಬೆಳಗಿನ ಜಾವ ಮೂರು ಗಂಟೆ ರಾತ್ರಿಯಲ್ಲಿ ಚರ್ಚೆ ಮಾಡಿದ್ದಾರೆ. ಅವತ್ತು ರಾಜ್ಯಕ್ಕೆ ದಿ:ರಾಜೀವ್ ಗಾಂಧಿಯವರು ಯಾವ ರೀತಿ ರಕ್ಷಣೆ ಕೊಟ್ಟಿದ್ದಾರೆಂದು ಹೇಳಿ ಇವತ್ತು ನಾನು ದಿ:ರಾಜೀವ್ ಗಾಂಧಿಯವರನ್ನು ನೆನಪಿಸಿಕೊಳ್ಳುವುದಕ್ಕೆ ಬಯಸುತ್ತೇನೆ. ಅಂದು ಹೆಚ್.ಡಿ.ದೇವೇಗೌಡರು ಕೊಟ್ಟಂತಹ ಕೆಲವು ಸಲಹೆಗಳ ಮೇರೆಗೆ ಟ್ರಿಬ್ಯುನಲ್ ರಚನೆ ಮಾಡುವುದಕ್ಕೆ ದಿ:ರಾಜೀವ್ ಗಾಂಧಿಯವರು ಅವಕಾಶ ಕೊಡಲಿಲ್ಲ. 1989 ರಲ್ಲಿ ಇಲ್ಲಿ ಕಾಂಗ್ರೆಸ್ ಸರ್ಕಾರ ಸರಿಯಾದ ರೀತಿಯಲ್ಲಿ ನಡೆದುಕೊಳ್ಳಲಿಲ್ಲ. ವಿ.ಪಿ.ಸಿಂಗ್ ಸರ್ಕಾರವಿರಬಹುದು. ನೀವು ಇಲ್ಲಿ ಸರಿಯಾದ ರೀತಿಯಲ್ಲಿ

ನಡೆದುಕೊಂಡು ಮೂರು ಟಿ.ಎಂ.ಸಿ. ನೀರನ್ನು ಬಿಟ್ಟಿದ್ದರೆ ತಮಿಳುನಾಡು ಸರ್ಕಾರ ಕಾವೇರಿ ನ್ಯಾಯಾಧಿಕರಣ ರಚನೆ ಮಾಡಿಯೆಂದು ಏಕೆ ಕೇಳುತ್ತಿದ್ದರು? 20 ವರ್ಷದಿಂದ ನಡೆದುಕೊಂಡು ಬರುತ್ತಿತ್ತು, ಅವರು ಕೇಳಿದಾಗ ನಾವು ನೀರನ್ನು ಬಿಡುತ್ತಿದ್ದೆವು. ಆಗ ಶ್ರೀ ಕರುಣಾನಿಧಿಯವರು ಕೇಂದ್ರ ಸರ್ಕಾರದ ಮೇಲೆ ಒತ್ತಡ ಹಾಕಿದರು. ಕಾವೇರಿ ನ್ಯಾಯಾಧಿಕರಣ ರಚನೆ ಮಾಡಬೇಕೆಂಬ ತೀರ್ಮಾನ ಮಾಡಿದರೆ ಅವತ್ತಿನ ಕಾಂಗ್ರೆಸ್ ಸರ್ಕಾರ ಕಾವೇರಿ ನ್ಯಾಯಾಧಿಕರಣವನ್ನು ರಚನೆ ಮಾಡತಕ್ಕಂಥದ್ದನ್ನು ಸ್ವಾಗತ ಮಾಡುತ್ತೇವೆ. ಇದು ನಮಗೆ ಒಳ್ಳೆಯದಾಗುತ್ತದೆಂಬ ಹೇಳಿಕೆ ಕೊಟ್ಟಿದ್ದಾರೆ. ಪತ್ರಿಕೆಯಲ್ಲಿ ಬಂದಿರುವಂತಹ ಕಡತಗಳನ್ನು ಮಂಡಿಸುವುದಕ್ಕೆ ನಾನು ತಯಾರಿದ್ದೇನೆ. ದಯವಿಟ್ಟು ಈ ರೀತಿ ತಾವು ಸದನವನ್ನು ತಪ್ಪು ದಾರಿಗೆ ಎಳೆಯಬೇಡಿ. ನೀವು ಗೌರವಾನ್ವಿತ ಸಚಿವರಾಗಿದ್ದೀರಿ, ಸದಸ್ಯರಾಗಿದ್ದೀರಿ.

(ಗೊಂದಲ)

ಶ್ರೀ ವಿ.ಶ್ರೀನಿವಾಸ ಪ್ರಸಾದ್ : ಶ್ರೀ ರಾಜೀವ್ ಗಾಂಧಿಯವರನ್ನು ಶ್ರೀ ಹೆಚ್.ಡಿ.ದೇವೇಗೌಡರು ಭೇಟಿ ಮಾಡಿದ ನಂತರ.....

(ಗೊಂದಲ)

ಶ್ರೀ ಹೆಚ್.ಡಿ.ಕುಮಾರಸ್ವಾಮಿ : ಅವರ ಬಗ್ಗೆ ಚರ್ಚೆ ಮಾಡುವುದು ಬೇಡ. ....

(ಗೊಂದಲ)

ಅಧ್ಯಕ್ಷರು : ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ : ಮಾನ್ಯ ಅಧ್ಯಕ್ಷರೆ, ಇವತ್ತು ನಾವು ಚರ್ಚೆ ಮಾಡುವ ವಿಷಯದ ಬಗ್ಗೆ ಸಮಾಧಾನಕರವಾದ ರೀತಿಯಲ್ಲಿ ಉತ್ತರ ಕೊಡುತ್ತೇವೆಂಬ ದೊಡ್ಡತನದ ಮಾತನ್ನು ಸನ್ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾರೆ. ಅದರ ಬಗ್ಗೆ ಮಧ್ಯದಲ್ಲಿ disturbance ಬೇಕಿಲ್ಲ. ಇವತ್ತು ಯಾರು ಹೋರಾಟ ಮಾಡುತ್ತಿದ್ದಾರೆ ಅವರ sincerity ಎಷ್ಟಿದೆ ಅದರ ಬಗ್ಗೆ ಬೇರೆಯವರಿಂದ ಶ್ರೀ ಹೆಚ್.ಡಿ.ದೇವೇಗೌಡರು certificate ತೆಗೆದುಕೊಳ್ಳಬೇಕಿಲ್ಲ. ಯಾರಿಂದಲೂ certificate ತೆಗೆದುಕೊಳ್ಳುವುದು ಬೇಕಿಲ್ಲ. ಅವರು ಅಂತಿಮವಾಗಿ ದೇವರಿಂದ certificate ತೆಗೆದುಕೊಳ್ಳುತ್ತಾರೆ. ಅದರ ಬಗ್ಗೆ ನಾನು ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ನಿಮ್ಮಿಂದ certificate ಅವಶ್ಯಕತೆಯಿಲ್ಲ. ಯಾವಾಗ

ತಮಿಳುನಾಡು ಸರ್ಕಾರ Cauvery Water Disputes Tribunal ವಿಷಯದಲ್ಲಿ.....

ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಗಳು) :- ಕಾವೇರಿ ಟ್ರಿಬ್ಯುನಲ್ ಏನಿದೆ ಇದರ ಐತೀರ್ಪು ಬಂದು ಸುಮಾರು ಆರು ವರ್ಷಗಳಾಗಿದೆ. 2007ರಲ್ಲಿ ಶ್ರೀ ಹೆಚ್.ಡಿ.ಕುಮಾರಸ್ವಾಮಿಯವರು ಮಾನ್ಯ ಮುಖ್ಯಮಂತ್ರಿಗಳಾಗಿದ್ದರು. ಇದರ ಬಗ್ಗೆ ಇದೇ ಸದನದಲ್ಲಿ ಸುದೀರ್ಘವಾಗಿ ಚರ್ಚೆಯಾಗಿದೆ. ನಾವೆಲ್ಲಾ ಆ ಕಡೆ ಕುಳಿತು ಈ ಚರ್ಚೆಯಲ್ಲಿ ಭಾಗವಹಿಸಿದ್ದೇವೆ. ಆಗ ಸಮ್ಮಿಶ್ರ ಸರ್ಕಾರವಿದ್ದು, ಈ ತೀರ್ಪು ಬಂದಾಗ ನೀವೇ ಮುಖ್ಯಮಂತ್ರಿಗಳಾಗಿದ್ದಿರಿ. ಇದರ ಸಾಧಕ–ಬಾಧಕಗಳ ಬಗ್ಗೆ ಬಹಳ ಸುದೀರ್ಘವಾಗಿ ಚರ್ಚೆಯಾಗಿದೆ. ಈಗ ಮತ್ತೆ ಹಿಂದೆ ಹೋಗುವುದು ಬೇಡ. ಆಗ ನಿಮ್ಮ ಸರ್ಕಾರವೇ ಉತ್ತರ ಕೊಟ್ಟಿದೆ. ನೀವು ಉತ್ತರ ಕೊಡಲಿಲ್ಲ. ಆಗ ಮಾನ್ಯ ನೀರಾವರಿ ಸಚಿವರಾಗಿದ್ದ ಶ್ರೀ ಕೆ.ಎಸ್.ಈಶ್ವರಪ್ಪನವರು ಉತ್ತರ ಕೊಟ್ಟಿದ್ದಾರೆ. ನಾವು ಇದರ ಬಗ್ಗೆ ಗಂಟೆಗಟ್ಟಲೆ ಮಾತನಾಡಿದ್ದೇವೆ. ಮತ್ತೆ ಹಿಂದಕ್ಕೆ ಹೋಗಿ ಕೆದಕುವುದು ಅಷ್ಟು ಚೆನ್ನಾಗಿರುವುದಿಲ್ಲ. Cauvery Water Dispute ಇರಬಹುದು, Krishna Water Dispute ಇರಬಹುದು ಇದರ ಬಗ್ಗೆ ನಾವು ಮೊದಲಿನಿಂದ ರಾಜಕಾರಣ ಮಾಡಿಕೊಂಡು ಬಂದಿಲ್ಲವೆಂದು ಹೇಳಿಕೊಂಡು ಬಂದಿದ್ದೇವೆ. ಮತ್ತೆ ಈಗ ಯಾರ್‍ಯಾರ ಕಾಲದಲ್ಲಿ ಏನೇನಾಯಿತೆಂದು ಹೇಳುತ್ತಾ ಕುಳಿತುಕೊಂಡರೆ ಅದು ರಾಜ್ಯದ ಹಿತದೃಷ್ಟಿಯಿಂದ ಅಷ್ಟೊಂದು ಒಳ್ಳೆಯದಲ್ಲವೆಂಬುದು ನನ್ನ ಭಾವನೆ. ಬಹಳ ದೀರ್ಘವಾಗಿ Tribunal final verdict ಮೇಲೆ ಚರ್ಚೆ ಮಾಡುವುದರಿಂದ ಪ್ರಯೋಜನವೇನೂ ಆಗುವುದಿಲ್ಲ. ಈಗಾಗಲೇ ಈ ಬಗ್ಗೆ ಚರ್ಚೆಯಾಗಿದೆ. ಅವತ್ತಿದ್ದ ಸರ್ಕಾರ ಉತ್ತರ ಕೊಟ್ಟಾಗಿದೆ. ಪದೇ ಪದೇ ಹಿಂದಕ್ಕೆ ಹೋಗುವುದು ಅಷ್ಟು ಚೆನ್ನಾಗಿರುವುದಿಲ್ಲವೆಂಬುದು ನನ್ನ ಸಲಹೆ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ : ಮಾನ್ಯ ಅಧ್ಯಕ್ಷರೆ, ಒಂದು ವಿಷಯವನ್ನು ನಾನು ಮಾನ್ಯ ಸಭಾನಾಯಕರ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ನಾನು ಅದಕ್ಕೆ ಮೊನ್ನೆ ಹೇಳಿದ್ದೇನೆಂದು ಇವತ್ತು ಪದೇ ಪದೇ ಹೇಳುತ್ತಿದ್ದೇನೆ. ಐತೀರ್ಪು ತಿದ್ದುಪಡಿಯನ್ನು ಈಗ ತರುವ ಬದಲು ಮೊನ್ನೆ ನಾನು ಹೇಳಿದಾಗಲೇ ತಂದಿದ್ದರೆ ಈ ಚರ್ಚೆಯೇ ಬರುತ್ತಿರಲಿಲ್ಲ. ಹಿಂದಿನದನ್ನು ಏಕೆ ಹೇಳಿಕೊಂಡು ಹೋದೆನೆಂದರೆ ಶ್ರೀ ವಿ.ಶ್ರೀನಿವಾಸ ಪ್ರಸಾದ್‌ರವರು ಪ್ರಸ್ತಾಪ ಮಾಡಿದರು. ಏನು ಕೆಲವು ಘಟನೆಗಳು ನಡೆದಿದೆ ಅದರ ಬಗ್ಗೆ ಈಗಲಾದರೂ ಸರ್ಕಾರ ಯೋಚಿಸಲಿ

ಅವರದೇ ಸರ್ಕಾರ ಕೇಂದ್ರ ಸರ್ಕಾರದಲಿದೆ. ನಾವು ತಪ್ಪು ಮಾಡಿದ್ದೇವೆ, ನೀರನ್ನು ಉಳಿಸಿಕೊಳ್ಳುವುದಕ್ಕಾಗಲಿಲ್ಲ. ಶ್ರೀ ಹೆಚ್.ಡಿ.ದೇವೇಗೌಡರು ಮಾನ್ಯ ಪ್ರಧಾನ ಮಂತ್ರಿಗಳಾಗಿ ನೀರನ್ನು ಉಳಿಸಿಕೊಳ್ಳುವುದಕ್ಕಾಗಲಿಲ್ಲ. ಈಗ ನೀವಿದ್ದೀರಿ, ನಿಮ್ಮದೇ ಸರ್ಕಾರವಿದೆ. ಏನಾದರೂ ಮಾಡಿ ನಮ್ಮ ಜನರನ್ನು ಉಳಿಸಿ ಎಂದು ಕೇಳಿಕೊಳ್ಳುವುದಕ್ಕೆ ಕೆಲವು ವಿಷಯಗಳನ್ನು ಹೇಳಬೇಕಾಗಿದೆ. ಅದನ್ನು ಊಟದ ನಂತರ ಹೇಳುತ್ತೇನೆ.

ಅಧ್ಯಕ್ಷರು : ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು ಈ ದಿನ ಮಧ್ಯಾಹ್ನ 1.30 ಗಂಟೆಗೆ ಬ್ಯಾಂಕ್ವೆಟ್ ಹಾಲ್‌ನಲ್ಲಿ ಭೋಜನ ಕೂಟವನ್ನು ಏರ್ಪಡಿಸಿದ್ದು, ತಾವೆಲ್ಲರೂ ಪಾಲ್ಗೊಳ್ಳಬೇಕೆಂದು ಪ್ರಾರ್ಥನೆ ಮಾಡಿಕೊಂಡು ಈಗ ಸದನವನ್ನು ಮುಂದೂಡಿ ಪುನಃ 2.30 ಗಂಟೆಗೆ ಸೇರೋಣ.

(ಸಭೆಯನ್ನು ಮಧ್ಯಾಹ್ನ 1 ಗಂಟೆ 40 ನಿಮಿಷಕ್ಕೆ ಮುಂದೂಡಲಾಯಿತು)

(ಸದನವು ಪುನಃ ಮಧ್ಯಾಹ್ನ 2 ಗಂಟೆ 54 ನಿಮಿಷಕ್ಕೆ ಸಮಾವೇಶಗೊಂಡಿತು. ಸಭಾಧ್ಯಕ್ಷರಾದ ಶ್ರೀ ಕಾಗೋಡು ತಿಮ್ಮಪ್ಪ ರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು.)

ಶ್ರೀ ಹೆಚ್.ಡಿ.ಕುಮಾರಸ್ವಾಮಿ (ವಿರೋಧ ಪಕ್ಷದ ನಾಯಕರು): ಮಾನ್ಯ ಸಭಾಧ್ಯಕ್ಷರೆ, ಕಾವೇರಿ ಐತೀರ್ಪಿನ ಹಿನ್ನೆಲೆಯಲ್ಲಿ ಸದನದ ಗಮನವನ್ನು ಸೆಳೆಯುತ್ತಿದ್ದೇನೆ. ನಂತರ ಅದರ ಮುಂದುವರೆದ ಭಾಗವಾಗಿ ಯಾವ ರೀತಿ ಕಾವೇರಿ ಟ್ರಿಬ್ಯುನಲ್‌ನ ಛೇರ್‌ಮನ್ ಶ್ರೀ ಎನ್.ಪಿ.ಸಿಂಗ್‌ರವರು ರಾಜೀನಾಮೆ ಕೊಟ್ಟರು, ಅದರ ಹಿನ್ನೆಲೆಯಲ್ಲಿ 8ನೇ ಮಾರ್ಚ್ 2013ರಲ್ಲಿ ಮತ್ತೆ ಪ್ರಧಾನಮಂತ್ರಿಗಳ ಗಮನ ಸೆಳೆದಿದ್ದಾರೆ. ಅದರಲ್ಲಿ ನಾನು ಎಲ್ಲಾವಿಷಯಗಳನ್ನು ಚರ್ಚೆ ಮಾಡುವುದಕ್ಕೆ ಹೋದರೆ ಹೆಚ್ಚಿನ ಸಮಯ ತೆಗೆದುಕೊಳ್ಳಬೇಕಾಗುತ್ತದೆ. ಕೆಲವು ಪ್ರಮುಖವಾದ ಅಂಶಗಳನ್ನು ಸದನದ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. "This brings the issue down to the moot question of what kind of Tribunal ought to answer the pending references made by the Union Government and the party states, a broken Tribunal made functional by filling the vacancy of the chairman or a tribunal in which people of all the party states can repose their faith and trust and unhesitatingly accept the wording. Just to give a

very brief background the Cauvery Water Disputes Tribunal was constituted under section 4 of the Inter-State River Water Disputes Act 1956. The Tribunal commenced working from the year 1990. On 5th February 2007, after a lapse of 17 years the tribunbal passed its final award against which the State of Karnataka has preferred a Special Leave Petition under Article 131 of the Constitution before the Supreme Court of India. Karnataka has also moved the Tribunal under Section 5(3) of the Act seeking further clarifications and guidance so as to the Union Government and other party states. The Chairman of the Tribunal Justice Shri N.P.Singh having resigned in April 2012, Tamil Nadu has sought for appointment of a new Chairman. There is now an occasion and opportunity to revisit some basic issues as to the functioning of and expectation from the Tribunal. I am not for a moment, questioning the personal integrity and honesty of the Chairman and the other members who are from the great traditions of the Indian Judiciary. They undertook a very sensitive, volatile and highly contentious assignment. I am not also referring to the merits of the dispute on which all of the citizens and the Government must abide by the verdict of the judicial authority. The sharing of river water is a sensitive and emotive issue for the citizens of both states. The dispute and its outcome have considerably disturbed law and order situations in karnataka and have alienated the citizenry from their Government,a trend detrimental to the promotion of a concordious society so essential to the unity and integrity of the nation and to the democratic values. The second and third orders passed were entirely improper and contrary to all norms of judicial etiquette. These observations which are part of the public record have state sentiments of large population of Karnataka and

have created apprehensions of denial of justice. This apprehension can't perhaps be said to be unreasonable. Therefore, it is my considered view and humble appeal that appropriate re-constitution of the Tribunal might allay apprehension of the citizenry of karnataka. I leave this sensitive matter to your goodself." ಇದು ಮಾನ್ಯ ಶ್ರೀ ಮನಮೋಹನ್ ಸಿಂಗ್, ಪ್ರಧಾನ ಮಂತ್ರಿಗಳಿಗೆ 8ನೇ ಮಾರ್ಚ್ 2013ರಲ್ಲಿ ಈ ರಾಜ್ಯದ ಒಬ್ಬ ಅತ್ಯಂತ ಗೌರವಾನ್ವಿತ ವ್ಯಕ್ತಿ, ಮಾಜಿ ಪ್ರಧಾನಮಂತ್ರಿಯವರು ಕಾನೂನು ತಜ್ಞರಿಂದ ಕೆಲವು ಮಾಹಿತಿಗಳನ್ನು ತೆಗೆದುಕೊಂಡು ಈ ಪತ್ರವನ್ನು ಬರೆದಿದ್ದಾರೆ. ಇದನ್ನು ಯಾವ ವಿಷಯದಲ್ಲಿ ತರುತ್ತಿದ್ದೇನೆಂದರೆ, ಇವತ್ತು ಹಳೆಯ ಕಥೆ ಬೇಡ ಎಂದು ಹೇಳಬಹುದು. ಮುಂದೆ ಏನಾದರೂ ಅಂತಿಮವಾಗಿ conclude ಮಾಡಬೇಕಾದರೆ ನಾನು ಸಭಾನಾಯಕರ ಗಮನವನ್ನು ಸೆಳೆಯಬಯಸುತ್ತೇನೆ. ಮಾನ್ಯ ಅಧ್ಯಕ್ಷರೆ, ಅದಾದ ನಂತರ ಪ್ರಮುಖವಾದ ಒಂದು ಅಂಶ. ಶ್ರೀ ಪವನ್ ಕುಮಾರ್ ಬನ್ಸಾಲ್, Water Resources minister ರವರು ತಮಿಳುನಾಡು ಮುಖ್ಯಮಂತ್ರಿ ಜಯಲಲಿತಾ ರವರಿಗೆ ಜನವರಿ 13, 2012 ರಂದು ಒಂದು ಪತ್ರವನ್ನು ಬರೆಯುತ್ತಾರೆ. "As regards publication of the final order dated:5/2/2007 of CWDT, party states including Tamil Nadu have filed Special Leave petitions in the Hon'ble supreme Court against the said order of the Tribunal. The Court has granted leave and these petitions are under consideration of the Hon'ble Supreme Court. Union Ministry of Water Resources has been impleaded under the filed affidavit in the Supreme Court as per section 11 of Inter-state Water Disputes Act 1956. Neither this Court nor any other Court shall have exercised jurisdiction in respect of any water dispute that may be referred to the Tribunal under the Act. The matter is being heard by the three-Judge Bench. It would be appropriate to consider notification of order dated 5/2/2007 of CWDT once the matter is disposed off by the supreme court."

ಶ್ರೀ ಬನ್ಸಾಲ್ ರವರು ತಮಿಳುನಾಡು ಮುಖ್ಯಮಂತ್ರಿಗಳಿಗೆ ಪತ್ರ ಬರೆಯುತ್ತಾರೆ. ಈ ಪತ್ರವನ್ನು ಬರೆದ ನಂತರ ಸುಪ್ರೀಂ ಕೋರ್ಟ್ ಕೃಷ್ಣಾ ನದಿ ನೀರಿನ ವಿಷಯದಲ್ಲಿ ತೀರ್ಪು ನೀಡಿದೆ.

"In our opinion there is no justification to stay the decision dht. 30.12.2010 because the Refernce petitions filed by the party states and central Government are pending before the Tribunal. We are also not inclined to stay the proceedings of the Reference Petitions, However, Keeping in view of the fact that the matter would require detailed consideration by this court, we direct that till further orders the decision which may be taken by the Tribunal on the Reference petitions filed by the three states and the Central Government shall not be published in the official gazette in terms of Section 6(1) of the Act."

ಸುಪ್ರೀಂ ಕೋರ್ಟ್ ಕೃಷ್ಣಾ ನದಿ ನೀರಿನ ವಿಷಯದಲ್ಲಿ ಯಾವ ಒಂದು ತೀರ್ಪು ಕೊಟ್ಟಿದ್ದಾರೆ, ತಮಿಳುನಾಡಿನವರು gazette notification ಆಗಲೇ ಬೇಕೆಂದು ಹೇಳಿ ಸುಪ್ರೀಂ ಕೋರ್ಟಿನ ಮುಂದೆ ಒತ್ತಾಯ ಹಾಕುತ್ತಿರುವ ಹಿನ್ನೆಲೆಯಲ್ಲಿ ಮತ್ತೆ 12.01.2013ರಲ್ಲಿ ಪ್ರಧಾನ ಮಂತ್ರಿಗಳ ಗಮನ ಸೆಳೆದಿದ್ದಾರೆ.

"It is my humble appeal to your goodself that the immediate notification of the award is fraught with very serious implications for the people of state of karnataka who will be deprived of even drinking water as the award is fundamentally flawed and the Special Leave petitions against the same have been submitted before the Hon'ble supreme Court of India and are pending. Hence, I must point out that not only the Special Leave Petition but also the reference before the Tribunal under section 5(3) of the Inter-state River water Disputes Act 1956, to correct the fundamental flaws in the award which pose great injustice to the people of karnataka is also pending. In a similar dispute under the Inter-state Rivers Act. ಕೃಷ್ಣಾ ಬಗ್ಗೆ ಅದನ್ನು ಪ್ರಧಾನ ಮಂತ್ರಿಗಳ ಗಮನಕ್ಕೆ ತಂದಿದ್ದೇವೆ. And the central

government shall not publish in the official gazette in terms of section 6(1) of the Act. It is with this understanding only that the Union Minister of Water Resources Sri. P.K. Bansal, in his letter dated 13.01.2012 wrote to the chief Minister of Tamil Nadu, that since the Special Leave petitions are pending before the Supreme Court after grant of leave challenging the award passed by the Cauvery water Disputes Tribunal, the notification of the award is-required to be deferred till the pending SLPs are disposed."

ಇದನ್ನು ಪ್ರಧಾನ ಮಂತ್ರಿಗಳ ಗಮನಕ್ಕೆ ಇಲ್ಲಿಂದ ಏನು ತಂದಿದ್ದೇವೆ ಎಂದರೆ,

"The notification of the award passed by the Cauvery Water Tribunal by the union government has disastrous repercussions on the people of karnataka. When the subject matter is pending before the Hon'ble Supreme Court it is also sub-judice. The precedent of Hon'ble Supreme Court in krishna river case is eye-opener to the Union Government. In view of the forgoing, I humbly request to your good office to intervence in the matter immediately and save the people of karnataka from facing a disastrous situation of without water for drinking and agricultural purposes. Taking note of the communication dated 13.01.2012 sent by the Union Minister of Water Resources a stand be taken before the Hon'ble Supreme Court on behalf of the Union Government to defer the Notification of the CWDTaward till the final disposal of the all pending SLPs before the Hon'ble Supreme Court."

ಇದು ಪ್ರಧಾನ ಮಂತ್ರಿಗಳ ಗಮನಕ್ಕೆ ಏನು ತಂದಿದ್ದಾರೆ, ಈಗ ಪ್ರಶ್ನೆ. ನಾನು ಮೊನ್ನೆ ದಿನ ತೆಗೆದುಕೊಂಡ ರಾಜ್ಯಪಾಲರ ಭಾಷಣದ ವಿಷಯದಲ್ಲಿ ಒಂದು ತಿದ್ದುಪಡಿ ತರಬೇಕೆಂಬ ಮನವಿಯನ್ನು ಸಲ್ಲಿಸಿದ್ದು, ಅದಕ್ಕೆ ಪ್ರಮುಖವಾದ ಕಾರಣ ತಮಿಳುನಾಡು, ಕರ್ನಾಟಕ, ಕೇರಳ, ಪಾಂಡಿಚೇರಿ

ಮತ್ತು Union Government ಈ ಐದು SLP ಗಳು Supreme Court ಮುಂದಿದೆ. ಬರುವ ಆಗಸ್ಟ್ 6 ರಂದು ಸುಪ್ರೀಂ ಕೋರ್ಟ್ ಮುಂದೆ ಈ ಒಂದು ವಿಷಯವನ್ನು ತರುವುದು ಏನಿದೆ, ತಾವು ruling ಕೊಟ್ಟಿದ್ದೀರಿ, ಅದನ್ನು ನಾವು ಪ್ರಶ್ನೆ ಮಾಡಲಾಗುವುದಿಲ್ಲ. ತಾವು ಕೊಟ್ಟಿರುವ ruling ಬಗ್ಗೆ ನಾನು ಚರ್ಚಿಸುವುದಿಲ್ಲ. ತಮ್ಮ ruling ಅನ್ನು ನಾವು ಗೌರವಿಸಬೇಕಾಗುತ್ತದೆ. ಆದರೆ ಏನು ಒಂದು ಪ್ರಶ್ನೆ ಉದ್ಭವವಾಗುತ್ತದೆ, ಅಂದರೆ ಇವತ್ತು ಆ ಒಂದು ತೀರ್ಮಾನದಿಂದ Governor ರವರ ಭಾಷಣದಲ್ಲಿ 'ಕಾವೇರಿ ಐತೀರ್ಪಿನ ಅನುಸಾರವಾಗಿ' ಎನ್ನುವುದು ಏನಿದೆ, ಬಹುಶಃ ಅದನ್ನು ತಾವು ಉಳಿಸಿಕೊಳ್ಳುವುದೇ ಆದರೆ, ಮುಂದೆ SLPಗಳ ಕಥೆ ಏನಾಗಬಹುದು ಸುಪ್ರೀಂ ಕೋರ್ಟಿನ ಮುಂದೆ? ಇದು ಪ್ರಮುಖವಾದ ಅಂಶ. ಸರ್ಕಾರ ಯಾವ ರೀತಿಯಲ್ಲಿ ಈ ವಿಷಯವನ್ನು ಸರಿಪಡಿಸಿಕೊಳ್ಳಬೇಕು ಎಂಬುದನ್ನು ಸರ್ಕಾರಕ್ಕೆ ಬಿಡುತ್ತೇನೆ. ಇದು ಅತ್ಯಂತ ಸೂಕ್ಷ್ಮವಾದ ವಿಚಾರ. ಸನ್ಮಾನ್ಯ ಗೌರವಾನ್ವಿತ ರಾಜ್ಯಪಾಲರ ಭಾಷಣದ ಪ್ರತಿಯನ್ನು ತೆಗೆದುಕೊಂಡು ತಾವು ಸಚಿವ ಸಂಪುಟದಲ್ಲಿ ಅದಕ್ಕೆ ಒಪ್ಪಿಗೆಯನ್ನು ನೀಡಿ, ಸದನ ಅದನ್ನು ಸಂಪೂರ್ಣ ಒಮ್ಮತದಿಂದ ಒಪ್ಪಿಗೆ ನೀಡಿ ಸ್ವೀಕಾರ ಮಾಡುವುದಾದರೆ, ಒಪ್ಪಿಗೆ ಕೊಡುವುದಾದರೆ ಜಯಲಲಿತಾ ರವರು ಮುಂದೆ ಅದನ್ನು ಯಾವ ರೀತಿ ಉಪಯೋಗ ಮಾಡಿಕೊಳ್ಳಬಹುದು? ಆಗಸ್ಟ್ 6 ರಂದು ಸುಪ್ರೀಂ ಕೋರ್ಟ್ ಮುಂದೆ ಏನು SLP ಪ್ರಾರಂಭವಾಗುತ್ತದೆ, ಅದು ಯಾವ ರೀತಿ ಮಾರಕವಾಗಬಹುದೆಂಬ ತೀರ್ಮಾನವನ್ನು ಸರ್ಕಾರ ಮಾಡಬೇಕು. ಅದರ ಜೊತೆಯಲ್ಲಿ ತಮಿಳುನಾಡಿನ ಜಯಲಲಿತಾ ಸರ್ಕಾರ ಎಷ್ಟು speed ಆಗಿದ್ದಾರೆಂದರೆ,

"Locked in a row with karnataka over sharing of cauvery water, Tamil Nadu chief Minister Jayalalithaa today requested the Centre to immediately appoint a new chairman of the Cauvery water Disputes Tribunal.In a letter to the Prime Minister Dr.Manmohan Singh, the Chief Minister said, the resignation of Justice N.P.Singh as Chairman of the Cauvery Water Disputes Tribunal has caused deep concern and anxiety in the minds of the people of Tamil Nadu."

ಅವರು ಪ್ರತಿಯೊಂದು ಕ್ಷಣವನ್ನೂ ಯಾವ ರೀತಿ ಅವರ ರಾಜ್ಯಕ್ಕೆ ನೀರಿನ ಸದ್ಬಳಕೆ ಮಾಡಿಕೊಳ್ಳುವುದಕ್ಕೆ ಬಹಳ ವೇಗದಲ್ಲಿದ್ದಾರೆ, ಅದರ ಹಿನ್ನೆಲೆಯಲ್ಲಿ ಪುನಃ ಮಾರ್ಚ್ 8 ರಂದು ಸನ್ಮಾನ್ಯ ದೇವೇಗೌಡರು ಪ್ರಧಾನ ಮಂತ್ರಿಗಳಿಗೆ ಮತ್ತೊಂದು ಪತ್ರ ಬರೆಯುತ್ತಾರೆ. ಜಯಲಲಿತಾ ರವರು ಪತ್ರ ಬರೆದ ನೇಲೆ ಅದರ ಮೇಲೆ ಮತ್ತೆ ಪ್ರಧಾನ ಮಂತ್ರಿಗಳಿಗೆ ದೇವೇಗೌಡರು ಮನವಿ ಮಾಡಿದ್ದಾರೆ. ಇವತ್ತು ಯಾವ Chairman resign ಮಾಡಿದ್ದಾರೆ, ಈಗಾಗಲೇ ನಾವು ಹಲವಾರು ವಿಷಯಗಳನ್ನು ಸದನದ ಗಮನಕ್ಕೆ ಏನು ತಂದಿದ್ದೇನೆ ಅವರು Tribunal ನಲ್ಲಿ ಐತೀರ್ಪು ಕೊಡುವ ಮೊದಲೇ ಒಡೆದ ಮನೆ, ಅವರಲ್ಲಿದ್ದ dispute ಏನಿತ್ತು, ಅವರಲ್ಲಿ ಆ ತೀರ್ಪನ್ನು ಕೊಡುವುದಕ್ಕಿಂತ ಮುಂಚೆ, ಅದರ ಹಿನ್ನೆಲೆಯಲ್ಲಿ ಈಗಿರುವ ಇಬ್ಬರು ಸದಸ್ಯರುಗಳೇ ಮುಂದುವರೆದರೆ, ಈಗಾಗಲೇ ಕೊಟ್ಟಿರುವ ಐತೀರ್ಪು ಏನಿದೆ, ಅದನ್ನು ಮತ್ತೆ ನಾವು ಅಲ್ಲಿ ಏನು clarification ಗೆ Tribunal ಮುಂದೆ ಹಾಕಿಕೊಂಡಿದ್ದೇವೆ, ಮುಂದೆ ಯಾವ ರೀತಿ ನ್ಯಾಯ ದೊರಕಬಹುದೆಂದು ನಾವು ನಿರೀಕ್ಷೆ ಮಾಡಬಹುದು, ಆ ಇಬ್ಬರು ಸದಸ್ಯರುಗಳು ಮುಂದುವರೆದರೆ. ಅದಕ್ಕಾಗಿ ಸನ್ಮಾನ್ಯ ದೇವೇಗೌಡರು ಪ್ರಧಾನ ಮಂತ್ರಿಗಳಿಗೆ re-constitute ಮಾಡುವಾಗ only Chairman appointment ಮಾಡಬೇಡಿ, ಹೊಸ Tribunal ಅನ್ನು- ರಚನೆ ಮಾಡಿ ಎಂದು ಮನವಿ ಮಾಡಿದ್ದಾರೆಂಬುದನ್ನು ನಾನು ಸರ್ಕಾರದ ಗಮನಕ್ಕೆ ತರಲಿಚ್ಛಿಸುತ್ತೇನೆ. ಏನೋ ರಾಜ್ಯದ ಜನತೆಯ ಪುಣ್ಯ ಸ್ವಲ್ಪ ಎಲ್ಲಿಯೋ ಒಂದು ಸಣ್ಣ ಎಳೆ, ಒಂದು ಅವಕಾಶ ಇದೆ. ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡುತ್ತೇನೆ. ದಯವಿಟ್ಟು ನಿಮ್ಮದೇ ಸರ್ಕಾರ ಕೇಂದ್ರದಲ್ಲಿದೆ. Tribunal re-constitute ಮಾಡುವುದಾದರೆ, only Chairman ಒಬ್ಬರನ್ನು appoint ಮಾಡುವುದಕ್ಕಿಂತ ಹೆಚ್ಚಾಗಿ ಮೂರು ಜನ ಸದಸ್ಯರನ್ನು ಹೊಸದಾಗಿ ಮಾಡುವುದು ಸೂಕ್ತ ಎಂಬುದು ನನ್ನ ಅಭಿಪ್ರಾಯ. ಸರ್ಕಾರ ಇದರ ಬಗ್ಗೆ ಗಮನ ಕೊಡುವುದು ಸೂಕ್ತ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಸಭಾ ನಾಯಕರ ಗಮನಕ್ಕೆ ತಮ್ಮ ಮುಖಾಂತರ ತರಲಿಚ್ಛಿಸುತ್ತೇನೆ. ಇವತ್ತು ಪಾರ್ಲಿಮೆಂಟ್‌ನಲ್ಲಿ ನಮ್ಮ ಸದಸ್ಯರು ಹೋರಾಟ ನಡೆಸಲು ಆಗುವುದಿಲ್ಲ. ಅಲ್ಲಿ ಹೋರಾಟ ಮಾಡುವುದು ಕಷ್ಟವೆಂಬುದನ್ನು ತಿಳಿದಿದ್ದೇನೆ. ಅಲ್ಲಿ ತಮಿಳುನಾಡಿನ 40 ಲೋಕಸಭಾ ಸದಸ್ಯರಿದ್ದಾರೆ. ಆದರೆ, ಲೋಕಸಭೆಯಲ್ಲಿ ನಮ್ಮ ಪರಿಸ್ಥಿತಿ ಏನಾಗಿದೆಯೆಂದರೆ, ಕಾಂಗ್ರೆಸ್ ಪಕ್ಷದ 6

ಲೋಕಸಭಾ ಸದಸ್ಯರಿದ್ದರೆ, ನಾನು ಮತ್ತು ಚಲುವರಾಯಸ್ವಾಮಿ ಇಬ್ಬರೂ ರಾಜೀನಾಮೆ ಕೊಟ್ಟು ಬಂದಿದ್ದೇವೆ. ಉಳಿದಂತೆ, ಸನ್ಮಾನ್ಯ ಶ್ರೀ ದೇವೇಗೌಡರೂ ಸೇರಿದರೆ 7 ಸದಸ್ಯರುಗಳು ಮಾತ್ರ ಇದ್ದೇವೆ. 2007ರಲ್ಲಿ ಈ ತೀರ್ಪು ಬಂದಾಗ ಅದನ್ನು ಪಾರ್ಲಿಮೆಂಟ್‌ನಲ್ಲಿ ಪ್ರಸ್ತಾಪಿಸಲು ಹೋದಾಗ ಅಲ್ಲಿ ನಮಗೆ ಧ್ವನಿ ಎತ್ತುವುದಕ್ಕೆ ಅವಕಾಶ ಕೊಡಲಿಲ್ಲ. ಅಷ್ಟು ದೊಡ್ಡ ಮಟ್ಟದಲ್ಲಿ ತಮಿಳುನಾಡಿನ 40 ಲೋಕಸಭಾ ಸದಸ್ಯರುಗಳು ಎದ್ದು ನಿಂತು ಗಲಾಟೆ ಮಾಡಿದರು. ಸಮ್ಮಿಶ್ರ ಸರ್ಕಾರಗಳ ಯುಗ ದೆಹಲಿಯಲ್ಲಿ ಪ್ರಾರಂಭವಾಗಿದ್ದು. ಅದನ್ನು ಸದ್ಬಳಕೆ ಮಾಡಿಕೊಳ್ಳುತ್ತಿದ್ದಾರೋ, ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೋ ಗೊತ್ತಿಲ್ಲ. ಅದನ್ನು ಜನರು ಈಗ ತೀರ್ಮಾನಿಸಬೇಕು. ಮೊನ್ನೆ ಹಲವಾರು ರೀತಿಯ disturbance ಇದ್ದರೂ ಸನ್ಮಾನ್ಯ ಶ್ರೀ ದೇವೇಗೌಡರು ಪಾರ್ಲಿಮೆಂಟ್‌ನಲ್ಲಿ ಮಾತನಾಡಿದ್ದಾರೆ. ಕೊನೆಗೆ ಅವರು ಯಾವ ಮಟ್ಟಕ್ಕೆ ಹೇಳುತ್ತಾರೆಂದರೆ, ನಾವು ಒಂದು ಕಪ್ ನೀರು ಕುಡಿಯುವುದಕ್ಕೂ ಇವತ್ತು ಭಿಕ್ಷೆ ಬೇಡಬೇಕಾದ ಪರಿಸ್ಥಿತಿಗೆ ನಮ್ಮನ್ನು ದೂಡುತ್ತಿದ್ದೀರಿ. Hon'ble Chief Minister of Tamil Nadu Jayalalithaa Ji has written to the Prime Minister to constitute the tribunal and to appoint the Chairman. As a result, can we get justice which has already been denied by the remaining two members That, the Prime Minister as a statesman and as a leader of this nation to tell us. I would like to ask this with two judges who are there nowhere party to the decision, Can we expect justice from them even for a cup of drinking water. ಈ ರೀತಿ ಅವರು ಪಾರ್ಲಿಮೆಂಟ್‌ನಲ್ಲಿ ಕೇಳಿದಾಗ ತಮಿಳುನಾಡಿನ ಲೋಕಸಭಾ ಸದಸ್ಯರು ಪ್ರತಿಭಟಿಸಿದ್ದಾರೆ. ನಂತರ, ಮೇ, 18ರಂದು ಮತ್ತೊಮ್ಮೆ ತಮಿಳುನಾಡಿನ ಮುಖ್ಯಮಂತ್ರಿಯವರು to set up Cauvery Board ಎಂದು ಪತ್ರ ಬರೆಯುತ್ತಾರೆ. Tamil Nadu Chief Minister J.Jayalalithaa Friday urged the centre to immediately constitute Cauvery Management Board and Vauvery Water Regulation Committee to end the trials and tribualtions of Cauvery delta farmers in Tamil Nadu. Many lakhs of farmers of Tamil Nadu cannot be made to wait any longer for justice which has long been denied to them, as they face, season aften season acute agrarian distress forced

upon them by neighbouring state.” ಇವತ್ತು ಕಾವೇರಿ ಬೋರ್ಡ್ ರಚಿಸಲು ಏನು ಹೊರಟಿದ್ದಾರೆ. ನಮ್ಮ ರಾಜ್ಯ ಕೊನೆಯ ಹಂತದ ಹೋರಾಟಕ್ಕೆ ಬಂದಿದೆ. ಸನ್ಮಾನ್ಯ ಮುಖ್ಯಮಂತ್ರಿಗಳು ಇಂದು ಬೆಳಿಗ್ಗೆ ಸಭೆ ನಡೆಸಿದ್ದಾರೆ. ಇಲ್ಲಿ ಉದ್ಭವಿಸಿರುವ ಪ್ರಶ್ನೆಯೇನೆಂದರೆ, ಕೇಂದ್ರದ ಜಲ ಸಂಪನ್ಮೂಲ ಸಚಿವರಾಗಿರುವ ಶ್ರೀ ಹರೀಶ್ ರಾವತ್‌ರವರು ಮೇ, 20ರಂದು ಪತ್ರವೊಂದನ್ನು ಬರೆಯುತ್ತಾರೆ. ಆ ಪತ್ರದಲ್ಲಿ ಏನು ಹೇಳುತ್ತಾರೆಂದರೆ, ‘Meanwhile, on 10.05.2013 Hon’ble Supreme Court has ordered purely as a protem measure to constitute a Supervisory Committee consisting of Secretary, Union Ministry of Water Resources as Chairman amd Chief Secretary of concerned States as members, Ministry is taking action accordingly.’ ಇದು ಸನ್ಮಾನ್ಯ ಶ್ರೀ ದೇವೇಗೌಡರಿಗೆ ಬರೆದಿರುವ ಪತ್ರವಾಗಿದೆ. ಗೈಡ್‌ಲೈನ್ಸ್ ಮಾಡಿ ಎಂದು ಸುಪ್ರೀಂ ಕೋರ್ಟ್ ಏನೂ ಹೇಳಿರಲಿಲ್ಲ. ಆದರೆ, ಇವತ್ತು ತರಾತುರಿಯಲ್ಲಿ ಕೇಂದ್ರದ ಜಲ ಸಂಪನ್ಮೂಲ ಮಂತ್ರಾಲಯದ ಕಾರ್ಯದರ್ಶಿಯವರು ಸಭೆ ನಡೆಸಲು ಉದ್ದೇಶಿಸಿ, ಮೇ, 29ರಂದು ಎಲ್ಲಾ ರಾಜ್ಯಗಳಿಗೂ ಪತ್ರ ಬರೆದು ಆಹ್ವಾನ ನೀಡಿ, ಜೂನ್ 1 ರಂದು ಜರುಗಿದ ಸಭೆಯಲ್ಲಿ ಈ ಗೈಡ್‌ಲೈನ್ಸ್ ತೆಗೆದುಕೊಂಡಿದ್ದಾರೆ. ಆ ಗೈಡ್‌ಲೈನ್ಸ್ ಅನ್ನು ಜಾರಿಗೊಳಿಸಿದಲ್ಲಿ, ಮುಂದೆ ಯಾವ ರೀತಿಯ ಪರಿಣಾಮಗಳು ರಾಜ್ಯದ ಮೇಲೆ ಬೀರಬಹುದು ಎಂಬುದರ ಹಿನ್ನೆಲೆಯಲ್ಲಿ ಇಂದು ಬೆಳಿಗ್ಗೆ ಸಭಾ ನಾಯಕರು ಸಭೆಯೊಂದನ್ನು ಕರೆದಿದ್ದರು. ವಿರೋಧ ಪಕ್ಷವೂ ಒಳಗೊಂಡಂತೆ ಎಲ್ಲಾ ಪಕ್ಷಗಳ ಮುಖಂಡರುಗಳ ಸಭೆ ಕರೆದಿದ್ದರು. ಈ ದಿಸೆಯಲ್ಲಿ ಸಭಾನಾಯಕರಿಗೆ, ರಾಜ್ಯ ಸರ್ಕಾರಕ್ಕೆ ನಾವು ಸಂಪೂರ್ಣ ಸಹಕಾರ ನೀಡಲು ತಯಾರಾಗಿದ್ದೇವೆ. ಆದರೆ, ಇಲ್ಲಿ ಉದ್ಭವಿಸಿರುವ ಪ್ರಶ್ನೆಯೇನೆಂದರೆ, ಗೈಡ್‌ಲೈನ್ಸ್‌ನಲ್ಲಿರುವ ಒಂದು ಭಾಗವನ್ನು ಇಲ್ಲಿ ಓದಬಯಸುತ್ತೇನೆ. ‘The Board or any member or any representative there of shall have power to enter upon any land or property upon which any hydraulic structure or any work of causing or measuring device has been or is being constructed, operated or maintained by the agency in the Cauvery Basin for the purpose of implementing the decision of the tribunal.’ ಈ ಗೈಡ್‌ಲೈನ್ಸ್ ಅನ್ನು ತಕ್ಷಣ ಜಾರಿಗೆ ತರಬೇಕೆಂದು ಕೇಂದ್ರದ

ಜಲ ಸಂಪನ್ಮೂಲ ಮಂತ್ರಾಲಯದ ಕಾರ್ಯದರ್ಶಿಯವರಿಗೆ ಸೂಚನೆ ಕೊಟ್ಟವರು ಯಾರು? ಗೈಡ್‌ಲೈನ್ಸ್ ಮಾಡಿಕೊಳ್ಳಬೇಕೆಂದು ಸುಪ್ರೀಂ ಕೋರ್ಟ್ ಸೂಚನೆ ಕೊಟ್ಟಿಲ್ಲ. ಈ ರೀತಿಯ ತೀರ್ಮಾನಗಳನ್ನು ಕೈಗೊಳ್ಳುವುದರಿಂದ ಅಂತಿಮವಾದ ಕುಣಿಕೆ ಇವತ್ತು ರಾಜ್ಯದ $2^1/4$ ಕೋಟಿಯಷ್ಟು ಕಾವೇರಿ ಜಲಾನಯನ ಪ್ರದೇಶದ ರೈತರು ಮತ್ತು ನಾಗರಿಕರು ಏನಿದ್ದಾರೆ, ಮತ್ತು ಬೆಂಗಳೂರು ನಗರದ ನಾಗರೀಕರು ಏನಿದ್ದಾರೆ, ಇವರುಗಳಿಗೆ ಮುಂದಿನ ದಿನಗಳು ಏನಾಗಬಹುದು? ಅಂತಿಮ ತೀರ್ಮಾನ ಕೈಗೊಳ್ಳುವ ಪರಿಸ್ಥಿತಿಗೆ ನಮ್ಮನ್ನು ಏನು ದೂಡಿದ್ದಾರೆ, ಆ ನಿಟ್ಟಿನಲ್ಲಿ ಇವತ್ತು ತಾವು ಕೊಟ್ಟ ರೂಲಿಂಗ್ ಬಗ್ಗೆ ನಾನು ಚರ್ಚಿಸಲು ಹೋಗುವುದಿಲ್ಲ. ಆದರೆ, ಈ ವಿಷಯದಲ್ಲಿ ಇದಕ್ಕೆ ಸರ್ಕಾರ ಮತ್ತು ಇಡೀ ಸದನ ಸರ್ವಾನುಮತದಿಂದ ಒಪ್ಪಿಗೆ ಕೊಟ್ಟರೆ, '*ಕಾವೇರಿ ಐತೀರ್ಪು*' ಎನ್ನುವ ಪದವೇನಿದೆ, ನಿಮ್ಮ ಎಸ್.ಎಲ್.ಪಿ. ಇದೆಲ್ಲವನ್ನೂ ಗಮನಿಸಲಿಲ್ಲವೇ? ಇವತ್ತು ಅಲಿಯೂ ನಮಗೆ ಯಾವುದೇ ರೀತಿ ಹೋರಾಟ ನಡೆಸಲು ಅವಕಾಶವಾಗುವುದಿಲ್ಲ. ಬಹುಶಃ ತಮಿಳುನಾಡಿನ ಮುಖ್ಯಮಂತ್ರಿಗಳು ಅದನ್ನೇ ತೆಗೆದುಕೊಂಡು ಹೋಗುತ್ತಾರೆ.

ಇವತ್ತು"ಕಾವೇರಿ ಐತೀರ್ಪಿನ ಅನುಸಾರವಾಗಿ" ಎಂಬುದನ್ನು ಸುಪ್ರೀಂ ಕೋರ್ಟ್ ಮುಂದೆ ಮಂಡಿಸಿದರೆ ನಾಳೆ ಏನಾಗುತ್ತದೆ? ಏನಾಗಬಹುದು? ಎಲ್ಲಾ ಎಸ್.ಎಲ್.ಪಿ.ಗಳಿಗೆ ಸಂಬಂಧಿಸಿದಂತೆ ಕೊನೆಗೆ ಯಾವ ತೀರ್ಮಾನ ಕೊಡಬಹುದು ಎಂಬುದನ್ನು ನಾನು ಈ ಸದನದ ಊಹೆಗೆ ಬಿಡುತ್ತೇನೆ. ಯೋಚನೆ ಮಾಡಿ ಜಾಗೃತರಾಗಿ. ಈ ವಿಷಯದಲ್ಲಿ ಯಾವುದೇ ಪ್ರತಿಷ್ಠೆ ಬೇಡ. ರಾಜ್ಯದ ಕಾವೇರಿ ಜಲಾನಯನ ಪ್ರದೇಶದ $2^1/4$ ಕೋಟಿ ಜನತೆಯನ್ನು ರಕ್ಷಿಸಲು ಇವತ್ತು ಯಾರು ತೀರ್ಮಾನಿಸಬೇಕಾಗಿದೆ? ಸದನ ಇವತ್ತು ಒಂದು ತೀರ್ಮಾನಕ್ಕೆ ಬರಬೇಕು. ತಮಿಳುನಾಡಿನ ಮುಖ್ಯಮಂತ್ರಿ ಜಯಲಲಿತಾರವರು ತಮ್ಮ ಹುಟ್ಟುಹಬ್ಬದ ಪ್ರಯುಕ್ತ ಬಹುಶಃ ಮಾರ್ಚ್ 8ನೇ ತಾರೀಖಿನಂದು ಪತ್ರಿಕೆಯಲ್ಲಿ ಜಾಹೀರಾತೊಂದನ್ನು ನೀಡಿದ್ದಾರೆ. 'Personally for me, this is a tremendous victory after spending more than 30 years in Politics,This is the first time, that I have experienced a sense of fulfilment and a sense of achievement.' ಸರ್ಕಾರದ ಗೆಜೆಟ್ ನೋಟಿಫಿಕೇಶನ್ ಕೊಟ್ಟು ಸುಮಾರು 4 ಪುಟಗಳ ಜಾಹೀರಾತು ನೀಡಿದ್ದಾರೆ. ಜಾಹೀರಾತಿನಲ್ಲಿ ತಮಿಳುನಾಡು ಜನತೆಗೆ ಏನೇನು ಕೊಡುಗೆಗಳನ್ನು ನೀಡಿದ್ದೇನೆ ಎಂಬುದನ್ನು ಹೇಳುತ್ತಾ ಹೋಗಿದ್ದಾರೆ. ಕೇಂದ್ರದಲ್ಲಿ ಈ ಹಿಂದೆ ಜಲ ಸಂಪನ್ಮೂಲ ಮಂತ್ರಾಲಯದಲ್ಲಿ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸಿದ್ದ

ಶ್ರೀ ರಾಮಸ್ವಾಮಿ ಆರ್.ಐಯರ್‌ರವರು ಕಾವೇರಿ ಐತೀರ್ಪಿನ ಬಳಿಕ ಲೇಖನವೊಂದನ್ನು ಬರೆದಿದ್ದಾರೆ. 'There should be provision for an appeal to the highest Court against the Tribunal's award. But, this should be after the reference back to the tribunal and the receipt of its supplementary or clarificatory order.' ಕೇಂದ್ರದಲ್ಲಿನ ಸಮ್ಮಿಶ್ರ ಸರ್ಕಾರಗಳ ಹಿನ್ನೆಲೆಯಲ್ಲಿ ಇಲ್ಲಿ ಮತ್ತೆ ತಮಿಳುನಾಡು ಹಂತ ಹಂತವಾಗಿ ಕಾವೇರಿ ನದಿ ನೀರಿನ ವಿಷಯದಲ್ಲಿ ನಮ್ಮ ಮೇಲೆ ಸಂಪೂರ್ಣ ಹತೋಟಿ ಸಾಧಿಸುತ್ತಾ ಬಂದಿದೆ. ಕಾವೇರಿ ಐತೀರ್ಪು ಬಂದಾಗ ಆಗ ಮುಖ್ಯಮಂತ್ರಿಯಾಗಿದ್ದ ಕರುಣಾನಿಧಿಯವರನ್ನು ಜಯಲಲಿತಾ ಅವರು "ಏನು ನಿದ್ದೆ ಮಾಡುತ್ತಾ ಕುಳಿತಿದ್ದೀರಾ? ಕಾಯ್ದೆಗೆ ಕೆಲವು ಬದಲಾವಣೆಗಳನ್ನು ತರದೇ ಇದ್ದರೆ ಜನರಿಗೆ ದ್ರೋಹವೆಸಗುತ್ತಿದ್ದೀರಿ ಎಂದು ಭಾವಿಸಬೇಕಾಗುತ್ತದೆ" ಎಂದು ಅವರನ್ನು ಛೇಡಿಸುತ್ತಾರೆ! ಇದರ ಆಧಾರದ ಮೇಲೆ ಕರುಣಾನಿಧಿಯವರು 2002ರಲ್ಲಿ ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರಿ

'In each of this case, what went before the Supreme Court was not the water sharing issue, which had been adjudicated or was under adjudication by a tribunal, but some other related legal or constitutional issues. For the first time, in the history of the Inter-State Water Disputes Act, 1956 amended in 2002 Inter-State Water Disputes Act, the SLPs in the Cauvery case have brought the tribunal-adjudicated water sharing issue itself before the Supreme Court.' ಮತ್ತೆ ಅಲ್ಲಿ ಪ್ರಭಾವ ಬೀರಿ 2002ರಲ್ಲಿ ಇನ್ನೊಂದು ಕಾಯ್ದೆ ರಚಿಸಿ ಜಾರಿಗೆ ತಂದರು. ಅದಕ್ಕೆ 2002ರಲ್ಲಿ ಕೇಂದ್ರದಲ್ಲಿದ್ದ ಸಮ್ಮಿಶ್ರ ಸರ್ಕಾರವನ್ನು ದುರ್ಬಳಕೆ ಮಾಡಿಕೊಂಡಿದ್ದಾರೆ. ಮಾನ್ಯ ರಾಮಸ್ವಾಮಿ ಐಯರ್‌ರವರು ಏನು ಹೇಳುತ್ತಾರೆ ಎಂದರೆ,

"In conclusion we must take note of an alternative suggestion made by the National Commission to review the working of the Constitution. This was to the effect that the ISWD Act should be repealed and Inter-State river water disputes should be brought within the original jurisdiction of the Supreme Court. As is the case in the United States without entering into an elaborate

discussion on that subject this writer would merrily say that there is no need to repeal the ISWD Act and bring such cases within the original jurisdiction of the Supreme Court and that the one serious weakness in the present dispensation namely, that some of the parties to a dispute may be left with a feeling of grievance or in justice can be remedied by providing for an appeal to the Supreme Court against the award of a tribunal. After the completion of the reference back to the tribunal and the receipt of its supplementary or clarificatory order."

ಅವರು ತಮಿಳುನಾಡಿನ ತಂಜಾವೂರಿನವರು. ಅವರಿಗೆ ಕರ್ನಾಟಕಕ್ಕೆ ಅನ್ಯಾಯವಾಗಿದೆ ಎಂದು ಗೊತ್ತಿದೆ. ಅವರು ಮತ್ತೊಂದು ಹೇಳುತ್ತಾರೆ...

ಅಧ್ಯಕ್ಷರು :- ಅವರು ಮುಂಚೆ ಏನಾಗಿದ್ದರು?

ಶ್ರೀ ಹೆಚ್.ಡಿ.ಕುಮಾರಸ್ವಾಮಿ :- ಅವರು Central Government ನ Water Resources Department Secretary ಆಗಿದ್ದರು.

ಅಧ್ಯಕ್ಷರು :- ಅವರು ಈ article ಬರೆದಿದ್ದು ಯಾವಾಗ?

ಶ್ರೀ ಹೆಚ್.ಡಿ.ಕುಮಾರಸ್ವಾಮಿ :- ಅವರು 2007ರಲ್ಲಿ ಇದನ್ನು ಬರೆದಿದ್ದಾರೆ.

ಅಧ್ಯಕ್ಷರು :- ಈಗ ಅವರು retire ಆಗಿದ್ದಾರೆಯೇ?

ಶ್ರೀ ಹೆಚ್.ಡಿ.ಕುಮಾರಸ್ವಾಮಿ :- ಹೌದು, ಈಗ ಅವರು retire ಆಗಿದ್ದಾರೆ. ಕಾವೇರಿ ಐತೀರ್ಪು ಫೆಬ್ರವರಿಯಲ್ಲಿ ಬಂತು. ರಾಜ್ಯ ಸರ್ಕಾರದವರು ಏಪ್ರಿಲ್‌ನಲ್ಲಿ SLP ಯನ್ನು ಸಲ್ಲಿಸಿದರು. ನಾವು ಆ SLP ಹಾಕಿದ ಮೇಲೆ ಅವರು ಬರೆದಿರತಕ್ಕಂಥ article ಇದಾಗಿದೆ. ಇವತ್ತು ಅವರು ಇದರಲ್ಲಿ directions ಕೊಟ್ಟಿದ್ದಾರೆ. ನಂತರ ಅವರು ಇನ್ನೊಂದು article ಬರೆಯುತ್ತಾರೆ. ಅವರು 2013 ಮಾರ್ಚ್ 30ರಲ್ಲಿ ಇನ್ನೊಂದು article ಬರೆದಿದ್ದಾರೆ. ಅದರಲ್ಲಿ ಹೀಗೆ ಹೇಳಿದ್ದಾರೆ.

"The SLPs are still to be heard and we cannot predict the outcome. As per the clarificatory petitions to the tribunal, it is clear that there is no bar to their consideration and the issue of a supplementary order.

Hence, again we cannot guess what the tribunal's clarificatory or supplementary order will say."

ನಂತರ ಅವರು final ಆಗಿ ಒಂದು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ.

"Let me now put forward my own unorthodox, perhaps quixotic, proposal. karnataka has a strong feeling of injustice about the tribunal allocations.But if one examines it closely its quantitative significance seems relatively minor. karnataka feels that the Bangalore's requirements have not been adequately provided for. that some irrigated areas have not been taken into account and that the allocations to Tamil Nadu contain an unwarranted cushion. Tamil Nadu on the other hand, has no serious complaint about the allocation. Though it has also filed petitions mainly because karnataka has tiled, so long as karnataka's sense of injustice remains, it will not constructively cooperate in the implementation of the award. It is, therefore necessary to maderate that grievance to some extent, an adjustment of 20 or 30 TMC in the allocations will take care of the points raised by karnataka and will remove the grounds for any feeling of injustice."

ತಮಿಳುನಾಡಿನ ತಂಜಾವೂರಿನ ಸೆಕ್ರೆಟರಿ ಇಲ್ಲಿ ಆ ರೀತಿ ಬರೆದಿದ್ದಾರೆ. ಇಲ್ಲಿ ಈಗಾಗಲೇ ಮತ್ತೆ ಕೊನೆಯ ಹಂತಕ್ಕೆ ನಾವು ಬಂದಿದ್ದೇವೆ. ಇವತ್ತು ರಾಜ್ಯ ಸರ್ಕಾರಕ್ಕೆ ನಾನು ಹೇಳತಕ್ಕದ್ದು ಏನೆಂದರೆ, ಸುಪ್ರೀಂ ಕೋರ್ಟಿನಲ್ಲಿರುವ SLP ಏನಾದರೂ ಉಳಿಯಬೇಕೆಂದರೆ, ಇವತ್ತು ಎಡವಿರತಕ್ಕಂಥದ್ದು ಏನಿದೆ, ಅದನ್ನು ಸರಿಪಡಿಸಿಕೊಳ್ಳುವುದಕ್ಕೆ ಕ್ರಮ ತೆಗೆದುಕೊಳ್ಳಬೇಕು. ಮಾನ್ಯ ಅಧ್ಯಕ್ಷರೆ, ತಾವು ರೂಲಿಂಗ್ ಕೊಟ್ಟಿದ್ದೀರಿ. ಯಾವ ರೀತಿಯಾಗಿ ಅದನ್ನು ಸರಿಪಡಿಸಿಕೊಳ್ಳಬೇಕು ಎನ್ನುವಂತಹ ತೀರ್ಮಾನವನ್ನು ಅಡ್ವೊಕೇಟ್ ಜನರಲ್‌ರವರನ್ನು ಕರೆಸಿ ಚರ್ಚೆ ಮಾಡಿ. ಇಲ್ಲವೇ ಕೇಂದ್ರದಲ್ಲಿ ಇರತಕ್ಕಂಥ ವಕೀಲರೊಂದಿಗೆ ಚರ್ಚಿಸಿ ತೀರ್ಮಾನಿಸಿ. ನನಗೆ ಗೊತ್ತಿದೆ, ಈಗಾಗಲೇ ಬಹುಶಃ ದೆಹಲಿಯಿಂದ ನಮ್ಮ counsel ಮೋಹನ್ ಕಾತರಕಿ ಏನಿದ್ದಾರೆ, ಮೊನ್ನೆ ಅವರನ್ನೂ ಕೂಡ

ಕರೆಸಿಕೊಂಡು ನೀವು ಚರ್ಚೆ ಮಾಡಿಕೊಂಡಿರಬಹುದು. ನನಗೂ ವಿಷಯದ ಬಗ್ಗೆ ಕೆಲವೊಂದು ಮಾಹಿತಿಗಳಿವೆ. ಆದರೆ ಇಲ್ಲಿಯವರೆಗೆ ಎಡವಿರತಕ್ಕದ್ದು ಏನಿದೆ, ಅದನ್ನು ಸರಿಪಡಿಸಿಕೊಳ್ಳಬೇಕು. ಮಾನ್ಯ ಅಧ್ಯಕ್ಷರು ರೂಲಿಂಗ್ ಕೊಟ್ಟಿರುವುದನ್ನು ನಾನು question ಮಾಡಲಿಕ್ಕಾಗುವುದಿಲ್ಲ. ಅದು ನಮಗೆ ಶೋಭೆ ತರುವುದಿಲ್ಲ. ಆದ್ದರಿಂದ, ಸರ್ಕಾರ ಈ ವಿಷಯದಲ್ಲಿ, ನಾನು ಆಗಲೇ ಹೇಳಿದೆ, 2004ರಲ್ಲಿ ಒಂದು ಬಾರಿ ಎಡವಿದ್ದಾರೆ. ನಾನು ಯಾರ ಬಗ್ಗೆಯೂ ಟೀಕೆ ಮಾಡುವುದಿಲ್ಲ. ಪಾಪ! ಮಾನ್ಯ ಶ್ರೀನಿವಾಸ ಪ್ರಸಾದ್‌ರವರು ಆಗಲೇ ಏನೋ ಹೇಳಿದರು, ಅವರು ಈಗ ಸದನದಲ್ಲಿ ಇಲ್ಲ. ಮಾನ್ಯ ದೇವೇಗೌಡರು ಪ್ರಧಾನ ಮಂತ್ರಿಗಳಾಗಿದ್ದಾಗ National Water policyಯೊಂದನ್ನು ತರಬಹುದಾಗಿತ್ತು ಎಂದು ಹೇಳಿದರು. ರಾಜೀವ್ ಗಾಂಧಿಯವರು ಬಹುಶಃ 1986–87ನೇ ಇಸವಿಯಲ್ಲಿ ಇಡೀ ದೇಶದ ಎಲ್ಲಾ ರಾಜ್ಯದ ನೀರಾವರಿ ಸಚಿವರುಗಳ ಕಮಿಟಿಯೊಂದನ್ನು ರಚನೆ ಮಾಡಿದ್ದರು. ಒಂದು ವಿಷಯಕ್ಕೆ ಸಂಬಂಧಿಸಿದ ಕಮಿಟಿಯೊಂದಕ್ಕೆ ಅಂದು ನೀರಾವರಿ ಸಚಿವರಾಗಿದ್ದ ಸನ್ಮಾನ್ಯ ದೇವೇಗೌಡರನ್ನೇ ಅಧ್ಯಕ್ಷರನ್ನಾಗಿ ಮಾಡಿದ್ದರು. ಅಂದು ಹಲವಾರು ಸಭೆಗಳಾಯಿತು. National Water policy ಯನ್ನು ಜಾರಿಗೆ ತರುವುದಕ್ಕೆ ಅಂದು ಯಾವುದೇ ರಾಜ್ಯ ಸರ್ಕಾರಗಳು ಒಪ್ಪಿಗೆಯನ್ನು ಕೊಡಲಿಲ್ಲ. ಅವತ್ತು ಅಂತಿಮವಾಗಿ ಒಂದು ವಿಷಯದಲ್ಲಿ ಕೇಂದ್ರ ಸರ್ಕಾರದವರು ತೀರ್ಮಾನವನ್ನು ಮಾಡಿದರು. ಅವತ್ತು ಕುಡಿಯುವ ನೀರಿಗೆ ಆದ್ಯತೆ ಕೊಡುವುದಕ್ಕೆ ಒಂದು ಪಾಲಿಸಿಯನ್ನು ಇಂದಿರಾಗಾಂಧಿಯವರು ತಂದರು. ಅದರ ಹಿನ್ನೆಲೆಯಲ್ಲಿಯೇ ತಮಿಳುನಾಡಿನ ಚೆನ್ನೈಗೆ ಅವತ್ತು ನಾವು ನಮ್ಮ ಭಾಗದ ನೀರಿನ ಹಂಚಿಕೆ ಏನಿತ್ತೋ, ಅದರಲ್ಲಿ 5 ಟಿಎಂಸಿ ಅವರಿಗೆ ಕೊಟ್ಟಿದ್ದೇವೆ. ಆ ಹಿನ್ನೆಲೆಯಲ್ಲಿ ಆ ತೀರ್ಮಾನವಾಗಿದೆ. National Water policy ಯನ್ನು ಜಾರಿಗೆ ತರುವುದಕ್ಕೆ ಅವತ್ತು ಯಾವುದೇ ರಾಜ್ಯ ಸರ್ಕಾರಗಳು ಒಪ್ಪಿಗೆಯನ್ನು ಕೊಡಲಿಲ್ಲ. ಅವತ್ತು 10 ತಿಂಗಳಿನಲ್ಲಿ ಮಾನ್ಯ ದೇವೇಗೌಡರು ಪ್ರಧಾನ ಮಂತ್ರಿಗಳಾಗಿದ್ದಾಗ ಏನು ಮಾಡಿದರು ಎಂದು ಕೇಳಿದ್ದಾರೆ. ಅವತ್ತು ಸನ್ಮಾನ್ಯ ದೇವೇಗೌಡರವರು ಒಂದು ವಿಷಯವನ್ನು ಸನ್ಮಾನ್ಯ ಕರುಣಾನಿಧಿಯವರಲ್ಲಿ ಪ್ರಸ್ತಾಪ ಮಾಡಿದರು. ನಾನೂ ಆಗ ಲೋಕಸಭೆ ಸದಸ್ಯನಾಗಿದ್ದೆ. ಇವತ್ತು ಹೊಗೇನಕಲ್ ಫಾಲ್ಸ್‌ನ ಹತ್ತಿರ ಒಂದು ಡ್ಯಾಮ್ ಅನ್ನು ನಾವು ಕಟ್ಟೋಣ. ನೀವು ಯಾವ್ಯಾವ ಸಂದರ್ಭದಲ್ಲಿ ನೀರನ್ನು ಕೇಳುತ್ತೀರೋ, ಆಗ ನಾವು ನಿಮಗೆ ನೀರನ್ನು ಕೊಡುತ್ತೇವೆ. ಅಲ್ಲಿ ನಾವು ವಿದ್ಯುಚ್ಛಕ್ತಿಯನ್ನು ಉತ್ಪಾದನೆ ಮಾಡಿ, ಎರಡೂ

ರಾಜ್ಯಗಳೂ ಆ ವಿದ್ಯುಚ್ಛಕ್ತಿಯನ್ನೂ ಹಂಚಿಕೆ ಮಾಡಿಕೊಳ್ಳೋಣ ಎಂದು ಹೇಳಲಾಗಿತ್ತು. ಅದಕ್ಕಾಗಿ ಕೇಂದ್ರ ಸರ್ಕಾರದಿಂದ ನಾವು ಸಂಪೂರ್ಣ ಹಣವನ್ನು ತೊಡಗಿಸುತ್ತೇವೆಂದು ಅವತ್ತು ಹೇಳಿದ್ದರು. ಅವರು ಪ್ರಧಾನ ಮಂತ್ರಿಗಳಾಗಿದ್ದು ಕೇವಲ 10 ತಿಂಗಳು. ಅವತ್ತು ಅದಕ್ಕೆ movement ಕೊಟ್ಟಿದ್ದರು. ಆದರೆ 10 ತಿಂಗಳಿನಲ್ಲಿ ಅವರು ಆ ಸ್ಥಾನವನ್ನು ತೆರವುಗೊಳಿಸಿದ ನಂತರ ಪುನಃ ಹಲವಾರು ಬಾರಿ ಈಗಿನ ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡಿದ್ದಾಗ, ಆ ವಿಷಯವನ್ನು ಅವರ ಗಮನಕ್ಕೆ ತಂದಿದ್ದಾರೆ. ಆದರೆ ಪಕ್ಕದ ತಮಿಳುನಾಡಿನವರು ಪ್ರತಿಯೊಂದು ವಿಷಯದಲ್ಲೂ ನಮಗೆ ಹಲವಾರು ರೀತಿಯಲ್ಲಿ ಇಲ್ಲಿ ಅನ್ಯಾಯಗಳನ್ನು ಮಾಡಿಕೊಂಡು ಬಂದಿದ್ದಾರೆ. ಇವತ್ತು ರಾಜ್ಯದಲ್ಲಿ ಕಾಂಗ್ರೆಸ್ಸಿನ ಸರ್ಕಾರವೇ ಇದೆ, ಕೇಂದ್ರದಲ್ಲಿಯೂ ಕಾಂಗ್ರೆಸ್ ಸರ್ಕಾರವೇ ಇದೆ. ನಾನು ಈ ಸಭೆಯ ಪ್ರಾರಂಭಿಕ ಹಂತದಲ್ಲೇ ಹೇಳಿದೆ. ದಿವಂಗತ ದೇವರಾಜ ಅರಸ್‌ರವರು ಕೃಷ್ಣಾ ನೀರಿನ ವಿಷಯದಲ್ಲಿ ಅವತ್ತು ನಿರ್ಣಯವನ್ನು ಮಾಡಬೇಕಾದರೆ, ಆಂಧ್ರದಲ್ಲಿ ಕಾಂಗ್ರೆಸ್ ಸರ್ಕಾರವಿತ್ತು, ಕೇಂದ್ರದಲ್ಲಿ ಕಾಂಗ್ರೆಸ್ ಸರ್ಕಾರವಿತ್ತು. ಆದರೂ ಅವರು ಒಂದು ದಿಟ್ಟವಾದಂತಹ ನಿಲುವನ್ನು ತೆಗೆದುಕೊಂಡರು. ಅವತ್ತು 'ನಮ್ಮ ರಾಜ್ಯಕ್ಕೆ ನೀರಿನ ಹಂಚಿಕೆಯಲ್ಲಿ ಅನ್ಯಾಯ ಆಗಿದೆ, ಅದಕ್ಕೆ ನಾವು walk out ಮಾಡತಕ್ಕ ನಿರ್ಧಾರ ಮಾಡುತ್ತೇವೆ' ಎಂದು ಅವತ್ತಿನ ಸಭೆ ಸರ್ವಾನುಮತ ತೀರ್ಮಾನ ಮಾಡಿತ್ತು. ಅವತ್ತು ಅವರು ಯಾವ ದಿಟ್ಟ ನಿರ್ಧಾರವನ್ನು ಮಾಡಿದ್ದಾರೋ, ಅದೇ ರೀತಿ ದಿಟ್ಟ ನಿರ್ಧಾರವನ್ನು ಇವತ್ತು ತೆಗೆದುಕೊಳ್ಳಬೇಕೆಂದು ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳಲಿಕ್ಕೆ ಬಯಸುತ್ತೇನೆ. ಇವತ್ತು ಮಾನ್ಯ ಸಿದ್ದರಾಮಯ್ಯನವರು ಮುಖ್ಯಮಂತ್ರಿಗಳಾದ ಮೇಲೆ ನಮ್ಮ ಮಾಧ್ಯಮ ಸ್ನೇಹಿತರು ಹಲವಾರು ಲೇಖನಗಳನ್ನು ಬರೆದಿದ್ದಾರೆ. ದಿವಂಗತ ದೇವರಾಜ ಅರಸುರವರು ಹೋರಾಟ ಮಾಡಿರತಕ್ಕಂಥ ಛಾಯೆಯನ್ನು ನಾವು ಮಾನ್ಯ ಸಿದ್ದರಾಮಯ್ಯನವರಲ್ಲಿ ಕಾಣಬಹುದು ಎನ್ನುವಂತಹ ಹಲವಾರು ಲೇಖನಗಳನ್ನು ಮಾಧ್ಯಮ ಸ್ನೇಹಿತರುಗಳು ಬರೆದಿದ್ದಾರೆ. ನಿಜಕ್ಕೂ ಆ ಛಾಯೆಯ ನಿರೀಕ್ಷೆಯನ್ನೇನು ತಮ್ಮಲ್ಲಿ ಮಾಧ್ಯಮದ ಸ್ನೇಹಿತರು ಇಟ್ಟಿದ್ದಾರೆ, ಆ ಛಾಯೆ ಇವತ್ತು ಅನುಷ್ಠಾನಕ್ಕೆ ಬರಬೇಕಾದರೆ, ಅದು ಉಳಿದುಕೊಳ್ಳಬೇಕಾದರೆ, ಇವತ್ತು ನಾನು ಮಾನ್ಯ ಸಭಾನಾಯಕರಿಗೆ ಮನವಿ ಮಾಡುತ್ತೇನೆ, ಏನಾದರೂ ಮಾಡಿ. ಇವತ್ತು ಅಲ್ಲೂ ನಿಮ್ಮ ಸರ್ಕಾರವೇ ಇದೆ. ಬಹುಶಃ ಅವರಿಗೆ ಅಲ್ಲಿ ಕಷ್ಟವಿದೆ. ಅದು ನಮಗೆ ಅರ್ಥವಾಗುತ್ತದೆ. ಅವರಿಗೂ ಅಲ್ಲಿ ಹಲವಾರು ರೀತಿಯ ಸಮಸ್ಯೆಗಳಿವೆ. ಅವರಿಗೆ ತೀರ್ಮಾನ ಮಾಡುವುದಕ್ಕೆ ಬಹಳ ಕಷ್ಟವಿದೆ. ನಾನು ಆಗಲೇ ಹೇಳಿದೆ, ನಿಮ್ಮ ಕಾಂಗ್ರೆಸ್ಸಿನ ಲೋಕಸಭಾ ಸದಸ್ಯರು 7 ಜನ

ಮಾತ್ರವಿದ್ದಾರೆ. ನಿಮಗೆ ಬೆಂಬಲ ಕೊಡಲಿಕ್ಕೆ ಮಾನ್ಯ ದೇವೇಗೌಡರೊಬ್ಬರು ಇದ್ದಾರೆ. ಆದರೆ ಇನ್ನುಳಿದ ಬಿ.ಜೆ.ಪಿ. ಸದಸ್ಯರುಗಳ ಬಗ್ಗೆ ನನಗೆ ಗೊತ್ತಿಲ್ಲ. ನಮ್ಮ ಮಿತ್ರರಾದ ಅವರೂ ಬೆಂಬಲ ಕೊಡಬಹುದು. ಆದರೆ ಅಲ್ಲಿ ಬಿಜೆಪಿಯವರು ಬೆಂಬಲ ಕೊಡುವುದು ಈಗ ಲೆಕ್ಕಕ್ಕೆ ಬರುವುದಿಲ್ಲ. ಏಕೆಂದರೆ, ಕೇಂದ್ರ ಸರ್ಕಾರ ಉಳಿಯುಕೊಳ್ಳುವುದಕ್ಕೆ ಬಿಜೆಪಿಯವರ ಬೆಂಬಲದ ಅವಶ್ಯಕತೆ ಇಲ್ಲ. ಇವತ್ತು ಪಕ್ಕದ ತಮಿಳುನಾಡಿನ 39 ಸದಸ್ಯರ ಬೆಂಬಲ ಅದಕ್ಕೆ ಬೇಕು ಮತ್ತು ನಮ್ಮಲ್ಲಿ ಇರತಕ್ಕ 7 ಜನ ಸದಸ್ಯರ ಬೆಂಬಲ ಮಾತ್ರವೇ ಇವತ್ತು ಕೇಂದ್ರಕ್ಕೆ ಬೇಕಾಗಿದೆ. ಅವರಿಗೆ 7 ಹೆಚ್ಚಿಗೆಯೋ, ಇಲ್ಲವೋ 39 ಹೆಚ್ಚಿಗೆಯೋ? ಆ ಹಿನ್ನೆಲೆಯಲ್ಲಿ ಅವರಿಗೆ ಇರತಕ್ಕ ಸಮಸ್ಯೆಗಳ ಬಗ್ಗೆಯೂ ನಮಗೆ ಅರ್ಥವಾಗುತ್ತದೆ. ಆದರೆ ಈ ರಾಜ್ಯದ ಜನತೆ ಕಾಂಗ್ರೆಸ್ ಸರ್ಕಾರವನ್ನೇನು ಇವತ್ತು ಗುರುತಿಸಿ ಪುನಃ 8 ವರ್ಷಗಳ ನಂತರ ಅಧಿಕಾರ ಕೊಟ್ಟಿದ್ದಾರೆ, ಇವತ್ತು ಈ ರಾಜ್ಯದ ಆ ಭಾಗದ ಜನತೆಯ ರಕ್ಷಣೆಯನ್ನು ಮಾಡಬೇಕಾದಂತಹ ಜವಾಬ್ದಾರಿ ನಿಮ್ಮ ಮೇಲಿದೆ. ತಾವು 'ಸರ್ವ ಧರ್ಮಕ್ಕೂ ಮತ್ತು ರಾಜ್ಯದ ಎಲ್ಲಾ ಭಾಗಗಳಿಗೂ ರಕ್ಷಣೆ ಕೊಡುತ್ತೇವೆ' ಮುಂತಾದವುಗಳನ್ನೆಲ್ಲಾ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದೀರಿ. ಇವತ್ತು ಅದು ಅನುಷ್ಠಾನಕ್ಕೆ ಬರಬೇಕಾದರೆ, ಇವತ್ತು ಒಂದೇ ಒಂದು ಅವಕಾಶ ನಿಮಗಿದೆ. ಇವತ್ತು ಟ್ರಿಬ್ಯುನಲ್ ಅನ್ನು re-constitute ಮಾಡಲಿಕ್ಕೆ ತಕ್ಷಣ ಕ್ರಮ ತೆಗೆದುಕೊಳ್ಳಬೇಕು. ಪಾಪ! ಮಾನ್ಯ ಜಯಲಲಿತಾರವರು ಬಹಳ ತರಾತುರಿಯಲ್ಲಿ ಅದಕ್ಕೆ Chairman ಮಾಡಿ ಎಂದು ಹೇಳುತ್ತಿದ್ದಾರೆ. ಅದರ ಮೂವರು ಸದಸ್ಯರನ್ನು ಬದಲಾವಣೆ ಮಾಡುವುದಕ್ಕೆ ಏನಾದರೂ ಮಾಡಿ ತಾವು ಪ್ರಧಾನ ಮಂತ್ರಿಗಳ ಒಪ್ಪಿಗೆಯನ್ನು ಪಡೆಯುವುದರಲ್ಲಿ ಯಶಸ್ಸು ಪಡೆಯಿರಿ. ಅದರ ಜೊತೆಗೆ ಈ ಕಾವೇರಿ ಐತೀರ್ಪು ಏನಿದೆ, ನೀವು ಬಹುಶಃ ಒಂದು ಕೆಟ್ಟ ನಿರ್ಧಾರ ಅದರಲ್ಲಿ ಮಾಡಿಕೊಂಡಿದ್ದೀರಿ. ಅದನ್ನು ಯಾವ ರೀತಿ ಸರಿಪಡಿಸಿಕೊಳ್ಳಬೇಕೋ ಗೊತ್ತಿಲ್ಲ. ಆದರೆ ಅದರ ಗಾಂಭೀರ್ಯತೆ ಏನಿದೆ, ಮತ್ತೊಮ್ಮೆ ನಾನು ನನಗೆ ಕೊಟ್ಟಿರುವ ಈ ಒಂದು ಅವಕಾಶವನ್ನು ಏನು ಸದ್ಬಳಕೆ ಮಾಡಿಕೊಂಡು ಸರ್ಕಾರಕ್ಕೆ ಎಚ್ಚರಿಕೆ, ಸಲಹೆ ಕೊಡುತ್ತೇನೆ. ಇದರಲ್ಲಿ ದುಡಿಕಿದರೆ ಯಾವ ರೀತಿ ಎಸ್‌ಎಲ್‌ಪಿ 2007ರಲ್ಲಿ ರಾಜ್ಯ ಸರ್ಕಾರ ಹಾಕಿದ್ದೇವೆ, ಯಾವುದೇ ಕಾರಣಕ್ಕೆ ಎಸ್‌ಎಲ್‌ಪಿ ನಿಲ್ಲುವುದು ಕಷ್ಟವಾಗಬಹುದು. ಈ ತಪ್ಪು ತೀರ್ಮಾನವನ್ನು ಯಾವ ರೀತಿ ಸರಿ ಮಾಡಿಕೊಳ್ಳುತ್ತೀರಿ, ಬಹುಶಃ ಸಭಾನಾಯಕರು ನಮಗೆ ಸಮಾಧಾನ ಬರುವ ರೀತಿಯಲ್ಲಿ ಇವತ್ತು ಉತ್ತರ ಕೊಡುತ್ತೇನೆ ಎಂದು ಹೇಳಿದ್ದಾರೆ. ಆದರೆ ಸಮಾಧಾನ ನಮಗಲ್ಲ, ಈಗ ಇರುವುದು ತೂಗುಗತ್ತಿ, ಇವತ್ತು ಈ ಭಾಗದ

ಜನತೆಯನ್ನು ನೇಣು ಹಾಕುವುದು ಅಂತಿಮ ಕುಣಿಕೆಯಲ್ಲಿದೆ. ಅದನ್ನು ಯಾವ ರೀತಿ ಸರಿಪಡಿಸಿಕೊಳ್ಳುತ್ತಾರೆ, ಸಮಾಧಾನಕರವಾದ ಉತ್ತರ ಏನು ಕೊಡುತ್ತಾರೆಂದು ಕಾದು ನೋಡುತ್ತೇನೆ. ಇವತ್ತಿನ ಈ ಒಂದು ಸಂದರ್ಭದಲ್ಲಿ ಯಾವ ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲೆ ಚರ್ಚೆ ಮಾಡುತ್ತಿದ್ದೇವೆ, ಇವತ್ತು ಗೌರವಾನ್ವಿತ ಸಭಾಧ್ಯಕ್ಷರು ನನಗೆ ಮಾತನಾಡಲು ದೊಡ್ಡ ಅವಕಾಶವನ್ನು ಮಾಡಿಕೊಟ್ಟಿದ್ದೀರಿ, ಮೊದಲನೇ ಸಲ ನನ್ನ ಭಾವನೆಗಳನ್ನು ಇವತ್ತು, ಈ ಒಂದು ವಿರೋಧ ಪಕ್ಷದ ಸ್ಥಾನದಿಂದ ನಮ್ಮ ತಂದೆಯವರು 5–7 ವರ್ಷಗಳ ಕಾಲ ಈ ಜಾಗದಿಂದ ಕೆಲಸವನ್ನು ನಿರ್ವಹಿಸಿದ್ದರು, ಆ ಒಂದು ಸ್ಥಾನದಲ್ಲಿ ನಿಂತು ನನ್ನ ಭಾವನೆಗಳನ್ನು ವ್ಯಕ್ತಪಡಿಸುವುದಕ್ಕೆ ನನಗೊಂದು ಅವಕಾಶ ಕೊಟ್ಟು ಸಂಪೂರ್ಣ ರಕ್ಷಣೆ ಕೊಟ್ಟಿದ್ದೀರಿ, ನಿಮಗೆ ಸಂಪೂರ್ಣವಾಗಿ ನನ್ನ ಕೃತಜ್ಞತೆಗಳನ್ನು ಸಲ್ಲಿಸಿ ಇವತ್ತು ನನ್ನ ಕೆಲವೊಂದು ಭಾವನೆಗಳನ್ನು ವ್ಯಕ್ತಪಡಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

5. ಶಾಸನ ರಚನೆ

ವಿಧೇಯಕದ ಮಂಡನೆಗೆ ಅನುಮತಿ ಕೋರಿಕೆ.

1. ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳ (ಪ್ರವೇಶ ನಿಯಂತ್ರಣ ಮತ್ತು ಶುಲ್ಕ ನಿಗದಿ) (ವಿಶೇಷ ಉಪಬಂಧಗಳು) ವಿಧೇಯಕ, 2013 ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಆರ್.ವಿ.ದೇಶಪಾಂಡೆ [ಉನ್ನತ ಶಿಕ್ಷಣ ಸಚಿವರು] : ಮಾನ್ಯ ಅಧ್ಯಕ್ಷರೆ, 2013ರ ಕನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳ [ಪ್ರವೇಶ ನಿಯಂತ್ರಣ ಮತ್ತು ಶುಲ್ಕ ನಿಗದಿ] (ವಿಶೇಷ ಉಪಬಂಧಗಳು) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವನೆ ಮಂಡಿಸಲಾಗಿದೆ.

ಈಗ ಪ್ರಸ್ತಾವನೆಯನ್ನು ಸಭೆಯ ಮತಕ್ಕೆ ಹಾಕುತ್ತೇನೆ.

ಪ್ರಸ್ತಾವನೆ ಹೀಗಿದೆ: 2013ನೇ ಸಾಲಿನ ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳ [ಪ್ರವೇಶ ನಿಯಂತ್ರಣ ಮತ್ತು ಶುಲ್ಕ ನಿಗದಿ] [ವಿಶೇಷ ಉಪಬಂಧಗಳು]ವಿಧೇಯಕವನ್ನು ಮಂಡಿಸಲು ಸಭೆಯು ಅನುಮತಿ ನೀಡಬೇಕು